ಕರ್ನಾಟಕ ವಿಧಾನಸಭೆ

ಮಂಗಳವಾರ 13ನೇ ಜನವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು : ಈ ದಿನದ ಕಾರ್ಯಕ್ರಮಗಳ ಪಟ್ಟಿ ಪ್ರಕಾರ ಮೊದಲನೇ ಕಾರ್ಯಕ್ರಮ ಸಂತಾಪ ಸೂಚನೆ.

1. ಸಂತಾಪ ಸೂಚನೆ

ವಿಷಯ :- ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರ ನಿಧನ ಕುರಿತು.

ಅಧ್ಯಕ್ಷರು : ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ರಾಷ್ಟ್ರದ ಹಿರಿಯ ಮುತ್ಸದ್ಧಿ, ಸಂಸದೀಯ ಪಟು, ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ, ಅವರು 29ನೇ ಆಗಸ್ಟ್, 1927 ರಂದು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕಿನ ದೊಡ್ಡಮನೆ ಎಂಬಲ್ಲಿ ಜನಿಸಿದ್ದರು. ಸ್ನಾತಕೋತ್ತರ ಹಾಗೂ ಕಾನೂನು ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರಾಗಿದ್ದರು. 1954 ರಿಂದ 1957 ರವರೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. 1957ರಲ್ಲಿ ಯೋಜನೆ ಹಾಗೂ ಅಭಿವೃದ್ಧಿ ಉಪಮಂತ್ರಿಗಳಾಗಿ, 1958ರಿಂದ 1962ರವರೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಶ್ರೀಯುತರು 2ನೇ, 3ನೇ, 4ನೇ, 7ನೇ, 8ನೇ ಮತ್ತು 9ನೇ ವಿಧಾನ ಸಭೆಯ ಸದಸ್ಯರಾಗಿದ್ದು, ಶ್ರೀ ನಿಜಲಿಂಗಪ್ಪ, ಶ್ರೀ ವೀರೇಂದ್ರ ಪಾಟೀಲ್ ಮತ್ತು ಶ್ರೀ ಬಿ.ಡಿ. ಜತ್ತಿಯವರ ಮಂತ್ರಿಮಂಡಲದಲ್ಲಿ ಸಂಪುಟ ದರ್ಜೆ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ತುರ್ತು ಪರಿಸ್ಥಿತಿ ಅವಧಿಯಲ್ಲಿ ಸೆರೆಮನೆಯಲ್ಲಿಡಲ್ಪಟ್ಟಿದ್ದರು. ಶ್ರೀಯುತರು 1983 ರಿಂದ 1988ರ ಅವಧಿಯಲ್ಲಿ ಎರಡು ಬಾರಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರು. ಶ್ರೀಯುತರ ಆಡಳಿತ ಅವಧಿಯಲ್ಲಿ ವಿಕೇಂದ್ರೀಕರಣಕ್ಕೆ ಮಹತ್ವ ನೀಡಿ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳ ಅಸ್ತಿತ್ವಕ್ಕೆ ಬರುವಲ್ಲಿ ಕಾರಣಕರ್ತರಾಗಿದ್ದರು. ಶ್ರೀಯುತರು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಏಳಿಗೆಗಾಗಿ ಅನೇಕ ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿದ್ದರು. ಭಾರತದಲ್ಲಿಯೇ ಪ್ರಪ್ರಥಮವಾಗಿ ಮುಖ್ಯಮಂತ್ರಿಗನ್ನೊಳಗೊಂಡಂತೆ ಎಲ್ಲಾ ಸಚಿವರುಗಳ ವಿರುದ್ಧ ಲಂಚ ಪ್ರಕರಣಗಳನ್ನು ವಿಚಾರಣೆ ಮಾಡುವ ಕುರಿತು ಲೋಕಾಯುಕ್ತವನ್ನು ಸ್ಥಾಪಿಸಿದ್ದರು. ಜನತಾದಳದ ಉಪಾಧ್ಯಕ್ಷರಾಗಿ ಹಾಗೂ ಲೋಕಶಕ್ತಿ ಪಕ್ಷವನ್ನು ಕಟ್ಟುವಲ್ಲಿ ಮುಂದಾಳತ್ವ ವಹಿಸಿ ಆ ಪಕ್ಷದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಜ್ಯುಡಿಷಿಯರಿ ಟುಡೇ ಪಾರ್ಲಿಮೆಂಟ್ ಮತ್ತು ಪೊಲಿಟಿಕಲ್ ಕಲ್ಚರ್, ಕ್ಲೀನ್ ಗೌರ್‍ನಮೆಂಟ್ ಹಾಗೂ ಅನೇಕ ವಿಚಾರಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿದ್ದರು. ಶ್ರೀಯುತರು ಚಲನಚಿತ್ರದಲ್ಲೂ ಸಹ ನಟಿಸಿದ್ದರು. 1972 ರಿಂದ 1978ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ, 1976 ರಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯ ನಿರ್ವಹಿಸಿದ್ದರು. 1977 ರಿಂದ 1983 ರ ವರೆಗೆ ಹಾಗೂ 1996 ರಿಂದ 2002 ರ ವರೆಗೆ ರಾಜ್ಯ ಸಭಾ ಸದಸ್ಯರಾಗಿ ಸೇವೆ

ಸಲ್ಲಿಸಿದ್ದರು. 1998 ರಲ್ಲಿ ಕೇಂದ್ರ ಸರ್ಕಾರದ ವಾಣಿಜ್ಯ ಸಚಿವರಾಗಿ ಹಾಗೂ ಕೇಂದ್ರ ಸರ್ಕಾರದ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 12ನೇ ಜನವರಿ, 2004 ರಂದು ನಿಧನ ಹೊಂದಿದರು. ಇದರ ಜತೆಗೆ 1962ರಲ್ಲಿ ಅವರು ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ನಾನು ಯೂತ್ ಕಾಂಗ್ರೆಸ್‌ನಲ್ಲಿದ್ದೆ. ಅನಂತರ ಅವರಿಗೂ ಮತ್ತು ನನಗೂ ಬಹಳ ಆಪ್ತತೆ ಬಂದಿದ್ದು ಎಂದರೆ ಸುಮಾರು 1974ನೇ ಇಸವಿಯಲ್ಲಿ ಅಂದರೆ ಮೂವತ್ತು ವರ್ಷಗಳ ಹಿಂದೆ ನಾನು ವಿಧಾನ ಪರಿಷತ್‌ನಲ್ಲಿ ಸಭಾಪತಿಯಾಗಿದ್ದಾಗ ಅವರು ವಿರೋಧ ಪಕ್ಷದ ನಾಯಕರಾಗಿದ್ದರು. ಸುಮಾರು ಮೂರು–ನಾಲ್ಕು ವರ್ಷ ನನ್ನೊಡನೆ ಅನೇಕ ಸಲಹೆಗಳನ್ನು ಕೊಟ್ಟು ನಮ್ಮೊಡನೆ ಕಲೆತು ಬೆರೆತು ಹಲವಾರು ವಿಷಯಗಳ ಬಗ್ಗೆ ನನಗೆ ತುಂಬಾ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಸಮಯದಲ್ಲಿ ನಾವು ಅವರನ್ನು ಕಳೆದುಕೊಂಡಿರುವುದು ಬಹಳ ದುಃಖವಾಗುತ್ತದೆ.

†ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ರಾಷ್ಟ್ರದ ಸಾರ್ವಜನಿಕ ಜೀವನದ ಮೇಲೆ ತಮ್ಮದೇ ಆದಂಥ ಪ್ರಭಾವವನ್ನು ಬೀರುವುದರ ಮೂಲಕ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡ ಒಬ್ಬ ಕನ್ನಡ ನೆಲದಿಂದ ಹುಟ್ಟಿಬಂದು ಇಡೀ ದೇಶದ ಗಮನವನ್ನು ತನ್ನೆಡೆಗೆ ಸೆಳೆಯುವ ಮೂಲಕ ಕರ್ನಾಟಕಕ್ಕೂ ಕೂಡ ಅವರ ಪ್ರಭಾವ ಬೀರುವಂತೆ ಶ್ರೀ ರಾಮಕೃಷ್ಣ ಹೆಗಡೆಯವರು ಮಾಡಿದರು. ಅವರ ನಿಧನದಿಂದ ಸಾರ್ವಜನಿಕ ಜೀವನದಲ್ಲಿ ಬಹು ದೊಡ್ಡ ಶೂನ್ಯವನ್ನು ಅವರು ಉಂಟುಮಾಡಿ ಹೋಗಿದ್ದಾರೆ. ಅತ್ಯಂತ ಎತ್ತರದ ನಾಯಕರಾಗಿ ಬೆಳೆಯುವ ಪ್ರಯತ್ನದಲ್ಲಿ ಸಫಲರಾದವರು ಶ್ರೀ ರಾಮಕೃಷ್ಣ ಹೆಗಡೆಯವರು. ಸಿದ್ದಾಪುರದ ದೊಡ್ಡಮನೆ ಕುಟುಂಬ ಸ್ವಾತಂತ್ರ್ಯ ಚಳುವಳಿಯ ಮುಂಚೂಣಿಯಲ್ಲಿ ಇದ್ದಂಥ ಒಂದು ಕುಟುಂಬ. ಒಂದು ಕಾಲದಲ್ಲಿ ಮಹಾತ್ಮಾ ಗಾಂಧಿಯವರಿಂದ ಪ್ರಭಾವಿತರಾಗಿದ್ದರು. ಬ್ರಿಟಿಷರ ವಿರುದ್ಧದ ಸ್ವಾತಂತ್ರ್ಯ ಹೋರಾಟದಲ್ಲಿ ಇಡೀ ಸಂಸಾರವೇ ಭಾಗಿಯಾಗಿತ್ತು ಎನ್ನುವುದನ್ನು ಇತಿಹಾಸ ನೋಂದಾಯಿಸಿಕೊಳ್ಳುತ್ತದೆ. ಅಂತಹ ತ್ಯಾಗಿಗಳ ಕುಟುಂಬದಿಂದ ಅದರ ಕುಡಿಯಾಗಿ ರಾಮಕೃಷ್ಣ ಹೆಗಡೆಯವರು ಸ್ವಾತಂತ್ರ್ಯ ಸಂಗ್ರಾಮದ ಸೆಳೆತಕ್ಕೆ ಸಿಕ್ಕಿದ್ದುದು ಒಂದು ಸ್ವಾಭಾವಿಕ ಬೆಳವಣಿಗೆ ಎಂದು ನಾನು ಭಾವಿಸುತ್ತೇನೆ. ವಿದ್ಯಾರ್ಥಿಯಾಗಿದ್ದಾಗಲೇ ಅವರಿಗೆ ರಾಷ್ಟ್ರದ ಒಟ್ಟಾರೆ ಚಿತ್ರ ಅವರ ಮನಸ್ಸಿನಲ್ಲಿ ಮೂಡಲಿಕ್ಕೆ ಸಾಧ್ಯವಾಯಿತು. ಬನಾರಸ್ ವಿಶ್ವವಿದ್ಯಾಲಯದಲ್ಲಿ ಅವರು ವಿದ್ಯಾರ್ಥಿಯಾದರು. ಆವಾಗಲೇ ವಿದ್ಯಾರ್ಥಿ ಚಟುವಟಿಕೆಗಳಲ್ಲಿ ಅವರು ಪಾತ್ರ ವಹಿಸಿಕೊಂಡಿದ್ದರು ಮತ್ತು ಆ ಹೋರಾಟದ ಕಾಲದಲ್ಲಿಯೂ ಕೂಡ ಅವರು ಬನಾರಸ್ ಕೇಂದ್ರ ಕಾರಾಗೃಹದಲ್ಲಿ ಬಂಧಿತರಾಗಿದ್ದರು. 1942ರ ಚಲೇಜಾವ್ ಚಳುವಳಿಯಲ್ಲಿ ಅವರು ಕ್ರಿಯಾಶೀಲರಾಗಿದ್ದರು. ಅನಂತರ 1957ರಲ್ಲಿ ರಾಜ್ಯಕ್ಕೆ ಬಂದರು. ವಿಧಾನಸಭೆಗೆ ಅವರ ಪ್ರವೇಶವಾಯಿತು. 1957ರಿಂದ 2000ನೇ ಇಸವಿಯವರೆಗೆ ನಮ್ಮ ಎರಡೂ ಸದನಗಳ ಇತಿಹಾಸ ಬರೆಯತಕ್ಕಂಥ ಚರಿತ್ರೆಕಾರರು "ರಾಮಕೃಷ್ಣ ಹೆಗಡೆ ಮತ್ತು ಕರ್ನಾಟಕ ವಿಧಾನಸಭಾ ಪರಂಪರೆ" ಇವೆರಡೂ ಒಂದಕ್ಕೊಂದು ಪೂರಕವಾಗಿ, ಒಂದಕ್ಕೊಂದು ಅನ್ಯೋನ್ಯವಾಗಿ ಬೆಳೆದುಬಂದಿದ್ದನ್ನು ಗುರುತಿಸಬೇಕಾಗುತ್ತದೆ. ನಾನು ಶ್ರೀಮಾನ್ ಹೆಗಡೆಯವರನ್ನು 1962ನೇ ಇಸವಿಯಿಂದ ಬಲ್ಲೆ. ನಮ್ಮ ಸಾರ್ವಜನಿಕ ಜೀವನದಲ್ಲಿ ಎಂದೂ ನಾವಿಬ್ಬರೂ ಒಂದೇ ರಾಜಕೀಯ ಪಂಥಕ್ಕೆ ಸೇರುವುದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ರಾಜಕೀಯ ಜೀವನದ ಉದ್ದಕ್ಕೂ ಎದಿರು ಬದಿರು ಕುಳಿತು ನಾವು

ರಾಜಕಾರಣವನ್ನು ಮಾಡಿದ್ದೆವು. ಆದರೆ ಹತ್ತು ಹಲವಾರು ಮೌಲ್ಯಗಳನ್ನು ನಾನು ಅವರಿಂದ ನನಗಾಗಿ ಮಾಡಿಕೊಳ್ಳುವುಕ್ಕೆ ಪ್ರಯತ್ನ ಮಾಡಿದೆ, ಯಶಸ್ವಿಯಾದೆ ಎಂದು ಹೇಳುವುದಿಲ್ಲ, ಪ್ರಯತ್ನ ಮಾಡಿದೆ. ನಾನು ಶ್ರೀ ದೇವರಾಜ್ ಅರಸು ಅವರ ಸಂಪುಟದಲ್ಲಿ ಪಾರ್ಲಿಮೆಂಟರಿ ಸಚಿವರಾಗಿದ್ದಂಥ ಕಾಲದಲ್ಲಿ ಅವರು ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದರು. ಹಲವಾರು ಸಾರಿ ನಾನು ಮತ್ತು ಅವರು ಬಹಳ ಬಿರುಸಿನ ಮಾತುಗಳನ್ನು ಪರಸ್ಪರ ಆಡಿದ್ದೇವೆ. ಆದರೆ ದಿನದ ಕೊನೆಯ ಹೊತ್ತಿಗೆ ಆ ಕಹಿ ಇರುತ್ತಿರಲಿಲ್ಲ. ಅದು ಶ್ರೀ ಹೆಗಡೆಯವರ ಅತ್ಯಂತ ದೊಡ್ಡ ಗುಣಗಳಲ್ಲಿ ಒಂದು. ರಾಜ್ಯದ ಮುಖ್ಯಮಂತ್ರಿಯಾಗಿ ಈ ರಾಜ್ಯಕ್ಕೆ ವಿಶೇಷವಾದಂಥ ಗೌರವವನ್ನು ಅವರು ತಂದುಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಅವರು ತಂದ ಸುಧಾರಣೆಗಳಲ್ಲಿ ಕೆಲವು ಸುಧಾರಣೆಗಳ ಬಗ್ಗೆ ತಾವು ಸದನದ ಗಮನವನ್ನು ಸೆಳೆದಿದ್ದೀರಿ. ಭ್ರಷ್ಟಾಚಾರದ ವಿರುದ್ಧ ಬಹಳ ದೊಡ್ಡ ಸಂಘರ್ಷಕ್ಕೆ ಹೆಗಡೆಯವರು ಇಳಿದಿದ್ದರು. ಇವತ್ತು ಲೋಕಾಯುಕ್ತ ಜನರ ಪ್ರಶಂಸೆಗೆ, ಮಾನ್ಯ ಸಭಾಸದಸ್ಯರ ಪ್ರಶಂಸೆಗೆ ಪಾತ್ರವಾಗಿದ್ದರೆ ಅದಕ್ಕೆ ಅಡಿಪಾಯ ಹಾಕಿದಂಥವರು, ಅದಕ್ಕೆ ಬುನಾದಿಯನ್ನು ಕಲ್ಪಿಸಿ ಕೊಟ್ಟಂಥವರು ಮಾನ್ಯ ರಾಮಕೃಷ್ಣ ಹೆಗಡೆಯವರು ಎನ್ನತಕ್ಕಂಥಾದ್ದನ್ನು ನಾವು ಬಹಳ ಅಭಿಮಾನದಿಂದ ನೆನೆಸಿಕೊಳ್ಳಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಪಂಚಾಯತ್ ರಾಜ್ ವಿಕೇಂದ್ರೀಕರಣ, ಪಂಚಾಯತ್‌ಗಳಿಗೆ ಹೆಚ್ಚು ಅಧಿಕಾರ ಕೊಡಬೇಕು ಎನ್ನತಕ್ಕಂಥ ಚಿಂತನೆಗಳು ಏನು ಅರಳುತ್ತಿವೆ, ಆ ಚಿಂತನೆಗಳು ಏನು ಇವತ್ತು ಜಾರಿಯಲ್ಲಿವೆ ಆ ಚಿಂತನೆಗಳನ್ನು ಪ್ರಾರಂಭ ಮಾಡಿದ ಕೆಲವೇ ಕೆಲವು ಸಾರ್ವಜನಿಕ ನಾಯಕರ ಪೈಕಿ ಮಾನ್ಯ ರಾಮಕೃಷ್ಣ ಹೆಗಡೆಯವರು ಎನ್ನತಕ್ಕಂಥಾದ್ದನ್ನೂ ಕೂಡ ನಾವು ಸ್ಮರಿಸಬೇಕಾಗಿದೆ. ದುರ್ಬಲ ವರ್ಗಗಳ ಪರ ವಿಶೇಷವಾದಂತಹ ಕಾರ್ಯಕ್ರಮಗಳನ್ನು ರೂಪಿಸಿದರು. ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಹಾಗೂ ಸಮವಸ್ತ್ರಗಳನ್ನು ವಿತರಣೆ ಮಾಡತಕ್ಕಂಥಾದ್ದು, ವಿಧವಾ ಮಾಸಾಶನ, ಗರ್ಭಿಣಿ ಭತ್ಯೆ, ಶಾಲಾ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಬಸ್ ಪಾಸ್, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳು ಮೊದಲಾದ ಕಾರ್ಯಕ್ರಮಗಳು ಅವರ ಆಡಳಿತದ ಯಶಸ್ಸಿಗೆ ಜ್ವಲಂತ ದಾಖಲೆಗಳಾದವು. ರಾಜಕಾರಣ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಹಲವಾರು ಬಾರಿ ಜಿಗುಪ್ಸೆಯನ್ನು ತಂದಿತ್ತು. ಒಂದೆರಡು ಮೂರು ಬಾರಿ ಅವರು ಮುಖ್ಯಮಂತ್ರಿ ಸ್ಥಾನದಿಂದ ರಾಜೀನಾಮೆಯನ್ನು ಕೊಡತಕ್ಕಂಥ ಪ್ರಯತ್ನಗಳನ್ನು ಮಾಡಿದರು. ಅಂದರೆ ಅವರು ನಂಬಿದ್ದ ಮೌಲ್ಯಗಳಿಗೂ ಕೆಲವೊಂದು ಸಾರಿ ಅನಿವಾರ್ಯವಾಗಿ ಅನುಸರಿಸಬೇಕಾಗಿರತಕ್ಕಂಥ ಮಾರ್ಗಗಳ ಬಗ್ಗೆಯೂ ಕೂಡ ಅವರಲ್ಲಿ ಒಂದು ರೀತಿಯ ಮಾನಸಿಕ ಸಂಘರ್ಷ ಪ್ರಾರಂಭವಾಗಿತ್ತು, ಆ ಕಾರಣವೇ ಅವರಿಗೆ ಕೆಲವೊಂದು ಸಾರಿ ತೀವ್ರ ಜಿಗುಪ್ಸೆಯಾಗಿ ನನಗೆ ರಾಜಕಾರಣ ಬೇಡ ಎಂದು ಹೇಳಿ ದೂರ ಹೋಗಲಿಕ್ಕೆ ಅವರು ಪ್ರಯತ್ನ ಪಟ್ಟರು ಹಾಗೆ ಎಂದು ಹೇಳಿ ನಾನು ಅವರನ್ನು ಬಹಳ ದೂರದಿಂದ ನೋಡಿ ವಿಶ್ಲೇಷಣೆ ಮಾಡಿದ್ದೇನೆ. ನನ್ನ ಮತ್ತು ಅವರ ಸಂಬಂಧ ವ್ಯಕ್ತಿಗತವಾದಂತಹ ಸಂಬಂಧ. 1967ನೇ ಇಸವಿಯಲ್ಲಿ ನಾನು ಪ್ರಜಾ ಸಮಾಜವಾದಿ ಪಕ್ಷದಲ್ಲಿ ಇದ್ದಂತಹ ಕಾಲದಲ್ಲಿ ಅವರು ವಿಶೇಷ ಪ್ರಯತ್ನಗಳನ್ನು ಮಾಡಿದ್ದರು. ಅವರು ನನ್ನನ್ನು ಕಾಂಗ್ರೆಸ್‌ಗೆ ಕರೆಸಿಕೊಳ್ಳಬೇಕು ಎಂದು ಹೇಳಿ, ಮೊಟ್ಟಮೊದಲು ರಚನೆಯಾದಂತಹ ಸ್ಟೇಟ್ ಪ್ಲಾನಿಂಗ್ ಬೋರ್ಡ್‌ನ ಸದಸ್ಯನರನ್ನಾಗಿ ವಿರೋಧಪಕ್ಷದ ಪರವಾಗಿ ಮಾಡಿದರು. ಹೀಗೆ ಪ್ರತಿಭೆಯನ್ನು ಗುರುತಿಸಲಿಕ್ಕೆ ಅವರು ಪ್ರಯತ್ನಮಾಡಿದ್ದರು, ಇವತ್ತು ಜನತಾ ದಳದಲ್ಲಿ ಹಲವಾರು ನಾಯಕರುಗಳನ್ನು ಸೃಷ್ಟಿ ಮಾಡಿದ್ದರೆ

ಅದಕ್ಕೆ ಶ್ರೀ ರಾಮಕೃಷ್ಣ ಹೆಗಡೆಯವರ ವಿಶೇಷವಾದ ಕೊಡುಗೆ ಇದೆ. ಅದಕ್ಕೆ ಏನು ಎಂದು ಹೇಳಿದರೆ ಎನ್ನತಕ್ಕಂಥಾದ್ದಕ್ಕೆ ಹಲವಾರು ಉದಾಹರಣೆಗಳನ್ನು ಕೊಡುತ್ತೇನೆ; ಜೈಲಿಗೆ ಹೋದರು; ನಾನು ಆಗಲೇ ಹೇಳಿದ ಹಾಗೆ ಅವರು ಬನಾರಸ್ ಜೈಲ್ ನೋಡಿದ್ದರು, ಬೆಂಗಳೂರು ಸೆಂಟ್ರಲ್ ಜೈಲ್ ನೋಡಿದ್ದರು, ಅವರು ಪೆರೋಲ್ ಮೇಲೆ ಬರಲಿಲ್ಲ. ಅದು ಅವರ ವಿಶೇಷ ಕ್ಯಾರೆಕ್ಟರ್, ಒಬ್ಬ ಮನುಷ್ಯನ ಕ್ಯಾರೆಕ್ಟರ್‌ನ್ನು ನಾವು ಗುರುತಿಸಲಿಕ್ಕೆ ಈ ಕೆಲವು ಮೈಲಿಗಲ್ಲುಗಳು ನಮಗೆ ಆಧಾರವಾಗುತ್ತವೆ. ಧೀರೋದ್ದಾತ್ತವಾದಂತಹ ಹೋರಾಟವನ್ನು ಮಾಡಿದರು. ಆ ಹೋರಾಟದಲ್ಲಿ ಯಶಸ್ಸನ್ನು ಪಡೆದರು. ಆ ಯಶಸ್ಸಿನ ಉತ್ತುಂಗ ಶಿಖರವನ್ನು ಕೂಡ ಮುಟ್ಟಿದರು. ಆನಂತರ ಪ್ರಪಾತಕ್ಕೂ ಕೂಡ ಬಿದ್ದರು. ಸನ್ನಿವೇಶಗಳ ಪಿತೂರಿ, ವ್ಯಕ್ತಿಗಳ ಪಿತೂರಿ, ಪಿತೂರಿಗಳಿಗೆ ಶ್ರೀ ರಾಮಕೃಷ್ಣ ಹೆಗಡೆಯವರು ಬಲಿಯಾದರು, ಆದರೆ ಆತ್ಮ ವಿಶ್ವಾಸವನ್ನು, ಆತ್ಮ ಗೌರವವನ್ನು ಎಂದೂ ಅವರು ಬಲಿ ಕೊಡಲಿಲ್ಲ. ನನಗೆ ಸ್ಪಷ್ಟವಾದಂತಹ ಜ್ಞಾಪಕ 1998ನೆ ಇಸವಿಯಲ್ಲಿ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರು ಪ್ರಧಾನ ಮಂತ್ರಿಗಳಾದರು. ನಾವು ಸಾಮಾನ್ಯವಾಗಿ ನಿರೀಕ್ಷೆ ಮಾಡಿದ್ದು ಅವರು ಕೇಂದ್ರ ಮಂತ್ರಿಮಂಡಲದಲ್ಲಿ ಸದಸ್ಯರಾಗುತ್ತಾರೆಂದು, ಆದರೆ ಅವರು ಆಗಲಿಲ್ಲ, ಆಗ ನಾನು ರಾಜ್ಯಸಭಾ ಸದಸ್ಯನಾಗಿದ್ದೆ, ಆಗ ಅವರನ್ನು ಹೋಗಿ ಕಂಡೆ, ಆಗ ಅವರು ಬಹಳ ನೊಂದು ಹೇಳಿದರು, ನಾನು ರಾಜಕಾರಣಕ್ಕೆ ಬರಬಾರದಾಗಿತ್ತೇನೋ? ಬಂದು ನಾನು ಒಂದು ದೊಡ್ಡ ತಪ್ಪು ಮಾಡಿದೆ, ಹಾಗೆ ಎಂದು ಹೇಳಿದರು. ಆನಂತರ ಕೊನೆಯ ವರ್ಷಗಳು ಬಹಳ ಸಂಕಟದ ವರ್ಷಗಳು ಅವರಿಗೆ, ರಾಜಕೀಯವಾಗಿ ಬಹಳ ಸಂಕಟದ ವರ್ಷಗಳಾಯಿತು, ವ್ಯಕ್ತಿಗತ ಜೀವನದಲ್ಲಿ ಕೂಡ ತಮ್ಮ ಆರೋಗ್ಯವನ್ನು ಕಳೆದುಕೊಂಡರು. ಅವರು ಸಾರ್ವಜನಿಕ ಜೀವನದಲ್ಲಿ ಕೂಡ ಶ್ರೀಗಂಧದಂತೆ ತೇದು, ತೇದು ತಮ್ಮ ಆರೋಗ್ಯವನ್ನು ಅವರು ಹಾಳು ಮಾಡಿಕೊಳ್ಳಲಿಕ್ಕೆ ಪ್ರಾರಂಭ ಮಾಡಿದರು. ತಾವು ಅಪ್ಪಣೆ ಕೊಡಿಸಿದಿರಿ, ಅವರು ಉತ್ತಮ ಸಂಸದೀಯ ಪಟುಗಳು ಹಾಗೆ ಎಂದು ಹೇಳಿ, ಅವರ ಎದುರು ನಿಂತು ವಾದ ಮಾಡಿ ಆ ವಾದದಲ್ಲಿ ಜಯಿಸತಕ್ಕಂಥಾದ್ದು, ಸಾಧ್ಯವಾಗುತ್ತಿರಲಿಲ್ಲ. ಅಂತಹ persuasive nature ಇತ್ತು, ಅರೆಸ್ಟಿಂಗ್ ಪರ್ಸನಾಲಿಟಿ ಇತ್ತು, ಅವರ ಮಾತುಗಳನ್ನು ಕೇಳಬೇಕು ಎನ್ನತಕ್ಕಂಥ ಒಂದು ಕಂಪೆಲಿಂಗ್, ಉಮೇದು ಇತ್ತು. ಅವರು ಓದಿದ್ದರು, ಓದುತ್ತಿದ್ದರು, ಬರೆದರು, ಮೊದಲು ವಿಶ್ವ ಕನ್ನಡ ಸಮ್ಮೇಳನವನ್ನು ಮಾಡಿದರು. ಕನ್ನಡ ನಾಡು ಮತ್ತು ನುಡಿ ಬಗ್ಗೆ ವ್ಯಾಮೋಹಿತರಂತೆ ಮಾತನಾಡುತ್ತಿದ್ದ ಶ್ರೀ ಹೆಗಡೆ ಅವರ ಕಾಲದಲ್ಲಿ ಮೊದಲ ವಿಶ್ವ ಕನ್ನಡ ಸಮ್ಮೇಳನ ನಡೆಯಿತು. ಸುಸಂಸ್ಕೃತರು, ಸ್ನೇಹಶೀಲರು, ಸಾಮಾನ್ಯ ವ್ಯಕ್ತಿಯಿಂದ ಬುದ್ಧಿಜೀವಿಯವರೆಗೆ ಸಾಹಿತಿಯಿಂದ ಮತ್ತಿತರ ಕಲಾ ಪ್ರಾಕಾರಗಳಲ್ಲಿ ಪರಿಣಿತರ ಜೊತೆಯಲ್ಲಿ ನಿಕಟವಾದಂತಹ ಸಹವಾಸವನ್ನು ಅವರು ಪಡೆದುಕೊಂಡಿದ್ದರು. ಏಕೆಂದರೆ ನಮಗೆ ಅದಕ್ಕೆ ಸಮಯವೇ ಇರುವುದಿಲ್ಲ. ಆದರೆ ಶ್ರೀ ಹೆಗಡೆಯವರ ವ್ಯಕ್ತಿತ್ವಕ್ಕೆ ವಿಶೇಷವಾದ ಮೆರಗನ್ನು ತಂದು ಕೊಡತಕ್ಕಂಥಾದ್ದು ಅವರು ಮತ್ತು ಸಾಹಿತ್ಯ, ಕಲೆ ಮತ್ತಿತ್ತರ ಪ್ರಾಕಾರಗಳಲ್ಲಿ ಅವರು ಪಡೆದಿದ್ದ ಅಗಾಧವಾದಂತಹ ಒಂದು ಸ್ನೇಹ, ಗಾಲ್ಫ್ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಅದಕ್ಕೆ ವಿಶೇಷವಾದ ಹಣವನ್ನು ಕೊಡುತ್ತಿದ್ದರು. ಇದರ ಒಟ್ಟಾರೆ ವಿಶ್ಲೇಷಣೆ ಏನು ಎಂದು ಹೇಳಿದರೆ ನಮ್ಮ ದೇಶದಲ್ಲಿ ಈ ಆರ್ಥಿಕ ಬೆಳವಣಿಗೆಗಳು, ಯೋಜನೆಗಳು ಇವುಗಳ ಬಗ್ಗೆ ವಿಶೇಷವಾಗಿ ರಾಜ್ಯಗಳ ಗಮನವನ್ನು ಹರಿಸಲಿಕ್ಕೆ ಹೆಗಡೆಯವರು ಪ್ರಪ್ರಥಮವಾಗಿ ಪ್ರಯತ್ನಪಟ್ಟರು. ಅವರು ಮುಖ್ಯಮಂತ್ರಿಗಳಾಗುವವರೆಗೂ ಕೂಡ ಕೇಂದ್ರದವರು ಹೇಳಿದ್ದೇ ನಮಗೆ ವೇದವಾಕ್ಯವಾಗಿತ್ತು. ಆದರೆ ಮೊಟ್ಟಮೊದಲ ಬಾರಿಗೆ ಒಬ್ಬ

ಮುಖ್ಯಮಂತ್ರಿಗಳು ಇತರ ಮುಖ್ಯಮಂತ್ರಿಗಳನ್ನು ಸೇರಿಸಿ ಏಕೆ ಏನು ಏಕೆ ಆಗಬಾರದು ಎನ್ನುವುದರ ಬಗ್ಗೆ ಅವರು ಚಿಂತನೆಯನ್ನು ಪ್ರಾರಂಭ ಮಾಡಿದರು. ಆದುದರಿಂದ ಅವರಿಗೆ ನಾವು ಈ ದಿವಸ ನಮ್ಮ ಗೌರವವನ್ನು ಕೊಡತಕ್ಕಂಥಾದ್ದು, ಆ ಗೌರವ ಒಂದು ರಚನಾತ್ಮಕವಾದಂತಹ ದೃಷ್ಟಿಯಲ್ಲಿ ಅದನ್ನು ನಾವು ಚಾನಲೈಜ್ ಮಾಡಬೇಕು ಎನ್ನುವ ಕಾರಣ ಶ್ರೀ ರಾಮಕೃಷ್ಣ ಹೆಗಡೆಯವರ ಹೆಸರಿನಲ್ಲಿ ಒಂದು "Chair in economic decentralization" ಅದನ್ನು ಯಾವುದಾದರೊಂದು ವಿಶ್ವವಿದ್ಯಾನಿಲಯದಲ್ಲಿ ಅವರ ಹೆಸರಿನಲ್ಲಿ ಒಂದು ಛೇರ್ ಮೂಲಕ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದರ ಬಗ್ಗೆ ಯೋಚನೆ ಮಾಡಬೇಕು ಇದರ ಬಗ್ಗೆ ಪ್ರಬಂಧಗಳನ್ನು ಬರೆಯಬೇಕು, ಇದರ ಬಗ್ಗೆ ಇನ್ನೂ ಹೆಚ್ಚು ಆಳವಾದ ಅಧ್ಯಯನಕ್ಕೆ ಇದು ಒಂದು ಸಮರ್ಥವಾದಂತಹ ಸೆಕ್ಟಾರ್ ಆದ್ದರಿಂದ, ಅವರ ಹೆಸರಿನಲ್ಲಿ ಈ ಒಂದು ಛೇರ್‌ನ್ನು ಸ್ಥಾಪನೆ ಮಾಡಬೇಕು ಎನ್ನುವಂತಹ ಒಂದು ನಿರ್ಧಾರವನ್ನು ನಾನು ಈ ಸದನದಲ್ಲಿ ಅನೌನ್ಸ್ ಮಾಡುತ್ತೇನೆ.

ಯಾವ ವಿಶ್ವವಿದ್ಯಾನಿಲಯದಲ್ಲಿ ಎನ್ನತಕ್ಕಂಥಾದ್ದನ್ನು ಮುಂದಿನ ದಿನಗಳಲ್ಲಿ ನಾವು ತೀರ್ಮಾನ ಮಾಡುತ್ತೇವೆ. ಮಾನ್ಯ ಹೆಗಡೆಯವರು ನಮಗೆಲ್ಲರಿಗೂ ಗೊತ್ತು, ಇಡೀ ಸದನಕ್ಕೆ ಗೊತ್ತು. ಅವರು ಇತ್ತೀಚಿನ ತಿಂಗಳುಗಳಲ್ಲಿ ತೀವ್ರ ಖಾಯಿಲೆಯಿಂದ ನರಳುತ್ತಾ ಇದ್ದರು. ನಾನು, ಅವರು ಖಾಯಿಲೆ ಬಿದ್ದಂಥ ಕಾಲದಲ್ಲಿ 3–4 ಬಾರಿ ಭೇಟಿ ಮಾಡಿದ್ದೆ. ನನ್ನ ಅವರ ಭೇಟಿಗೆ ಬೇಕಾದಷ್ಟು ಇಂಟರ್‌ಪ್ರಿಟೇಷನ್ಸ್ ಬಂದಿದ್ದರೂ ಕೂಡ, ಒಬ್ಬ ಆತ್ಮೀಯ ಸ್ನೇಹಿತರನ್ನು ನಾವುಗಳೆಲ್ಲರೂ ಕೂಡ ಕಳೆದುಕೊಂಡಿದ್ದೇವೆ. ಕೇವಲ ನನಗೆ ಮಾತ್ರ ಆತ್ಮೀಯರೆಂದು ಹೇಳಿಕೊಳ್ಳತಕ್ಕಂಥಾದ್ದಲ್ಲ. ಅವರಿಗೆ ಆತ್ಮೀಯರಾಗಿದ್ದಂಥ ಬಹಳ ಜನ ಅಲ್ಲಿ ಕುಳಿತಿದ್ದಾರೆ. ಆದರೆ, ನಮ್ಮಲ್ಲಿಯೂ ಕೂಡ ಬಹಳ ಜನ ಅವರಿಗೆ ಆತ್ಮೀಯರಾಗಿದ್ದರು. ರಾಜಕಾರಣದಲ್ಲಿ ದ್ವೇಷ ಅಸೂಯೆಗಳಿಗೆ ಅವಕಾಶವಿಲ್ಲವೆನ್ನತಕ್ಕ ಸರ್ವ ಕಾಲದ ಒಂದು ಸತ್ಯವನ್ನು, ಅವರು ಆದರ್ಶವಾಗಿ ನಮಗೆ ಬಿಟ್ಟುಕೊಟ್ಟು ಹೋಗಿದ್ದಾರೆ. ಇವತ್ತು ನಾನು ಒಂದು ಮಾತು ಹೇಳಬಹುದಾದರೆ, 1983ನೇ ಇಸವಿಯಲ್ಲಿ ಅವರ ಮಂತ್ರಿಮಂಡಲವನ್ನು ತೆಗೆದು ಹಾಕಬೇಕೆಂಬ ಪ್ರಯತ್ನಗಳನ್ನು ಮಾಡಿದವರಲ್ಲಿ ನಾನೂ ಒಬ್ಬ. ಆದರೆ, ಅಂದು ನನ್ನನ್ನು ಅದಕ್ಕೆ ಗುರಿ ಮಾಡಲಿಲ್ಲ. ಅವರು ಎಂದೂ ಕೂಡ ನೊಂದವರಲ್ಲ. ನಿಮ್ಮ ರಾಜಕೀಯ ನೀವು ಮಾಡಿದ್ದೀರಿ ಎನ್ನುತ್ತಿದ್ದರು. ಒಂದು ಸಾರಿ, ನಾವು ಪಾರ್ಲಿಮೆಂಟ್ ಮೆಂಬರ್ ಆಗಿದ್ದಾಗ ಅವರು ಮತ್ತು ನಾನು ಡೆಲ್ಲಿಯಿಂದ ಬರುತ್ತಾ ಇದ್ದೆವು. ಆಗ, ಅವರು ಹೇಳಿದರು. ನಮ್ಮನ್ನು ನೋಡಬಾರದು ಎಂದು ನಿಮ್ಮ ಲೀಡರ್ ಏನಾದರೂ ಹೇಳಿಕೊಟ್ಟಿದ್ದಾರೆಯೇ, ನೀವು ನಮ್ಮ ಮನೆಗೇ ಬರುವುದಿಲ್ಲವಲ್ಲಾ ಎಂದರು. ಆಗ, ನಾನು ಬರುತ್ತೇನೆ ಎಂದೆ. ನಾಳೆ ಸಾಯಂಕಾಲ ಬನ್ನಿ ಎಂದರು. ಮಾರನೇದಿನ ಸಾಯಂಕಾಲ ಅವರ ಮನೆಗೆ ಹೋದೆ. ಹೋಗುವಾಗ ಹಸ್ತಲಾಘವ ಕೊಟ್ಟು, ಅವರ ಜೊತೆಯಲ್ಲಿ ಯಾರೋ ಇದ್ದರು, ಅವರನ್ನು ಅಲ್ಲಿ ಎಲ್ಲಾದರೂ ಅವರ ಮನೆ ಸಮೀಪ ಬಿಟ್ಟುಬಿಡಿ ಎಂದರು. ಆಗ ನಾನು ಹೇಳಿದೆ. ನಿಮ್ಮ ಮನೆಗೆ, ನಾನು ನಮ್ಮ ಲೀಡರ್‌ನ್ನು ಕೇಳದೇ ಬಂದಿದ್ದೇನೆ ಎಂದೆ. ಅವರು ಬಹಳ ಸ್ನೇಹಮಯಿ. ಒಂದು ಸಾರಿ ಯಾರಿಗೋ ಟೆಲಿಫೋನ್ ಬೇಕಾಗಿತ್ತು. ನಾನು ಇಲ್ಲಿ ಟೆಲಿಫೋನ್ ಅಡ್ವೈಸರಿ ಕಮಿಟಿ ಮೆಂಬರ್ ಆಗಿದ್ದೆ. ಆಗ ಫೋನ್ ಮಾಡಿದರು. ಕೃಷ್ಣ ಅವರೇ, ಯಾರೋ ಒಬ್ಬರು ಟೆಲಿಫೋನ್‌ಗೆ ಬಂದಿದ್ದರು, ಅವರಿಗೆ ಟೆಲಿಫೋನ್ ಕೊಡಿಸಬೇಕು ಎಂದು ಹೇಳಿದರು. ಆಗ, ಅವರದು ವೆಯ್ಟಿಂಗ್ ಲಿಸ್ಟ್ ಇತ್ತು. ಆದರೆ, ಅವರು ಹೆಗಡೆಯವರನ್ನು ನೋಡಿದಾಗ,

ಈ ಬಗ್ಗೆ ನಾನು ಕೃಷ್ಣ ಒಬ್ಬರಿಗೆ ಮಾತ್ರ ಹೇಳಬಲ್ಲೆ, ಇನ್ನು ಯಾರಿಗೂ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಫೋನ್ ಮಾಡಿದೆ, ನೀವು ಸಿಕ್ಕಿದಿರಿ ಇವರಿಗೆ ಸಹಾಯ ಮಾಡಿ ಎಂದರು. ಇಂದು ವ್ಯಕ್ತಿಗತವಾಗಿ ಒಬ್ಬ ಆತ್ಮೀಯ ಸ್ನೇಹಿತ, ಮತ್ತು ಆದರ್ಶದ ಒಬ್ಬ ಸ್ನೇಹಿತರನ್ನು ನಾವು ಕಳೆದುಕೊಂಡಿದ್ದೇವೆ. ಅವರ 75ನೇ ವರ್ಷದ ಸಭೆಗೆ ನಾವೆಲ್ಲಾ ಹೋಗಿದ್ದೆವು. ಅವತ್ತು ಬಹಳ ಉದ್ವೇಗದಿಂದ ಮಾತನಾಡಿದರು. ಹೃದಯದ ಅಂತರಾಳದಿಂದ ಕೆಲವು ಮಾತುಗಳು; ಅವರ ಮಾತಿನಲ್ಲಿ ದುಗುಡ ಇತ್ತು, ಸಂಕಟ ಇತ್ತು. ಆದರೂ, ಆದರ್ಶವನ್ನು ಮಾತ್ರ ಎಂದೂ ಒತ್ತೆ ಇಡಲಿಲ್ಲ, ಬಿಟ್ಟುಕೊಡಲಿಲ್ಲ. ಇದು ಶ್ರೀ ರಾಮಕೃಷ್ಣ ಹೆಗಡೆಯವರು ನನಗೆ ಬಿಟ್ಟುಕೊಟ್ಟಿರತಕ್ಕಂಥ ಲೆಗೆಸಿ. ಅಂತಹ ಲೆಗೆಸಿಯನ್ನು ನಾವು, ನೀವು ಮುಂದುವರಿಸಬೇಕು. ಕೇವಲ ಅವರ ಬಂಧುವರ್ಗಕ್ಕೆ ಸಂತಾಪ ಹೇಳುವುದಲ್ಲ. ಏಕೆಂದರೆ, ಅಖಂಡ ದೇಶದಲ್ಲಿ ಅವರ ಬಂಧುವರ್ಗ ಇತ್ತು. ಅಖಂಡ ಕರ್ನಾಟಕದಲ್ಲಿ ಅವರ ಬಂಧುವರ್ಗ ಇತ್ತು. ತಾವು ಮಂಡಿಸಿರುವ ನಿರ್ಣಯಕ್ಕೆ ನನ್ನ ಪರವಾಗಿ ಮತ್ತು ನಮ್ಮ ಪಕ್ಷದ ಪರವಾಗಿ ಸಮರ್ಥನೆ ಮಾಡಿ, ಹೆಗಡೆಯವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೇ, ತಾವು ಮಂಡನೆ ಮಾಡಿದಂಥ ಸಂತಾಪ ಸೂಚನೆಗೆ ಬೆಂಬಲ ಸೂಚಿಸಿ, ಮಾನ್ಯ ರಾಮಕೃಷ್ಣ ಹೆಗಡೆಯವರು ರಾಷ್ಟ್ರದ ಒಬ್ಬ ಧೀಮಂತ ಮತ್ತು ಮುತ್ಸದ್ದಿ ರಾಜಕಾರಣಿಯಾಗಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಹೇಳುವಂಥಾದ್ದು ಬಹಳ ಇದೆ. ಅವರು ಮಾಡಿದಂಥ ಕೆಲಸ, ರಾಜ್ಯದ ರಾಜಕಾರಣ, ರಾಷ್ಟ್ರದ ರಾಜಕಾರಣ, ಎರಡಕ್ಕೂ ಬಹಳವಾದ ರಚನಾತ್ಮಕವಾದ ಕೊಡುಗೆಯನ್ನು ಕೊಟ್ಟಿದ್ದಾರೆಂದು ಹೇಳಬಹುದು. ರಾಷ್ಟ್ರದ ರಾಜಕಾರಣಕ್ಕೆ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಂಥ ರಾಜ್ಯದ ಕೆಲವೇ ರಾಜಕಾರಣಿಗಳಲ್ಲಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರೂ ಒಬ್ಬರು. ಅವರು ಕಾಂಗ್ರೆಸ್ಸಿನ ವಿರೋಧಿ ರಾಜಕಾರಣದಲ್ಲಿ ಸಕ್ರಿಯವಾಗಿ ಇದ್ದಂಥಾದ್ದನ್ನು ನಾವು ನೋಡಿದ್ದೇವೆ. ತುರ್ತು ಪರಿಸ್ಥಿತಿಯ ಸಂದರ್ಭ, ಆ ತುರ್ತು ಪರಿಸ್ಥಿತಿಯ ವಿರೋಧಿಯಾಗಿ ಮಾನ್ಯ ಜಯಪ್ರಕಾಶ್ ನಾರಾಯಣರು ಏನು ಒಂದು ಅಂಧೋಳನವನ್ನು ಕೈಗೊಂಡಿದ್ದರು ಅದರಲ್ಲಿ ಸಕ್ರಿಯವಾಗಿ ಮಾನ್ಯ ಹೆಗಡೆಯವರೂ ಭಾಗವಹಿಸಿದ್ದರು. ಮತ್ತು ಆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು, ಮಾನ್ಯ ಲಾಲ್‌ಕೃಷ್ಣ ಅದ್ವಾನಿಯರ ಜೊತೆ ಜೈಲು ವಾಸವನ್ನು ಅವರು ಅನುಭವಿಸಿದರು. ಬಹುಶಃ ಆ ಜೈಲು ವಾಸದ ಸಂದರ್ಭದಲ್ಲೇ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರಿಗೆ ಮತ್ತು ಮಾನ್ಯ ಲಾಲ್‌ಕೃಷ್ಣ ಅದ್ವಾನಿಯವರ ನಿಕಟವಾದ ಸಂಪರ್ಕ ಬಂದಿದ್ದನ್ನು ನಾವು ಇಲ್ಲಿ ಗಮನಿಸಬಹುದು. 1983 ನಮ್ಮ ರಾಜ್ಯದ ರಾಜಕೀಯ ಇತಿಹಾಸದಲ್ಲಿ, ನಾವೇನು ಟರ್ನಿಂಗ್ ಪಾಯಿಂಟ್ ಎಂದು ಹೇಳುತ್ತೇವೆ ಆ ರೀತಿ ಟರ್ನಿಂಗ್ ಪಾಯಿಂಟ್. ಏಕೆಂದರೆ 1983ರವರೆಗೂ ರಾಜ್ಯದಲ್ಲಿ ಕಾಂಗ್ರೆಸ್‌ನ್ನು ಸೋಲಿಸುವುದಕ್ಕಾಗಿರಲಿಲ್ಲ. ಕಾಂಗ್ರೆಸ್ಸೇತರ ಸರ್ಕಾರ ಬಂದಿರಲಿಲ್ಲ. ಆ ಸಂದರ್ಭದಲ್ಲಿ, 1983ರಲ್ಲಿ ಜನತಾ ಪಕ್ಷ ಮತ್ತು ಕ್ರಾಂತಿದಳ ಇವೆಲ್ಲಾ ಕೂಡಿಕೊಂಡು ಏನೊಂದು ಹೋರಾಟವನ್ನು ಮಾಡಿದರು; ಆ ಸಂದರ್ಭದಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಕಾಂಗ್ರೆಸ್ಸೇತರ ಪ್ರಥಮ ಮುಖ್ಯಮಂತ್ರಿಗಳಾಗಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಅಧಿಕಾರವನ್ನು ಸ್ವೀಕಾರ ಮಾಡಿದರು. ಆ ಸಂದರ್ಭದ ಒಂದು ಕ್ಷಣವನ್ನು ನಾನು

ನೆನೆಸಿಕೊಳ್ಳುತ್ತಿದ್ದೇನೆ. ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದರು. 1983ರಲ್ಲಿ 18 ಜನ ಭಾರತೀಯ ಜನತಾ ಪಾರ್ಟಿ ಸದಸ್ಯರು ಆರಿಸಿ ಬಂದಿದ್ದರು. ಇಲ್ಲಿ ಕಾಂಗ್ರೆಸ್ಸೇತರ ಸರ್ಕಾರ ಬರುತ್ತದೆಂದು, ಅದರ ಅಸ್ತಿತ್ವವನ್ನು ತರಲಿಕ್ಕೆ ಸನ್ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು ಡೆಲ್ಲಿಯಿಂದಲೇ ಒಂದು ಘೋಷಣೆಯನ್ನು ಮಾಡಿದರು. ಕಾಂಗ್ರೆಸ್ಸೇತರ ಸರ್ಕಾರ ಬಂದು, ಇವರು ಪ್ರಥಮ ಮುಖ್ಯಮಂತ್ರಿಯಾಗಿ ಬರಬೇಕು. ಅದಕ್ಕಾಗಿ ನಮ್ಮ 18 ಜನ ಭಾರತೀಯ ಜನತಾ ಪಾರ್ಟಿ ಶಾಸಕರೇನಿದ್ದಾರೆ, ಅನ್ ಕಂಡೀಷನಲ್ ಸಪೋರ್ಟ್ ಕೊಡುತ್ತೇವೆಂಬ ಘೋಷಣೆಯನ್ನು ಅವರು ಡೆಲ್ಲಿಯಿಂದ ಮಾಡಿದರು. ರಾಮಕೃಷ್ಣ ಹೆಗಡೆಯವರ ಸರ್ಕಾರದ ಆಡಳಿತ ಅತ್ಯಂತ ಮಾದರಿ ಆಡಳಿತವಾಗಿತ್ತು ಎಂದು ಹೇಳಬಹುದು. ಅದರಲ್ಲಿ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಹೆಚ್ಚು ಒತ್ತನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಕೊಟ್ಟರು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸುಧಾರಣೆ, ಪಂಚಾಯತ್ ರಾಜ್ ಆಡಳಿತಕ್ಕೆ ಹೆಚ್ಚು ಒತ್ತು ಕೊಡುವಂಥಾದ್ದು ಶ್ರೀ ರಾಮಕೃಷ್ಣ ಹೆಗಡೆಯವರು ಮಾಡಿದಂಥ ಮೊಟ್ಟಮೊದಲ ದೊಡ್ಡ ಕೆಲಸವೆಂಬುದನ್ನು ಈ ಸಂದರ್ಭದಲ್ಲಿ ನಾವು ನೆನಸಿಕೊಳ್ಳಬೇಕಾಗುತ್ತದೆ. ಅದರಲ್ಲಿ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಕುಡಿಯುವ ನೀರಿಗಾಗಿ, ಈ ಸಮಸ್ಯೆಯ ಪರಿಹಾರಕ್ಕಾಗಿ ಹಲವಾರು ದಿಟ್ಟ ನಿಲುವುಗಳನ್ನು ಅವರು ತೆಗೆದುಕೊಂಡಿದ್ದನ್ನು ಆ ಸಂದರ್ಭದಲ್ಲಿ ನಾನು ನೋಡುತ್ತಾ ಇದ್ದೆ. ಅವರು ಕೇವಲ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳದೇ ತಮ್ಮ ಜೊತೆ ಯಾರು ಸಹಪಾಠಿಗಳಿದ್ದಾರೆ, ತಮ್ಮ ಜೊತೆ ಕೆಲಸ ಮಾಡುವಂಥ ಇನ್ನಿತರ ನಾಯಕರು ಇದ್ದಾರೆ, ವ್ಯಕ್ತಿಗಳು ಇದ್ದಾರೆ ಮತ್ತು ತಮ್ಮ ಸಂಪುಟದಲ್ಲಿದ್ದಂಥ ಸಚಿವರು ಇರಬಹುದು. ಅವರ ವ್ಯಕ್ತಿತ್ವವನ್ನೂ ಬೆಳೆಸಿಕೊಳ್ಳುವಂಥ ವಾತಾವರಣವನ್ನು ನಿರ್ಮಾಣ ಮಾಡುವಂಥ ಕೆಲಸವನ್ನು ಶ್ರೀ ರಾಮಕೃಷ್ಣ ಹೆಗಡೆಯವರು ಮಾಡಿದರು. ಅದರಲ್ಲಿ ಪ್ರಮುಖವಾಗಿ ನಾನು ಹೇಳುವಂಥಾದ್ದು ನಜೀರ್ ಸಾಬ್‌ರವರು. ಇವತ್ತಿಗೂ ನಾವು ನಜೀರ್ ಸಾಬ್‌ರವರನ್ನು ನೆನಸಿಕೊಳ್ಳುತ್ತಿದ್ದೇವೆ. ಅವರು ಗ್ರಾಮೀಣ ಅಭಿವೃದ್ಧಿ ಸಚಿವರಾಗಿ ಏನು ಕೆಲಸವನ್ನು ಮಾಡಿದರು, ಇವತ್ತಿಗೂ ಗ್ರಾಮೀಣ ಪ್ರದೇಶಗಳಲ್ಲಿ, ನಾವು ಪ್ರಸ್ತಾಸ ಮಾಡಿದರೆ ಅಲ್ಲಿಯ ಜನ ಹೇಳುತ್ತಾರೆ. ಬೋರ್‌ವೆಲ್‌ಗಳನ್ನು ನೋಡಿದರೆ, ಇದು ನಜೀರ್ ಸಾಬ್‌ರವರ ಬೋರ್‌ವೆಲ್ ಎಂದು ಹೇಳುತ್ತಾರೆ. ಅವರನ್ನು "ನೀರು ಸಾಬ್" ಎಂದೇ ಕರೆಯುತ್ತಿದ್ದರು. ಅಂದರೆ, ಆ ರೀತಿಯಾದಂಥ ಒಂದು ಅಧಿಕಾರವನ್ನು, ಆ ರೀತಿಯಾದಂಥ ಪ್ರೋತ್ಸಾಹವನ್ನು ಮಾನ್ಯ ಹೆಗಡೆಯವರು ಕೊಟ್ಟಿದ್ದರಿಂದ, ನಜೀರ್ ಸಾಬ್‌ರವರು ಕೆಲವೊಂದು ದಿಟ್ಟ ಹೆಜ್ಜೆಗಳನ್ನು ಇಡಲಿಕ್ಕೆ ಸಾಧ್ಯವಾಯಿತು.

11.10 ಎಎಂ

ಅವರ ವ್ಯಕ್ತಿತ್ವ ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಹೀಗೆ ಈ ರೀತಿಯಾಗಿ ಅನೇಕ ಕಡೆ ಒಂದು ನಾಯಕತ್ವವನ್ನು ಬೆಳೆಸಿದಂಥ ಕೀರ್ತಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಸಲ್ಲಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. 1985ರಲ್ಲಿ ವಿಧಾನಸಭೆಯನ್ನು ವಿಸರ್ಜನೆ ಮಾಡಿದರು. 1984ರಲ್ಲಿ ಲೋಕಸಭಾ ಚುನಾವಣೆಯು ಆಗಿತ್ತು. ಕಾಂಗ್ರೆಸ್ ಬಹಳ ದೊಡ್ಡ ಅಂತರದಲ್ಲಿ ಗೆದ್ದುಬಿಟ್ಟಿತ್ತು. 1984ರಲ್ಲಿ ಈ ರೀತಿ ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಲೋಕಸಭಾ ಸದಸ್ಯರನ್ನು ಕಾಂಗ್ರೆಸ್ ತೆಗೆದುಕೊಂಡಂಥ ಸಂದರ್ಭದಲ್ಲಿ ಮತ್ತೆ 1985ರಲ್ಲಿ ವಿಧಾನಸಭೆಯನ್ನು ವಿಸರ್ಜನೆ ಮಾಡಿ, ಆಗ

ಜನರ ಮ್ಯಾಂಡೇಟ್ ತೆಗೆದುಕೊಳ್ಳುವುದಕ್ಕೆ ಹೋಗುವ ಧೈರ್ಯ ಏನಿದೆಯಲ್ಲ. ಅದು ಬಹಳ ಜನ ರಾಜಕೀಯ ವ್ಯಕ್ತಿಗಳಿಗೆ ಬರುವುದಕ್ಕೆ ಸಾಧ್ಯವಿಲ್ಲ. 1984ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸೋತಾಗಲೂ ಸಹಿತ 1985ರಲ್ಲಿ ಒಂದು ದಿಟ್ಟ ನಿರ್ಧಾರವನ್ನು ಕೈಗೊಂಡು ಹೊಸ ಮ್ಯಾಂಡೇಟ್ ತೆಗೆದುಕೊಳ್ಳಲಿಕ್ಕೆ ಹೋದರು. ಆಗ ಅತ್ಯಂತ ನಿಚ್ಚಳ ಬಹುಮತದಿಂದ ಅವರು ಆರಿಸಿ ಬಂದರು. 1985 ರಿಂದ 1988 ರವರೆಗೆ ಮುಖ್ಯಮಂತ್ರಿಯಾಗಿ ಬಹಳ ಒಂದು ಉತ್ತಮವಾದಂಥ ಕೆಲಸವನ್ನು ಅವರು ಮಾಡಿದ್ದರು. ಹಾಗೆಯೇ ರಾಜಕೀಯ ಬದಲಾವಣೆಯ ಗಾಳಿ ಬೀಸುವ ದಿಶೆಯಲ್ಲಿ ಮಾನ್ಯ ಹೆಗಡೆಯವರು ಅಡಿಪಾಯವನ್ನು ಹಾಕಿದ್ದರು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಅದಕ್ಕಿಂತ ಮುಂಚೆ ಆರ್ಥಿಕ ಸಚಿವರಾಗಿ, ಹಾಗೆಯೇ ಈ ದೇಶದ ಒಬ್ಬ ಮಹಾನ್ ನಾಯಕ ಶ್ರೀ ನಿಜಲಿಂಗಪ್ಪರವರ ಗರಡಿಯಲ್ಲಿ ಬೆಳೆದವರು ಹೆಗಡೆಯವರು. ಇವರ ಸಮಕಾಲೀನ ನಾಯಕರುಗಳಲ್ಲಿ ಮಾನ್ಯ ವೀರೇಂದ್ರ ಪಾಟೀಲ್ ಕೂಡ ಇದ್ದರು. ಆಗ ನಾವೆಲ್ಲಾ ಕಾಲೇಜಿನಲ್ಲಿ ಕಲಿಯತಕ್ಕ ವಿದ್ಯಾರ್ಥಿಗಳಾಗಿದ್ದೆವು. ಆಗ ನಮಗೆ ಶ್ರೀ ಜಯಪ್ರಕಾಶ್ ನಾರಾಯಣರವರ ಹೋರಾಟ, ನವನಿರ್ಮಾಣ, ಇದರಲ್ಲಿ ನಾವೂ ಭಾಗವಹಿಸುವಂಥ ತವಕ, ಸಕ್ರಿಯವಾಗಿ ಭಾಗವಹಿಸಿರುವಂಥಾದ್ದು, ಆಗ ನಾನು ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದೆ. ಶ್ರೀ ಜಯಪ್ರಕಾಶ್ ನಾರಾಯಣರವರ ಹೋರಾಟವನ್ನು ಪ್ರತಿಯೊಂದು ಗ್ರಾಮಕ್ಕೂ ತೆಗೆದುಕೊಂಡು ಹೋಗುವಂಥ ಸೂಚನೆಗಳು ಬಂದಾಗ ಅದರಲ್ಲಿ ನಾವು ಸಕ್ರಿಯವಾಗಿ ಭಾಗವಹಿಸಿದ್ದೆವು. ಆಗ ಕಾಂಗ್ರೆಸ್ ವಿರೋಧಿ ಹೋರಾಟದಲ್ಲಿ ರಾಮಕೃಷ್ಣ ಹೆಗಡೆಯವರು, ಶ್ರೀ ವೀರೇಂದ್ರ ಪಾಟೀಲರವರು, ಇವರೆಲ್ಲರೂ ನಮಗೆ ಆದರ್ಶಪ್ರಾಯರಾಗಿದ್ದರು. ಕರ್ನಾಟಕದ ಜನತೆಯು ಇವರಿಬ್ಬರನ್ನು ಲವಕುಶ ಎಂದು ಕರೆಯುತ್ತಿದ್ದರು. ಅಷ್ಟೊಂದು ಅನ್ಯೋನ್ಯವಾದ ಸಂಬಂಧ ಹಾಗೂ ಹೋರಾಟದಲ್ಲಿ ಅವರುಗಳು ಮುಂಚೂಣಿಯಲ್ಲಿದ್ದರು. ಶ್ರೀ ರಾಮಕೃಷ್ಣ ಹೆಗಡೆಯವರನ್ನು ರಾಜ್ಯದ ಹಾಗೂ ದೇಶದ ರಾಜಕಾರಣದಲ್ಲಿ ಅವರು ವ್ಯಕ್ತಿತ್ವವನ್ನು ನಾವು ನೋಡುತ್ತಾ ಇದ್ದೇವೆ. ಅವರು ಕೇಂದ್ರ ಸಚಿವರಾಗಿಯೂ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದರು. ಮತ್ತೊಂದು ಬಹಳ ಮುಖ್ಯವಾದಂಥ ವ್ಯಕ್ತಿತ್ವ ಅಂದರೆ, ಇವೊತ್ತಿನ ರಾಜಕೀಯ ವ್ಯವಸ್ಥೆಯಲ್ಲಿ ಯಾವುದೇ ಒಬ್ಬ ರಾಜಕಾರಣಿಗೆ ಆತನ ಜಾತಿ, ಮತ್ತು ಆತನು ಆ ಜಾತಿಯ ನಾಯಕ ಎನ್ನುವ ಪಟ್ಟವನ್ನು ಕಟ್ಟುತ್ತಾರೆ. ಆದರೆ ಶ್ರೀ ರಾಮಕೃಷ್ಣ ಹೆಗಡೆಯವರು ಆ ಜಾತಿಗಳನ್ನು ಮೀರಿ ಬೆಳೆಯುವಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಇವೊತ್ತು ರಾಜಕಾರಣದಲ್ಲಿ ಜಾತಿಯನ್ನು ಮೀರಿ ಬೆಳೆಯುವುದು ಬಹಳ ಕಷ್ಟ. ಆದರೆ ಶ್ರೀ ಹೆಗಡೆಯವರು ಜಾತಿಯನ್ನು ಮೀರಿ ಎಲ್ಲಾ ವರ್ಗಗಳ ಪ್ರೀತಿವಿಶ್ವಾಸಗಳನ್ನು ಗಳಿಸಿಕೊಂಡು ಬೆಳೆಯುವಂಥ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಆದರೂ ಅವರನ್ನು ಲಿಂಗಾಯತರ ಲೀಡರ್ ಎಂದು ಕರೆಯುತ್ತಿದ್ದರು. ಅವರು ಲಿಂಗಾಯತರು ಅಲ್ಲ. ಲಿಂಗಾಯತರ ಲೀಡರ್ ಎನ್ನುವಂತಾದ್ದನ್ನು ಅವರು ಬೆಳೆಸಿಕೊಂಡಿದ್ದರು. ಆ ರೀತಿಯ ಅನ್ಯೋನ್ಯವಾದಂಥ ಸಂಬಂಧಗಳನ್ನು ಅವರು ಇಟ್ಟುಕೊಂಡಿದ್ದರಿಂದ ಮತ್ತು ಆ ಸಮಾಜದಲ್ಲಿ ಕೆಲವಾರು ನಾಯಕರುಗಳನ್ನು ಅವರು ಬೆಳೆಸಿದ್ದರಿಂದ ಅವರಿಗೆ ಆ ಪಟ್ಟ ಬಂತು. ಆದರೂ ಕೂಡ ಅವರು ಜಾತಿಯ ವ್ಯವಸ್ಥೆಯನ್ನು ಮೀರಿ ಬೆಳೆದು ಬಂದುದು ರಾಜಕಾರಣದಲ್ಲಿರುವಂಥವರು ಕಲಿಯತಕ್ಕಂಥ ವಿಷಯವೆಂದು ಹೇಳಬಯಸುತ್ತೇನೆ. ಅವರು ಯಾವಾಗ ಮುಖ್ಯಮಂತ್ರಿಗಳಾಗಿ ತಮ್ಮ ಸೇವೆಯನ್ನು ಮಾಡಿದರು, ರಾಷ್ಟ್ರ ರಾಜಕಾರಣದಲ್ಲಿ ಹಲವಾರು

ಚರ್ಚೆಗಳು ಇರಬಹುದು, ಹಲವಾರು ವಿಚಾರ ಸಂಕಿರಣ ಇರಬಹುದು, ಇಡೀ ರಾಷ್ಟ್ರ ರಾಜಕಾರಣದ ವ್ಯಕ್ತಿಗಳನ್ನು ಅವರು ಅತ್ಯಂತ ಸಮೀಪದಿಂದ ನೋಡುವಂತಾದ್ದು, ಇವೆಲ್ಲ ಕಾರಣಗಳಿಂದ ಮತ್ತು 1983 ರಿಂದ 1992ರವರೆಗೂ ಅವರು ರಾಜಕೀಯದಲ್ಲಿದ್ದ ಸ್ಥಿತಿಗತಿಗಳನ್ನು ನೋಡಿ ಶ್ರೀ ರಾಮಕೃಷ್ಣ ಹೆಗಡೆಯವರು ದೇಶದ ಪ್ರಧಾನಮಂತ್ರಿಗಳು ಆಗಬಹುದು ಎಂದು ಜನರು ಮಾತನಾಡುವ ರೀತಿಯಲ್ಲಿ ಅವರು ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದರು. ಹಾಗೆಯೇ ಪ್ರಧಾನಿಗಳಾಗುವ ವ್ಯಕ್ತಿತ್ವವನ್ನೂ ಕೂಡ ಅವರು ಹೊಂದಿದ್ದರು ಎನ್ನುವಂತಾದ್ದನ್ನು ಕೂಡ ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಇವೊತ್ತು ಯುವ ರಾಜಕಾರಣಿಗಳಿಗೆ ಕೆಲವೊಂದು ಮೌಲ್ಯಗಳನ್ನು ಅವರು ಹಾಕಿಕೊಟ್ಟು ಹೋಗಿದ್ದಾರೆ. ಅವರ ಹಾಗೆ ರಾಜಕಾರಣದಲ್ಲಿದ್ದುಕೊಂಡು ಮೌಲ್ಯಗಳನ್ನು ಕಾಪಾಡಿಕೊಂಡು ಹೋಗುವುದು ಬಹಳಷ್ಟು ಕಷ್ಟ. ಹೀಗೆ ಮೌಲ್ಯಧಾರಿತ ರಾಜಕಾರಣವನ್ನು ಮಾಡಿದ ಹೆಗಡೆಯವರು ಇವೊತ್ತು ನಮ್ಮ ಜೊತೆಗಿಲ್ಲ. ಆದರೆ ಅವರು ನಂಬಿ ನಡೆದ ಆದರ್ಶಗಳ ನಮ್ಮ ಮಧ್ಯದಲ್ಲಿವೆ. ಆ ಆದರ್ಶಗಳ ಪರಿಪಾಲನೆಯನ್ನು ನಾವು ಮಾಡುವಂಥಾದ್ದೆ ನಿಜವಾದ ಅರ್ಥದಲ್ಲಿ ಹೆಗಡೆಯವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ನಾವು ಸಲ್ಲಿಸಿದಂತಾಗುತ್ತದೆ. ಶ್ರೀ ರಾಮಕೃಷ್ಣ ಹೆಗಡೆಯವರ ಅಗಲಿಕೆಯಿಂದ ರಾಜ್ಯ ಮತ್ತು ರಾಷ್ಟ್ರದ ರಾಜಕಾರಣ ಬಡವಾಗಿದೆ ಎನ್ನುವಂಥ ಮಾತನ್ನು ಹೇಳಿ, ಮಾನ್ಯ ಹೆಗಡೆಯವರ ಆತ್ಮಕ್ಕೆ ನಾನು ಶಾಂತಿಯನ್ನು ಕೋರಿ, ಅವರ ಕುಟುಂಬ ವರ್ಗಕ್ಕೆ ಮತ್ತು ಅವರ ಅಪಾರವಾದ ಅಭಿಮಾನಿ ವರ್ಗಕ್ಕೆ ಉಂಟಾದ ದುಃಖವನ್ನು ಭರಿಸುವಂಥ ಶಕ್ತಿಯನ್ನು ದೇವರು ಕೊಡಲಿ ಎಂದು ಪ್ರಾರ್ಥಿಸಿ, ನಮ್ಮ ಪಕ್ಷದ ಪರವಾಗಿ ತಾವು ತಂದ ಈ ಒಂದು ಸಂತಾಪ ಸೂಚನೆಗೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ.

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ನಮ್ಮನ್ನು ಅಗಲಿ ಶಾಶ್ವತವಾಗಿ ದೂರ ಹೋಗಿದ್ದಾರೆ. ಇಡೀ ಕರ್ನಾಟಕದಲ್ಲಿಯೇ ಅಲ್ಲ, ಭಾರತದಲ್ಲಿಯೇ ಅವರಿಗೆ ಒಂದು ಹೆಸರು ಇತ್ತು. ಸಾರ್ವಜನಿಕ ಜೀವನದಲ್ಲಿ ಒಬ್ಬ ಮುಖಂಡ ಯಾವ ರೀತಿಯಲ್ಲಿ ನಡೆದುಕೊಳ್ಳಬೇಕು. ಅವನ ಜವಾಬ್ದಾರಿ ಏನು, ಕೆಲವು ಮೌಲ್ಯಗಳನ್ನು ಹೇಗೆ ಕಾಪಾಡಿಕೊಳ್ಳಬೇಕು, ಅದನ್ನು ತೋರಿಸಿಕೊಟ್ಟವರು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು. ಅವರ ವ್ಯಕ್ತಿತ್ವದ ಬಗ್ಗೆ ಹೇಳಬೇಕೆಂದರೆ ಇಡೀ ಒಂದು ದಿನವಾದರೂ ಸಾಲುವುದಿಲ್ಲ. ಬಹು ಪ್ರತಿಭೆಯುಳ್ಳಂಥ ಮತ್ತು ವರ್ಣರಂಜಿತವಾದಂಥ ವ್ಯಕ್ತಿತ್ವ ಅವರದ್ದು. ಮಾನ್ಯ ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಹೆಗಡೆಯವರ ವ್ಯಕ್ತಿತ್ವವನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಅವರದ್ದು ಪರಿಪೂರ್ಣವಾದಂಥ ವ್ಯಕ್ತಿತ್ವ. ಜೀವನದ ಹೊರಗೆ ಮತ್ತು ಒಳಗೆ ಎಲ್ಲಾ ರೀತಿಯ ಅನುಭವಗಳನ್ನು; ಕಹಿ, ಸಿಹಿ, ಎರಡೂ ಅನುಭವಗಳನ್ನು ಅವರು ಪಡೆದಿದ್ದರು. ಅಗಾಧವಾದಂಥ ಜ್ಞಾನವನ್ನು ಅವರು ಹೊಂದಿದ್ದರು. ಅವರ ವ್ಯಕ್ತಿತ್ವ ಕೇವಲ ರಾಜಕಾರಣವೇ ಅಲ್ಲ, ಸಾಂಸ್ಕೃತಿಕ ಜೀವನದಲ್ಲಿಯೂ ಅವರು ಆಸಕ್ತಿಯನ್ನು ಹೊಂದಿದ್ದರು. ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದರು. ಕ್ರೀಡೆಗಳಲ್ಲಿ ಸಹ ಆಸಕ್ತಿಯನ್ನು ಹೊಂದಿದ್ದರು. ಅವರು ಸಾಮಾಜಿಕ ಕಳಕಳಿಯ ವಿಚಾರದಲ್ಲಿ ಯಾರಿಗೂ ಹಿಂದೆ ಬಿದ್ದವರಲ್ಲ. ಅವರು ಪ್ರಥಮ ಬಾರಿಗೆ ನಮ್ಮ ರಾಜ್ಯದ ಕಾಂಗ್ರೆಸ್ಸೇತರ ಸರಕಾರದ ಮುಖ್ಯಮಂತ್ರಿಯಾದಾಗ, ಎರಡು ವರ್ಷಗಳ ಅವಧಿಯಲ್ಲಿ ಅವರು ಕೊಟ್ಟ ಆಡಳಿತದ ರೀತಿ ಇಡೀ ದೇಶಕ್ಕೆ ಮಾದರಿಯಾದಂತ ಆಡಳಿತವಾಗಿತ್ತು. ಆ ಅವಧಿಯಲ್ಲಿ ಅವರು ಅನೇಕ ಯೋಜನೆಗಳನ್ನು ಜಾರಿಗೆ ತಂದರು. ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಏನು ಚಿಂತನೆಯನ್ನು ಮಾಡಿದ್ದರು, ಯಾವ ಯೋಜನೆಗಳನ್ನು

ಮಾಡಿದ್ದರು ಅವುಗಳನ್ನು ಅವರು ರಾಷ್ಟ್ರದ ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದರು. ಅದಕ್ಕೆ ಅನೇಕ ಉದಾಹರಣೆಗಳನ್ನು ಕೊಡಬಹುದು. ಇಲ್ಲಿ ಪ್ರಥಮ ಬಾರಿಗೆ ಅವರು 1960ರಲ್ಲಿ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾಗಿ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಅಂದಿನ ಕಾಂಗ್ರೆಸ್ ಸರ್ಕಾರದಡಿಯಲ್ಲಿ ತರಲು ಪ್ರಯತ್ನ ಮಾಡಿದರೋ ಆ ಪಕ್ಷದ ಒಳಗಡೇನೇ ಶಾಸಕಾಂಗ ಪಕ್ಷದಲ್ಲಿ ಅವರಿಗೆ ಹೆಚ್ಚಿನ ಬೆಂಬಲ ಸಿಗದಿದ್ದುದ್ದರಿಂದ ಅದನ್ನು ಕೈಬಿಡಬೇಕಾಗಿ ಬಂತು. ಅಂದೇ ಅವರು ನಾನು ಏನು ಮಾಡಬೇಕೆಂದು ಇದ್ದೆ ಅದನ್ನು ಸಾಧಿಸುವುದಕ್ಕೆ ಆಗಲಿಲ್ಲ, ನನ್ನ ರಾಜೀನಾಮೆಯನ್ನು ತೆಗೆದುಕೊಳ್ಳಿ ಎಂದು ಶ್ರೀ ನಿಜಲಿಂಗಪ್ಪನವರಿಗೆ ಕೊಟ್ಟರಂತೆ. ಅವಾಗ ಮಾನ್ಯ ನಿಜಲಿಂಗಪ್ಪನವರು ಇಲ್ಲ, ಇಷ್ಟಕ್ಕೆಲ್ಲಾ ನಿಮ್ಮದೇನೂ ತಪ್ಪಿಲ್ಲ, ನೀವೇನೋ ಪ್ರಯತ್ನ ಮಾಡಿದಿರಿ, ಆದರೆ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕೆಲವು ಸಾರಿ ನಮ್ಮ ಚಿಂತನೆಗಳಿಗೆ ಯಶಸ್ಸು ಸಿಗುವುದಿಲ್ಲ, ಅದಕ್ಕೋಸ್ಕರ ನೀವು ರಾಜೀನಾಮೆ ಕೊಡಬೇಕಾಗಿಲ್ಲ ಎಂದು ಹೇಳಿ ಅವರನ್ನು ತಡೆಹಿಡಿದಿದ್ದರಂತೆ. ಆದರೆ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಅವರೇನು ಕನಸು ಕಂಡಿದ್ದರು ಅದನ್ನು ಶ್ರೀ ನಜೀರ್ ಸಾಬರ ಮುಖಾಂತರ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ತಂದು, ಆ ವ್ಯವಸ್ಥೆ ಇಡೀ ದೇಶದಲ್ಲಿ ಪ್ರಖ್ಯಾತಿ ಪಡೆಯಿತು. ಅದನ್ನು ಶ್ರೀ ರಾಜೀವ್‌ಗಾಂಧಿಯವರು ಸಂವಿಧಾನ 73ನೇ ತಿದ್ದುಪಡಿ ತರುವ ಮೂಲಕ ಇಡೀ ದೇಶಾದ್ಯಂತ ಆ ವ್ಯವಸ್ಥೆಯನ್ನು ಜಾರಿಗೆ ತಂದರು. ಅದಕ್ಕೆ ಬುನಾದಿಯನ್ನು ಕರ್ನಾಟಕದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಹಾಕಿಕೊಟ್ಟರು. ಮತ್ತೆ ಮಾನ್ಯ ಮುಖ್ಯಮಂತ್ರಿಗಳು ಯಾವ್ಯಾವ ಕಾರ್ಯಕ್ರಮಗಳನ್ನು ತಂದಿದ್ದರು ಎಂದು ಹೇಳಿದರು, ನಾನು ಮತ್ತೆ ಅವುಗಳಿಗೆ ಹೋಗುವುದಿಲ್ಲ. ಇನ್ನೊಂದು ಬಹಳ ಪ್ರಮುಖವಾಗಿ ಮಹಿಳೆಯರಿಗೆ ಮೀಸಲಾತಿ ತಂದಂತಹ ಕೀರ್ತಿ ಇಡೀ ದೇಶದಲ್ಲೇ ಸಲ್ಲಬೇಕಾಗಿದ್ದರೆ ಅದು ಶ್ರೀ ರಾಮಕೃಷ್ಣ ಹೆಗಡೆಯವರಿಗೆ. ಸ್ಥಳೀಯ ಸಂಸ್ಥೆಗಳಲ್ಲಿ 18 ವರ್ಷದ ಯುವಕರಿಗೆ ಮತದಾನದ ಹಕ್ಕನ್ನು ಕೊಟ್ಟವರು ರಾಮಕೃಷ್ಣ ಹೆಗಡೆಯವರು. ಮತ್ತೆ ನಮ್ಮ ದೇಶ ಶೇಕಡ 70ರಷ್ಟು ಒಣಭೂಮಿ ಇರುವ ದೇಶ, ಕೇವಲ ಮಳೆಯನ್ನೇ ನಂಬಿಕೊಂಡಿರುವ ದೇಶ, ಇದನ್ನು ಯೋಚನೆ ಮಾಡಿ ಒಣಭೂಮಿಯನ್ನು ಹೇಗೆ ಅಭಿವೃದ್ಧಿ ಮಾಡಬೇಕೆಂಬ ಒಂದು ಚಿಂತನೆಯನ್ನು ಇಡೀ ದೇಶಕ್ಕೆ ಕೊಟ್ಟವರು ಶ್ರೀ ರಾಮಕೃಷ್ಣ ಹೆಗಡೆಯವರು ಇಲ್ಲಿ ಅವರು ಸರ್ಕಾರದಲ್ಲಿ Dry Land Development Board ಎಂದು ಮಾಡಿದರು. ಕೆಲವು ವಿಶೇಷ ಯೋಜನೆಗಳನ್ನು ತಯಾರಿಸಿದ್ದರು, ಕಬ್ಬಾಳ ನಾಲಾ ಎಂದು ಕನಕಪುರದಲ್ಲಿ ಮಾಡಿ ಅದನ್ನು ಯಶಸ್ವಿಯಾಗಿ ಜಾರಿಗೆ ತಂದರು. ಕೇಂದ್ರದಲ್ಲಿ ಶ್ರೀ ರಾಜೀವಗಾಂಧಿಯವರು Waste Land Development Board ಎಂದು ಏನು ಮಾಡಿದ್ದಾರೆ ಅದು ಇದಕ್ಕೆ ಬುನಾದಿ ಎಂದು ಹೇಳಲು ನಾನು ಇಚ್ಛೆಪಡುತ್ತಿದ್ದೇನೆ. ಮತ್ತೆ ಅವರ ಆಡಳಿತದಲ್ಲಿ ನಾವು ನಿಪುಣತೆಯನ್ನು ಕಾಣುತ್ತೇವೆ. ಅವರು ಮೌಲ್ಯಾಧಾರಿತ ರಾಜಕಾರಣವನ್ನು ಅನುಷ್ಠಾನಕ್ಕೆ ತಂದದ್ದು ಹೇಗೆ ಅಂದರೆ ಅದರಿಂದ ಬಹಳ ಸೂಕ್ಷ್ಮತೆಯಿಂದ ರಾಜ್ಯವಾಳುವುದಕ್ಕೆ ಆಯಿತು. ಯಾವುದಾದರೂ ಒಂದು ವಿಚಾರದಲ್ಲಿ ಅವರ ಮನಸ್ಸಿನಲ್ಲಿ ದ್ವಂದ್ವ ಬಂದಾಗ ಖಂಡಿತವಾಗಿ ಅಧಿಕಾರದಲ್ಲಿ ಒಂದು ಕ್ಷಣವೂ ಮುಂದುವರೆಯಬಾರದು ಎಂಬ ಚಿಂತನೆ ಅವರಲ್ಲಿ ಬರುತ್ತಿತ್ತು 1983ರಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಅವರ ಮೇಲೆ ಎರಡು ಮೂರು ಆಪಾದನೆಗಳು ಬಂದವು. ಒಂದು, ಅವರ ಅಣ್ಣ ಅಕ್ಕಿಯನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ಆಪಾದನೆ ಬಂತು ನ್ಯಾಯಾಂಗ ತನಿಖೆಗೆ ವಹಿಸಿದರು. MD

seat scandal ಎಂದು ಒಂದು ಆಪಾದನೆ ಬಂತು. ಆಮೇಲೆ ಬಾಟ್ಲಿಂಗ್ ಹಗರಣ, ಅದಕ್ಕೆ ರಾಜೀನಾಮೆ ಕೊಟ್ಟು ಮತ್ತೆ ಅಧಿಕಾರಕ್ಕೆ ಬಂದರು. ರೇವಜೀತ್ ಹಗರಣ – ಹೀಗೆ ಅನೇಕ ಹಗರಣಗಳನ್ನು ಅವರ ಮೇಲೆ ಹೊರಿಸಿದಾಗ ಸುಮಾರು ಮೂರು ನಾಲ್ಕು ಸಾರಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಂತಹ ನಿದರ್ಶನಗಳು ಬೇರೊಂದು ಇಲ್ಲ. ಅವರು ಒಂದು ಸಾರಿ ಮುಖ್ಯಮಂತ್ರಿ ಸ್ಥಾನಕ್ಕೆ, ಒಂದು ಸಾರಿ ಟೆಲಿಫೋನ್ ಕದ್ದಾಲಿಕೆ ಪ್ರಕರಣಕ್ಕೆ, ಮತ್ತೊಂದು ಸಾರಿ ಕೇಂದ್ರದಲ್ಲಿ ಯೋಜನಾ ಆಯೋಗದ ಉಪಾಧ್ಯಕ್ಷರ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಅಂದರೆ ಎಷ್ಟು ಸೂಕ್ಷ್ಮತೆ ಇತ್ತು ಅಂದರೆ ಅವರ ಕೊನೆಯ ದಿನದವರೆಗೆ ಅವರ ಕುಟುಂಬದ ಸದಸ್ಯರನ್ನಾಗಲೀ ಸಂಬಂಧಿಕರನ್ನಾಗಲಿ ರಾಜಕಾರಣಕ್ಕೆ ತಂದವರಲ್ಲ. ಅವರ ಮಕ್ಕಳ ಹೆಸರು ಯಾರಿಗೂ ಗೊತ್ತಿರಲಿಲ್ಲ. ಅಂತಹ ಒಂದು ವ್ಯಕ್ತಿತ್ವ ಅವರದ್ದು. ಅವರಿಗೆ ಸಾಮಾಜಿಕ ಕ್ಷೇತ್ರದಲ್ಲಿ ಯಾವ ರೀತಿ ಕಳಕಳಿ ಇತ್ತು ಅಂದರೆ, ಎಲ್ಲಾ ವರ್ಗದ ಜನರಿಗೆ ಬಡವರಿಗೆ ಏನು ಯೋಜನೆಗಳನ್ನು ಬಜೆಟ್ ಮೂಲಕ ಒದಗಿಸಿದ್ದರು ಅಂದರೆ ಬಹುಶಃ ಅವರ ಸರ್ಕಾರ ಬಿಟ್ಟು ಬೇರ್‍ಯಾವುದೇ ಸರ್ಕಾರದಲ್ಲಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದವರು ಅಲ್ಪಸಂಖ್ಯಾತರಿಗೆ ಕಾರ್ಯಕ್ರಮ ರೂಪಿಸುವುದರಲ್ಲಿ ಆರ್ಥಿಕವಾಗಿ ಹೆಚ್ಚು ಒತ್ತು ಕೊಟ್ಟ ಮುಖ್ಯಮಂತ್ರಿಗಳು ಶ್ರೀ ರಾಮಕೃಷ್ಣ ಹೆಗಡೆಯವರು. ಅವರು ಪ್ರತಿಭೆಯನ್ನು ಹೇಗೆ ಗುರುತಿಸುತ್ತಿದ್ದರು ಎಂಬುದಕ್ಕೆ ಒಂದು ನಿದರ್ಶನ, ಕರ್ನಾಟಕ ರಾಜ್ಯದಲ್ಲಿ ಪ್ರಥಮವಾಗಿ ದಲಿತರು ಅಂದರೆ ಎಲ್ಲ ರೀತಿಯಲ್ಲೂ ಹಿಂದುಳಿದಿರುವುದಿಲ್ಲ; ಅವರಲ್ಲೂ ಪ್ರತಿಭೆ ಇರುತ್ತದೆ, ಅವರನ್ನು ಕೇವಲ ಜಾತಿ ಆಧಾರದ ಮೇಲೆ ತುಳಿಯಬಾರದು, ಅವರ ಪ್ರತಿಭೆಯನ್ನು ನಾವು ಚಿವುಟಿ ಹಾಕಬಾರದು, ಅವರ ಪ್ರತಿಭೆಗೆ ಪುರಸ್ಕಾರ ಕೊಡಬೇಕು ಎಂಬ ದೃಷ್ಟಿಯಿಂದ ರ್‍ಯಾಂಕ್ ಹೋಲ್ಡರ್ಸ್‌ಗೆ ಅಂದರೆ, ವಿಶ್ವವಿದ್ಯಾನಿಲಯಗಳಲ್ಲಿ ರ್‍ಯಾಂಕ್ ಪಡೆದ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ನೇರವಾಗಿ class I, class II ಹುದ್ದೆ ಕೊಡುವಂತಹ, ಇಡೀ ದೇಶದಲ್ಲೇ ಮಾದರಿಯಾದಂತಹ ಯೋಜನೆಯನ್ನು ಜಾರಿಗೆ ತಂದರು. ಅದು ಬಹಳ ದಿನಗಳ ನಂತರ ಅನುಷ್ಠಾನಕ್ಕೆ ಬಂದು ಇವತ್ತು ನೂರಾರು ಜನ ಆ ವರ್ಗದ ವ್ಯಕ್ತಿಗಳು ಕೆಲಸದಲ್ಲಿದ್ದಾರೆ. ಮತ್ತೆ ಒಂದು ಪ್ರಕರಣ ನಮಗೆ ನೆನಪಿಗೆ ಬರುತ್ತದೆ. ನಮ್ಮ 1983ರ ಸರ್ಕಾರದಲ್ಲಿ ಬೆಂಡಿಗೇರಿ ಗ್ರಾಮದಲ್ಲಿ ದಲಿತರಿಗೆ ಒಂದು ಅವಮಾನವಾಯಿತು, ಮಲ ತಿನ್ನಿಸುವ ಒಂದು ಪ್ರಕರಣ ಆಗ ನಡೆಯಿತು, ಈ ವಿಧಾನಸಭೆಯಲ್ಲಿ ಆಗ ಅಷ್ಟೊಂದು ಸಿಟ್ಟು ಅಕ್ರೋಶ ಬಂದು ಹೇಳುತ್ತಾರೆ, ಯಾರು ದಲಿತರಿಗೆ ಮಲ ತಿನ್ನಿಸಿದ್ದಾರೆ, ಇಷ್ಟೊಂದು ಅಮಾನವೀಯ ಕೃತ್ಯ ಮಾಡಿದ್ದಾರೆ ಅವರು ಮನುಷ್ಯರಲ್ಲ, ಅವರಿಗೆ ಸರ್ಕಾರದಿಂದ ಮಲ ತಿನ್ನಿಸುತ್ತೇನೆ ಎಂದು ಒಂದು message ಕೊಟ್ಟರು. ಅದು ಎಷ್ಟು ಹೃದಯಸ್ಪರ್ಶಿಯಾದ ಮಾನವೀಯವಾದ ಸಂದೇಶ ಎಂದು ಇವತ್ತು ನಾವು ನೆನೆಸಿಕೊಂಡರೆ ಮೈ ಜುಂ ಅನ್ನುತ್ತದೆ. ಮತ್ತೆ ಅವರು ಅಧಿಕಾರಕ್ಕೆ ಬರುವ ಮೊದಲು ಸಾರ್ವಜನಿಕ ಜೀವನದಲ್ಲಿ ಒಂದು ರೀತಿಯ ತಾತ್ಸಾರ ಮನೋಭಾವ ಸಾರ್ವಜನಿಕರಲ್ಲಿತ್ತು. Politics is a last resort of scoundrals ಎಂಬ ಪ್ರತೀತ ಇತ್ತು, ಅವರು ಮುಖ್ಯಮಂತ್ರಿಯಾಗಿ ನಡೆದುಕೊಂಡ ರೀತಿ ನೋಡಿದರೆ he brought respect to the politics, ಅದಕ್ಕೆ ಗೌರವ ತಂದರು. ಮತ್ತೆ ರಾಜ್ಯಭಾರದಲ್ಲಿ ಒಂದು ಕೌಶಲ್ಯತೆಯನ್ನು ಅವರು ತಂದರು. ಹೊಸ ರೀತಿ, ಹೊಸ ಚಿಂತನೆ ಇದನ್ನು ಶ್ರೀ ರಾಮಕೃಷ್ಣ ಹೆಗಡೆಯವರಲ್ಲಿ ಮಾತ್ರ ನಾವು ಕಾಣಬಹುದು. ಚಿಕ್ಕ ವಯಸ್ಸಿನಲ್ಲೇ ಶ್ರೀ ಎಸ್. ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಮಂತ್ರಿಗಳಾಗಿ ನಿಜಲಿಂಗಪ್ಪನವರ

ವ್ಯಕ್ತಿತ್ವ ಬಹಳ ಪಾರದರ್ಶಕವಾದದ್ದು. ಅವರಿಗೆ ಕೃತಿಮ, ಒಳಸಂಚು ಗೊತ್ತಿರಲಿಲ್ಲ. ಬಹಳ ನೇರವಾಗಿ ಮುತ್ಸದ್ದಿತನದಿಂದ ರಾಜಕೀಯ ಮಾಡುತ್ತಿದ್ದರು. ಆದರೆ ಇಂತಹ ಒಂದು ಪಿತೂರಿ ಅವರಿಗೆದುರಾದಾಗ ಅವರಿಗೆ ಚಾಣಾಕ್ಷತನದಿಂದ ಒಳ್ಳೆಯ ದೃಷ್ಟಿಯಿಂದ ಮಾರ್ಗದರ್ಶಕರಾಗಿದ್ದರು ಶ್ರೀ ರಾಮಕೃಷ್ಣ ಹೆಗಡೆಯವರು ಎಂದರೆ ತಪ್ಪಾಗಲಾರದು. ಯಾವಾಗಲೂ ಅವರ ಜೊತೆ ಇದ್ದು ಎಲ್ಲ ಸಂದರ್ಭದಲ್ಲಿ ಅವರಿಗೆ ಒಳ್ಳೆಯ ಮಾರ್ಗದರ್ಶನ, ಒಳ್ಳೆಯ ಸಲಹೆ ಸೂಚನೆಗಳನ್ನು ಕೊಟ್ಟು ಚಿಕ್ಕವಯಸ್ಸಿನಲ್ಲೇ ಅವರ ನಿಕಟಸಂಪರ್ಕ ಹೊಂದಿದ್ದರು. ಮತ್ತೆ ಕರ್ನಾಟಕದ ಇತಿಹಾಸದಲ್ಲಿ 1983ರಿಂದ 1985ರವರೆಗೆ ಏನು ಆಡಳಿತ ಕೊಟ್ಟು ಆ ಒಂದು ಚ್ಯಾರಿಷ್ಮದಿಂದ ವರ್ಚಸಿನಿಂದ ಅವರೊಬ್ಬರೇ ಒಬ್ಬ ವ್ಯಕ್ತಿ ಆಧಾರದ ಮೇಲೆ ಚುನಾವಣೆ ಎದುರಿಸಿ ಅಧಿಕಾರಕ್ಕೆ ಬಂದ ನಿದರ್ಶನ ಕರ್ನಾಟಕದಲ್ಲಿ ಇದ್ದರೆ 1985ರಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರ ವ್ಯಕ್ತಿತ್ವಕ್ಕೆ ಅವರ ನಾಯಕತ್ವಕ್ಕೆ ಎಂದು ನಾವು ಹೇಳಬಹುದು. ಮತ್ತೆ ಅವರು ನಂಬಿದ್ದ ಮೌಲ್ಯಗಳಿಗೆ ಯಾವತ್ತೂ ಅವರು ರಾಜಿಯಾಗಲಿಲ್ಲ. ತಮಗೇ ಗೊತ್ತಿರುವಂತೆ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಅವರ ಒಂದು ಪಾತ್ರ ಅದ್ಭುತವಾದ ಪಾತ್ರ. It was exemplary, ಅವರ ಭಾಷಣದಲ್ಲಿ, ವಾದದಲ್ಲಿ ತೀಕ್ಷ್ಣತೆ ಇತ್ತು, ತಮಾಷೆ ಇತ್ತು ಮತ್ತು ಅದರಲ್ಲಿ ಅರ್ಥವೂ ಇತ್ತು, ಅಷ್ಟೊಂದು ವರ್ಣರಂಜಿತವಾಗಿ ಮಾತನಾಡುವ ಕಲೆಯನ್ನು ಅವರಲ್ಲಿ ನಾವು ಕಾಣಬಹುದಾಗಿತ್ತು. ಮತ್ತೆ ಅವರು ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಜೀವನದಲ್ಲಿ ಬಹಳ ನೊಂದಿದ್ದರು. ಅನೇಕ ಪಿತೂರಿಗೆ ಅವರು ಒಳಗಾಗಿದ್ದರು. ನನಗೆ ಒಂದು ಸಾರಿ ನೆನಪಿಗೆ ಬರುತ್ತದೆ ಮಾನ್ಯ ಸಭಾಧ್ಯಕ್ಷರೇ, ನಾವೆಲ್ಲರೂ ಅನೇಕ ಜನ ಅವರ ಸಚಿವಸಂಪುಟದಲ್ಲಿ ಕೆಲಸವನ್ನು ಮಾಡಿದ್ದೇವೆ. ಸುಮಾರು ಡಜನ್ ಲೀಡರ್ಸ್ ಇವತ್ತು ಒಂದು ರಾಜ್ಯದ ಚುಕ್ಕಾಣಿಯನ್ನು ಹಿಡಿಯತಕ್ಕಂಥ ಸಾಮರ್ಥ್ಯವನ್ನು ಗಳಿಸಿದ್ದರೆ ನಮ್ಮ ಜನತಾ ದಳದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಶ್ರೀ ರಾಮಕೃಷ್ಣ ಹೆಗಡೆಯವರು ತೋರಿಸಿದಂಥ ಒಂದು ಹೃದಯವೈಶಾಲ್ಯತೆ, ಅವರು ಕೊಟ್ಟಂಥ ಸಂಪುಟದಲ್ಲಿದ್ದಂಥ ಮೂರು ಜನ ಮಂತ್ರಿಗಳ ಮೇಲೆ ಆಪಾದನೆ ಬಂದಾಗ ಅದನ್ನು COD ಗೆ ರೆಫರ್ ಮಾಡಿ enquiry ಯನ್ನು ಮಾಡಿಸಿದಂಥ ನಿದರ್ಶನ ಕರ್ನಾಟಕದ ಇತಿಹಾಸದಲ್ಲಿ ಬಹುಶಃ ಯಾವುದೂ ಇಲ್ಲ. ಮಾನ್ಯ ದೇವೇಗೌಡರು ಇರಬಹುದು. ಶ್ರೀ ಜೀವಿಜಯ ಇರಬಹುದು, ಮತ್ತು ನಾನು, ಮೂರು ಜನ ಮಂತ್ರಿಗಳ ಮೇಲೆ ಯಾವುದೋ ಅಪವಾದ ಬಂದಾಗ ಅದನ್ನು COD ತನಿಖೆಗೆ ಆದೇಶವನ್ನು ಮಾಡಿ, ಆ ವರದಿ ಬಂದಮೇಲೆ ಲೋಕಾಯುಕ್ತಕ್ಕೂ ಸಹ ಶಿಫಾರಸ್ ಮಾಡಿದರು. ಆ ಸಂದರ್ಭದಲ್ಲಿ ನೈತಿಕ ಹೊಣೆಯನ್ನು ಹೊತ್ತು ನಾನು ರಾಜೀನಾಮೆಯನ್ನು ಕೊಡಬೇಕಾಗಿ ಬಂತು. ಅದನ್ನು ಅವರು ಒಪ್ಪಿಕೊಂಡರು. ನಾನು ಒಂದು ಸಾರಿ ಎರಡು ವರ್ಷಗಳ ಹಿಂದೆ ಅವರನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದಾಗ ಅವರು ಒಂದು ಮಾತನ್ನು ಹೇಳಿದರು. ಅವರ ಧರ್ಮಪತ್ನಿಯವರು ಅವರ ಪಕ್ಕದಲ್ಲಿದ್ದರು. ಆಗ ನನಗೆ ಅವರ ಪರಿಸ್ಥಿತಿ ನೋಡಿ ದುಃಖ ಬಂದಾಗ, ಅವರು ಅವರ ಧರ್ಮಪತ್ನಿಯವರಿಗೆ ಹೇಳುತ್ತಾ, ನೋಡು ಶಕ್ಕು, ಸೋಮಶೇಖರ್‌ರವರಿಗೆ ನನ್ನ ಅವಧಿಯಲ್ಲಿ ಏನೂ ಪುರಸ್ಕಾರ ಸಿಗಲಿಲ್ಲ. ಬಹಳ ಜನರಿಗೆ ಎಷ್ಟೊಂದು ಪುರಸ್ಕಾರವನ್ನು ಕೊಟ್ಟಿದ್ದೇನೋ ಅಷ್ಟು ಪುರಸ್ಕಾರವನ್ನು ಇವರಿಗೆ ಕೊಟ್ಟಿಲ್ಲ ಒಂದು ಪಿತೂರಿಗೆ ಅವರಿಗೆ ರಾಜೀನಾಮೆಯನ್ನು ಪಡೆದುಕೊಂಡೆ. ರಾಜೀನಾಮೆ ಪಡೆದುಕೊಂಡಮೇಲೂ ಒಂದು ಚೂರೂ ಬೇಸರ ಮಾಡಿಕೊಳ್ಳದೆ ನನ್ನ ಜೊತೆಯಲ್ಲೇ ಕೊನೆಯವರೆಗೂ ಇದ್ದು ಅಷ್ಟೊಂದು ಪ್ರೀತಿಯನ್ನು

ತೋರಿಸುತ್ತಿರುವುದನ್ನು ನೋಡಿದರೆ ಇಂಥವರು ರಾಜಕಾರಣದಲ್ಲಿ ಎಷ್ಟು ಜನಸಿಕ್ಕುತ್ತಾರೆ ಎಂದು ಹೇಳಿ ಬಹಳ ದುಃಖಪಟ್ಟರು; ಅಭಿಮಾನಪಟ್ಟರು. ಇನ್ನೂ ಒಂದು ಹೇಳಿದರು, ಅಷ್ಟೇ ಅಲ್ಲ, ಶ್ರೀ ಜೆ. ಹೆಚ್. ಪಟೇಲ್ ಅವರ ಸಂಪುಟಕ್ಕೂ ರಾಜೀನಾಮೆಯನ್ನು ಕೊಟ್ಟು, ಅವರ ಜೊತೆಯಲ್ಲಿ ಇಬ್ಬರು ಮುಖ್ಯಮಂತ್ರಿಗಳಿಗೆ ರಾಜೀನಾಮೆಯನ್ನು ಕೊಟ್ಟು, ಇಬ್ಬರೂ ಮುಖ್ಯಮಂತ್ರಿಗಳಿಗೂ ನಿಷ್ಠಾವಂತರಾಗಿ ಉಳಿದಿರತಕ್ಕಂಥವರು ಬಹಳ ವಿರಳ. ಅದನ್ನು ತೋರಿಸಿದ್ದಾರೆ. ಅದರಿಂದ ನನಗೆ ಬಹಳ ಅಭಿಮಾನ ಬಂತು. ಅವರ ನಮ್ಮ ಸಂಬಂಧ ವೈಯಕ್ತಿಕ ಲಾಭಕ್ಕೋಸ್ಕರ ಇದ್ದಂಥ ಸಂಬಂಧವಲ್ಲ. ಮಾನ್ಯ ಸಭಾಧ್ಯಕ್ಷರೇ, ಅವರ ಒಂದು ವ್ಯಕ್ತಿತ್ವದ ಬಗ್ಗೆ ಮಾರುಹೋಗಿದ್ದು ಅವರ ಒಂದು ಆದರ್ಶ ರಾಜಕಾರಣ, ಮೌಲ್ಯಾಧಾರಿತ ರಾಜಕಾರಣ ಮತ್ತು ಅವರ ಸಜ್ಜನಿಕೆ ಇದನ್ನು ಅಳವಡಿಸಿಕೊಳ್ಳಬೇಕು ಎನ್ನತಕ್ಕ ಕಾತುರದಲ್ಲಿ ಅವರ ಜೊತೆ ಯಾವಾಗಲೂ ಸಂಪರ್ಕವನ್ನು ಇಟ್ಟುಕೊಂಡಿದ್ದೆವು. ಹೀಗಾಗಿ ಅವರಿಂದ ವೈಯಕ್ತಿಕ ಲಾಭಕ್ಕಿಂತ ಹೆಚ್ಚಾಗಿ ಇಡೀ ನಮ್ಮ ಹೊಸ ಪೀಳಿಗೆಗೆ ಒಬ್ಬ ಮಾರ್ಗದರ್ಶಕರನ್ನು ನಾವು ಕಳೆದುಕೊಂಡಿದ್ದೇವೆ. ಇಡೀ ದೇಶದಲ್ಲಿ ಒಬ್ಬ ಪ್ರಧಾನಮಂತ್ರಿಯಾಗತಕ್ಕಂಥ ಅವಕಾಶ ಮತ್ತು ಸಾಮರ್ಥ್ಯ ಪ್ರತಿಭೆ ಅವರಲ್ಲಿತ್ತು. ಆದರೆ ಕೆಲವು ಪಿತೂರಿಗಳ ಸಂಚಿನಿಂದ ಕೆಲವು ಅವಕಾಶಗಳು ತಪ್ಪಿಹೋದವು. ಅವರಲ್ಲಿ ವಿಶಾಲತೆ ಕ್ಷಮಾಗುಣ ಹೇಗಿತ್ತು ಎಂದು ಹೇಳಿದರೆ ಎಂಥ ಸಂದರ್ಭದಲ್ಲಿ ಎಷ್ಟೇ ಜನ ಅವರಿಗೆ ಅನ್ಯಾಯವನ್ನು ಮಾಡಿದರೂ ಅವರನ್ನು ಕ್ಷಮಿಸತಕ್ಕ ದೊಡ್ಡ ಗುಣ ಅವರಲ್ಲಿತ್ತು. ಅದನ್ನು ಅನೇಕ ಸಾರಿ ತೋರಿಸಿದ್ದಾರೆ. ಕಹಿಯನ್ನು ಯಾವತ್ತೂ ಸಹ ಇಟ್ಟುಕೊಂಡಿರಲಿಲ್ಲ. ಅಂಥ ಒಂದು ವ್ಯಕ್ತಿತ್ವವುಳ್ಳ ವ್ಯಕ್ತಿಗಳು ಇನ್ನು ಸಿಗುವುದು ಕಷ್ಟ. ಅವರನ್ನು ನಾವು ಕಳೆದುಕೊಂಡು ಬಹಳ ಬಡವರಾಗಿದ್ದೇವೆ. ಅದರಲ್ಲೂ ವಿಶೇಷವಾಗಿ ಕಾಂಗ್ರೆಸ್ಸೇತರ ಜನತಾ ದಳದ ಒಂದು ಪ್ರಯೋಗಕ್ಕೆ ಬಹಳ ಹೊಡೆತ ಬಿದ್ದಿದೆ. ಆದರೆ ನಾವು ಧೃತಿಗೆಡದೆ ಅವರು ಹಾಕಿಕೊಟ್ಟಂಥ ದಾರಿಯಲ್ಲಿ ಅವರು ತೋರಿಸಿದಂಥ ಒಂದು ಮಾರ್ಗದರ್ಶನದಲ್ಲಿ ಮೌಲ್ಯಾಧಾರಿತ ರಾಜಕಾರಣದಲ್ಲಿ ನಂಬಿಕೆಯನ್ನು ಇಟ್ಟು ಆ ಸಂಘಟನೆಯನ್ನು ಮಾಡುವುದು ಮತ್ತು ಆ ರೀತಿ ನಡೆದುಕೊಳ್ಳತಕ್ಕಂಥದ್ದು ನಾವು ಅವರಿಗೆ ಸಲ್ಲಿಸತಕ್ಕಂಥ ಶ್ರದ್ಧಾಂಜಲಿ. ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಒಂದು ಚೇರನ್ನು ಮಾಡಬೇಕೆಂದು ಹೇಳಿದ್ದಾರೆ, ಅದಕ್ಕೆ ನನ್ನ ಒಂದು ಸಲಹೆ ಏನೆಂದರೆ, ಅವರು ಕರ್ನಾಟಕದಲ್ಲಿ ಆರು ವರ್ಷಗಳ ಕಾಲ ಉತ್ತಮ ಮುಖ್ಯಮಂತ್ರಿಯಾಗಿ ಹೊಸ ಹೊಸ ಚಿಂತನೆಗಳನ್ನು ಕೊಟ್ಟಿದ್ದಾರೆ. ಅವರ ಒಂದು ಪ್ರತಿಮೆಯನ್ನು ವಿಧಾನಸೌಧದ ಸುತ್ತ ಎಲ್ಲಾದರೂ ಒಂದು ಕಡೆ ಹಾಕಬೇಕು ಎಂದು ಹೇಳಿ ನಮ್ಮ ಪಕ್ಷದ ವತಿಯಿಂದ ಕೇಳುತ್ತಾ ಎಲ್ಲಾ ಯೂನಿವರ್ಸಿಟಿಗಳಲ್ಲಿ 'ಹೆಗಡೆ ಛೇರ್' ಎಂದು ಮಾಡಿ ಅವರ ಒಂದು ರಾಜಕಾರಣದ ಸಂಶೋಧನೆ, ಆರ್ಥಿಕ ಮತ್ತು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ವ್ಯವಸ್ಥೆ ಬಗ್ಗೆ ಒಂದು ಸಂಶೋಧನೆಯನ್ನು ಮಾಡತಕ್ಕ ಒಂದು ಅವಕಾಶವನ್ನು ಎಲ್ಲಾ ಯೂನಿವರ್ಸಿಟಿಗಳಿಗೆ ಕೊಡತಕ್ಕದ್ದು ಮತ್ತು ಈಗಾಗಲೇ ಏನು ಒಂದು ಹೇಳಿದ್ದಾರೆ, ಇದನ್ನು ಎಲ್ಲಾ ಯೂನಿವರ್ಸಿಟಿಗಳಿಗೂ ಮಾಡತಕ್ಕಂಥದ್ದು ಬಹಳ ಸೂಕ್ತ ಎಂದು ಹೇಳುತ್ತಾ ಅವರ ಒಂದು ನಿಧನದಿಂದ ಆಗಿರತಕ್ಕ ನಷ್ಟವನ್ನು ತುಂಬಲು ಮತ್ತು ಅವರ ಕುಟುಂಬದವರಿಗೆ ಆಗಿರತಕ್ಕ ನೋವನ್ನು ಭರಿಸಿಕೊಳ್ಳಲು ಭಗವಂತನು ಅವರಿಗೆ ಶಕ್ತಿಯನ್ನು ಕೊಡಲಿ ಮತ್ತು ರಾಜ್ಯಕ್ಕೆ ಒಂದು ಒಳ್ಳೆಯ ಸಂದೇಶ ನಮ್ಮಿಂದ ಹೋಗಲಿ ಎಂದು ಮತ್ತೊಮ್ಮೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ, ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನಮ್ಮ ಪಕ್ಷದ ವತಿಯಿಂದ ನಮ್ಮ ಬೆಂಬಲವನ್ನು ಸೂಚಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಸಭಾಧ್ಯಕ್ಷರೇ, ತಾವು ಮಂಡಿಸಿರುವ ಸಂತಾಪ ಸೂಚನೆಯನ್ನು ಬೆಂಬಲಿಸಿ ಈ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದರ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳು, ಸಭಾನಾಯಕರು, ವಿರೋಧ ಪಕ್ಷದ ನಾಯಕರು ಮತ್ತೆ ಮಾನ್ಯ ಸೋಮಶೇಖರ್‌ರವರು ಮಾತನಾಡಿರತಕ್ಕ ವಿಷಯಗಳಿಗೆ ಸಮ್ಮತಿಯನ್ನು ಸೂಚಿಸಿ ಒಂದೆರಡು ಮಾತುಗಳನ್ನು ನಾನು ಮಾತನಾಡಲಿಕ್ಕೆ ಬಯಸುತ್ತೇನೆ. ಅದಕ್ಕೆ ಮುನ್ನ ತಾವು ಮಂಡಿಸಿರುವ ಸಂತಾಪ ಸೂಚನೆಯಲ್ಲಿ 1978ರಲ್ಲಿ ಅವರು ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದರು ಎಂದು ಹೇಳಿ ಅಚ್ಚಾಗಿದೆ, ಅದರಲ್ಲಿ 1972 ರಿಂದ 1975 ರವರೆಗೆ ಎಂದು ಒಂದು ತಿದ್ದುಪಡಿಯಾಗಬೇಕು. ಅವರು ತುರ್ತುಪರಿಸ್ಥಿತಿಯಲ್ಲಿ 1975ರ ಜೂನ್ 26ನೇ ತಾರೀಖು ರಾತ್ರಿ ಅವರು ಅರೆಸ್ಟ್ ಆಗಿದ್ದರು. ಅಲ್ಲಿಯವರೆಗೆ ಅವರು ವಿರೋಧಪಕ್ಷದ ನಾಯಕರಾಗಿದ್ದರು. 1978ರಲ್ಲಿ ಅಲ್ಲ ಎನ್ನತಕ್ಕ ತಿದ್ದುಪಡಿಯನ್ನು ತಾವು ಸ್ವೀಕರಿಸಬೇಕೆಂದು ಕೇಳಿ ಮಾನ್ಯ ಸಭಾಧ್ಯಕ್ಷರೇ, ಈ ಸದನದಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡಿದಂಥ ಅವಿಭಾಜ್ಯ ಕಾಂಗ್ರೆಸ್‌ನಿಂದ ಅವರ ಜೊತೆಯಲ್ಲಿ ಕೆಲಸ ಮಾಡಿದಂಥ ಅನೇಕ ಗಣ್ಯವ್ಯಕ್ತಿಗಳಿದ್ದಾರೆ. ಅವರಿಗೆ ಬಹಳ ಆತ್ಮೀಯರಾಗಿದ್ದವರು ಎಂದು ಹೇಳಿದರೆ ಮಾನ್ಯ ಘೋರ್ಪಡೆಯವರು, ಮಾನ್ಯ ರಂಗನಾಥ್‌ರವರು, ಮಾನ್ಯ ಚೌಡಯ್ಯನವರು, ಮಾನ್ಯ ಕೃಷ್ಣಾರವರು, ಮಾನ್ಯ ಚಂದ್ರೇಗೌಡರು, ಇವರೆಲ್ಲಾ ಕಾಂಗ್ರೆಸ್‌ನಲ್ಲಿದ್ದಾರೆ. ಕಾಂಗ್ರೆಸ್‌ನಲ್ಲಿ ಇಲ್ಲದೇ ಇದ್ದರೂ ಸಹಿತ ಅವರ ಅಭಿಮಾನಕ್ಕೆ ಒಳಗಾಗಿದ್ದಂಥ ಹಲವಾರು ನಾಯಕರುಗಳು ಈ ಸದನದಲ್ಲಿದ್ದಾರೆ. ನಾನಾದರೂ ಶ್ರೀಮಾನ್ ಹೆಗಡೆಯವರ ಬಗ್ಗೆ ವಿಶ್ಲೇಷಣೆ ಮಾಡತಕ್ಕ ದೊಡ್ಡ ವ್ಯಕ್ತಿತ್ವವನ್ನು ಗಳಿಸಿಲ್ಲ. ಆದರೆ ಒಬ್ಬ ವಿದ್ಯಾರ್ಥಿಯಾಗಿ 1974ರ ಸುಮಾರಿನಲ್ಲಿ ಶ್ರೀ ಲೋಕನಾಯಕ ಜಯಪ್ರಕಾಶ್‌ರವರ ನಾಯಕತ್ವದಲ್ಲಿ ದೇಶದಲ್ಲಿ ಸಂಪೂರ್ಣ ಕ್ರಾಂತಿಯ ಒಂದು ಚಳುವಳಿ ಪ್ರಾರಂಭವಾದ ಸನ್ನಿವೇಶದಲ್ಲಿ ಅವರಿಗೆ ನಾನು ಸಂಪರ್ಕಕ್ಕೆ ಬಂದಿದ್ದು. ಅವರ ಅಕ್ಕ ಮಹದೇವಿತಾಯಿಯವರು ಇನ್ನೂ ಚೆನ್ನಾಗಿದ್ದಂಥ ಸಂದರ್ಭದಲ್ಲಿ ಗಾಂಧಿಭವನದಲ್ಲಿ ಜೆಪಿ ಅವರನ್ನು ಭೇಟಿ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ಹೆಗಡೆಯವರು ಮತ್ತು ಅನೇಕ ವಿರೋಧ ಪಕ್ಷದ ನಾಯಕರುಗಳಿದ್ದರು. ಬಹಳಷ್ಟು ಜನ ಶ್ರೀ ಜಯಪ್ರಕಾಶ್ ನಾರಾಯಣ್ ಅವರನ್ನು ವೈಚಾರಿಕವಾಗಿ ಒಪ್ಪಿದವರು ಇರಲಿಲ್ಲ. ಆದರೆ ಶ್ರೀಮಾನ್ ಹೆಗಡೆಯವರು ವೈಚಾರಿಕವಾಗಿ ಶ್ರೀ ಜೆಪಿ. ಅವರ ಜೊತೆಯಲ್ಲಿ ಗುರುತಿಸಿಕೊಂಡಿರತಕ್ಕಂಥ ಒಬ್ಬ ಮಹಾನ್ ಮುಖಂಡರಾಗಿದ್ದರು. ಅದಕ್ಕೆ ಕಾರಣ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅವರು ಬನಾರಸ್ ವಿಶ್ವವಿದ್ಯಾನಿಲಯದಲ್ಲಿ ಪಡೆದಂಥ ಶಿಕ್ಷಣದ ಜೊತೆಗೆ ಅವರ ಪ್ರಾಥಮಿಕ ಶಿಕ್ಷಣವನ್ನು ವಿನೋಬಾಜಿಯವರ ಆಶ್ರಮದಲ್ಲಿ ಅವರು ಪಡೆದಿದ್ದರು ಎನ್ನತಕ್ಕಂಥದ್ದನ್ನು ಅವರು ಪದೇ ಪದೇ ಜೀವನದ ಕೊನೆಯವರೆಗೂ ಸಹಿತ ವಿನೋಬಾ ಅವರನ್ನು ಅವರು ನೆನೆಸಿಕೊಳ್ಳುತ್ತಿದ್ದರು. ವಿನೋಬಾ ಅವರು ತುರ್ತುಪರಿಸ್ಥಿತಿ ಕಾಲವನ್ನು ಇದೊಂದು ಮಹತ್ವದ ಪರ್ವದ ಕಾಲ ಎಂದು ಹೇಳಿ ಇಂದಿರಾಗಾಂಧಿಯವರಿಗೆ indirect ಆಗಿ ಬೆಂಬಲವನ್ನು ಸೂಚನೆ ಮಾಡಿದಂಥ ಸಂದರ್ಭದಲ್ಲಿ ಶ್ರೀ ರಾಮಕೃಷ್ಣ ಹೆಗಡೆಯವರು ಬಹಳ ನೊಂದಿದ್ದರು. ಆದರೆ ವಿನೋಬಾಜಿ ಅವರ ವಿಚಾರಗಳನ್ನು ಮಾತ್ರ ಅವರು ಯಾವತ್ತೂ ಸಹಿತ ಮರೆತವರಲ್ಲ. ಶ್ರೀ ಜೆ.ಪಿ. ಅವರ ಒಡನಾಡಿಗಳಾಗಿ ಜೆ.ಪಿ. ಅವರ ಸಂಘರ್ಷದ ಒಂದು ಹೋರಾಟದಲ್ಲಿ ಅವರು ಭಾಗವಹಿಸಿದಂಥ ಫಲ ನಮಗೆಲ್ಲಾ ಗೊತ್ತಿರತಕ್ಕಂಥದ್ದು. ಅವರು ಮಾನ್ಯ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಸಚಿವರಾಗಿ ಏನು

ಒಂದು ರೀತಿಯಲ್ಲಿ ಮುಖ್ಯಮಂತ್ರಿಗಳ blue eyed boy ಅನ್ನುವ ರೀತಿಯಲ್ಲಿ ಮುಖ್ಯಮಂತ್ರಿಗಳ ಎಲ್ಲಾ ಕೆಲಸಕಾರ್ಯಗಳಿಗೂ ಸಹಿತ ಹೆಗಡೆಯವರನ್ನೇ ಅವರು ಮುಂದು ಮಾಡುತ್ತಿದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಕೊನೆಯವರೆಗೂ ಸಹಿತ ನಾನು ಶ್ರೀ ನಿಜಲಿಂಗಪ್ಪನವರ ಶಿಷ್ಯ ಎಂದು ಹೇಳಿಕೊಳ್ಳುವುದಕ್ಕೆ ಬಹಳ ಹೆಮ್ಮೆಪಡುತ್ತಿದ್ದರು. ಮಾನ್ಯ ಅಧ್ಯಕ್ಷರೇ, ಹೆಗಡೆಯವರು ತುರ್ತುಪರಿಸ್ಥಿತಿಯಲ್ಲಿ 1975ರಲ್ಲಿ ಅವರನ್ನು ಸುಮಾರು 18 ತಿಂಗಳುಗಳ ಕಾಲ ಜೈಲಿನಲ್ಲಿಟ್ಟಂಥ ಸಂದರ್ಭದಲ್ಲಿ ಈ ಸದನದ ಸದಸ್ಯರಾಗಿರತಕ್ಕ ಮಾನ್ಯ ಸುರೇಶ್‌ಕುಮಾರ್‌ರವರು ಮತ್ತೆ ನಾವು ಅವರ ಜೊತೆಯಲ್ಲಿ ಇರತಕ್ಕ ಸಂದರ್ಭ ನಮಗೆ ಒದಗಿ ಬಂದಿತ್ತು. ಮಾನ್ಯ ಅಟಲ್ ಬಿಹಾರಿ ವಾಜಪೇಯಿಯವರು, ಮಾನ್ಯ ಅದ್ವಾನಿಯವರು, ಮಾನ್ಯ ಮಧು ದಂಡವತೆ ಅವರು, ಮಾನ್ಯ ಎಸ್.ಎನ್. ಮಿಶ್ರಾರವರು, ಶ್ರೀಮಾನ್ ದೇವೇಗೌಡರು, ಮಾನ್ಯ ಜೆ.ಹೆಚ್. ಪಟೇಲರು, ಇವರೆಲ್ಲರ ಜೊತೆಯಲ್ಲಿ ನಾವು 18 ತಿಂಗಳುಗಳ ಕಾಲ ಕಾಲವನ್ನು ಕಳೆದದ್ದ ನನ್ನ ಮಟ್ಟಿಗೆ ಅದೊಂದು ಎರಡನೇ ವಿಶ್ವವಿದ್ಯಾನಿಲಯ. ನಾನು ವಿಶ್ವವಿದ್ಯಾನಿಲಯದಲ್ಲಿ ಒಂದು ಪದವಿಯನ್ನು ಪಡೆದಿದ್ದರೆ ಜೈಲಿನಲ್ಲಿ ಹೆಗಡೆಯವರ ಸಹವಾಸದಲ್ಲಿ ಮತ್ತೊಂದು ಪದವಿಯನ್ನು ಪಡೆದಿದ್ದೇನೆ ಎನ್ನತಕ್ಕಂಥದ್ದನ್ನೂ ಈ ಸಂದರ್ಭದಲ್ಲಿ ಬಹಳ ಹೆಮ್ಮೆಯಿಂದ ಹೇಳಿಕೊಳ್ಳುವುದಕ್ಕೆ ಬಯಸುತ್ತೇನೆ. ಮರೆಯಲಿಕ್ಕೆ ಸಾಧ್ಯವಾಗದೇ ಇರತಕ್ಕ ಒಂದು ನೆನಪು ಅಂದರೆ 1975ರಲ್ಲಿ ಅವರನ್ನು ಬೆಳಗಾವಿ ಹಿಂಡಲಗಾ ಜೈಲಿಗೆ ಕಳುಹಿಸಿಕೊಟ್ಟಿದ್ದರು.

11.40

ಆ ಸಂದರ್ಭದಲ್ಲಿ ಬೆಳಗಾವಿಯ ಯಾವ ನಾಯಕರೂ ಸಹಿತ ನಮ್ಮ ಶ್ರೀ ಎ.ಬಿ. ಪಾಟೀಲರ ತಂದೆ ಶ್ರೀಮಾನ್ಯ ಬಸವನಗೌಡ ಪಾಟೀಲರು, ಮತ್ತೆ ಶ್ರೀಮಾನ್ ರಾಮ್ ಬಾವ್ ಪೋತ್‌ದಾರ್ ಅವರಿಬ್ಬರೂ ಬದುಕಿದ್ದಾರೆ. ಅವರಿಬ್ಬರನ್ನೂ ಬಿಟ್ಟು ಬೇರೆ ಯಾರೂ ಸಹಿತ ಬಂದು ನೋಡಲಿಕ್ಕೂ ಸಹ ಹೆದರತಕ್ಕ ಒಂದು ಸಂದರ್ಭ ಅದು. ಅಂತಹ ಸನ್ನಿವೇಶದಲ್ಲಿ ಮಾನ್ಯ ಹೆಗಡೆಯವರನ್ನು ಬೆಂಗಳೂರಿನ ಹೈಕೋರ್ಟ್‌ನಲ್ಲಿ ಪ್ರೆಸೆಂಟ್ ಮಾಡಬೇಕು; ಅವರನ್ನು ಕರೆದುಕೊಂಡು ಬಂದು ಹಾಜರಿ ಪಡಿಸಬೇಕು ಎನ್ನತಕ್ಕ ಒಂದು ಹೇಬಿಯಸ್ ಕಾರ್ಪಸ್ ಪಿಟಿಷನ್ ಹಾಕಿದ್ದರು. ಆ ಸಂದರ್ಭದಲ್ಲಿ ಹೆಗಡೆಯವರು ನಾನೇ ನನ್ನ ಕೇಸನ್ನು ಸ್ವತಃ ವಾದ ಮಾಡುತ್ತೇನೆ ಎನ್ನತಕ್ಕ ವಿಚಾರವನ್ನು ಹೇಳಿದಂತಹ ಸಂದರ್ಭದಲ್ಲಿ ಅವರನ್ನು ಕರೆದುಕೊಂಡು ಬಂದಾಗ ಇಡೀ ಜೈಲಿನಲ್ಲಿದ್ದಂತಹ ಸುಮಾರು 1500 ಖೈದಿಗಳು ಎರಡು ದಿನಗಳ ಕಾಲ ಊಟವನ್ನು ಬಿಟ್ಟು ಉಪವಾಸ ಮಾಡಿ ಕಣ್ಣಲ್ಲಿ ನೀರು ಹರಿಸಿರತಕ್ಕದ್ದನ್ನು ನಾನು ಇಂದಿಗೂ ಸಹಿತ ಮರೆಯಲಿಕ್ಕೆ ಸಾಧ್ಯವಿಲ್ಲ ಮಾನ್ಯ ಸಭಾಧ್ಯಕ್ಷರೆ. ಅಂತಹ ಒಂದು ವ್ಯಕ್ತಿತ್ವವನ್ನು ಅವರು ಪಡೆದುಕೊಂಡಿದ್ದರು. ಮೊರಾರ್ಜಿ ಭಾಯಿಯವರ ಆಪ್ತರಾಗಿ 1977 ರಿಂದ 1983ನೇ ಇಸವಿಯವರಗೂ ಸಹಿತ ಅವರು ರಾಷ್ಟ್ರ ರಾಜಕಾರಣದಲ್ಲಿ ಬಹಳ ಮಹತ್ತರವಾದಂತಹ ಪಾತ್ರವನ್ನು ಮಾನ್ಯ ಚಂದ್ರಶೇಖರ್ ಅವರ ಜೊತೆಯಲ್ಲಿ ನಿರ್ವಹಿಸಿದ್ದರು ಎನ್ನುವುದನ್ನು ನಾವ್ಯಾರೂ ಮರೆಯಲಿಕ್ಕೆ ಸಾಧ್ಯವಿಲ್ಲ. ಅದಾದ ನಂತರ ಅವರು ಮುಖ್ಯಮಂತ್ರಿಗಳಾದ ಮೇಲೆ ಒಂದು ಸನ್ನಿವೇಶ ನನಗೆ ಜ್ಞಾಪಕ ಬರುತ್ತದೆ. ಅವರಿಗೆ 18–20 ಜನ ಶಾಸಕರು ತಮ್ಮ ಸ್ಥಾನವನ್ನು ಬಿಟ್ಟು ಕೊಡುತ್ತೇನೆಂದು ಮುಂದೆ ಬಂದರು. ಆಗ ತರೀಕೆರೆಯಲ್ಲಿ ಸಹಿತ ಒಂದು ಉಪ ಚುನಾವಣೆ ನಡೆಯಬೇಕಾಗಿತ್ತು. ಶ್ರೀ ಬಸವರಾಜ್ ಅವರು ತರೀಕೆರೆಯಲ್ಲಿ ತೀರಿಕೊಂಡಿದ್ದರು. ಆ ಸಂಧರ್ಭದಲ್ಲಿ ಅವರು ನಾನು ಕನಕಪುರವನ್ನು ಆಯ್ಕೆ ಮಾಡಿಕೊಳ್ಳುತ್ತೇನೆ, ನಾನು ಕನಕಪುರದಲ್ಲೇ ಚುನಾವಣೆಗೆ ನಿಲ್ಲುತ್ತೇನೆ

ಎನ್ನುವ ತೀರ್ಮಾನವನ್ನು ತೆಗೆದುಕೊಂಡರು. ಮಾನ್ಯ ಹೆಗಡೆಯವರನ್ನು ಶ್ರೀ ದೇವೇಗೌಡರು ಒಪ್ಪಿಸಿದರು. ಆ ಸಂದರ್ಭದಲ್ಲಿ ನಾವು ಕನಕಪುರದಿಂದ ಚುನಾವಣಾ ಪ್ರಚಾರ ಕಾರ್ಯವನ್ನು ಮುಗಿಸಿಕೊಂಡು ವಾಪಸ್ ಬರುತ್ತಿದ್ದೆವು. ಒಬ್ಬ ಮುಸಲ್ಮಾನ್ ಮಹಿಳೆ ಬಂದು ನನ್ನ ಗಂಡ ನಿನ್ನೆ ಲಾರಿ ಅಪಘಾತದಲ್ಲಿ ಸತ್ತಿದ್ದಾನೆ, ಅವನು ಚಾಲಕನಾಗಿದ್ದ. ನನಗೆ ಮನೆ ಇಲ್ಲ, ನಾನು ಯಾವ ರೀತಿ ಜೀವನ ಮಾಡಬೇಕು ಎನ್ನತಕ್ಕ ಮಾತನ್ನು ಹೇಳಿದರು. ಅವತ್ತು ರಾತ್ರಿ ವಾಪಸ್ ಬಂದು ಕುಮಾರ ಕೃಪಾದಲ್ಲಿ ಕುಳಿತು ಈ ವಿಧವೆಯರಿಗೆ ಏನಾದರೂ ಸಹಾಯ ಮಾಡಬೇಕು ಎಂದು ವಿಧವಾ ವೇತನದ ಪ್ರಸ್ತಾವ ಮಾಡಿದರು. ಈ ವಿಧವಾ ವೇತನದ ಕಾರ್ಯಕ್ರಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಪ್ರಥಮ ಬಾರಿಗೆ ಅವತ್ತು ಹೊರಹೊಮ್ಮಿತ್ತು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಎಸ್.ಎಂ. ಕೃಷ್ಣರವರು ಹೇಳಿದ ಹಾಗೆ ಅವರು ಮುಖ್ಯಮಂತ್ರಿಗಳಾಗಿ ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಬಹಳ ಮುಖ್ಯವಾಗಿ ಅಧಿಕಾರ ವಿಕೇಂದ್ರೀಕರಣದ ವಿಚಾರ ಇರಬಹುದು. ಯುವಕರಿಗೆ ಆದ್ಯತೆಯನ್ನು-ಕೊಡತಕ್ಕ ವಿಚಾರ ಇರಬಹುದು. ಇವತ್ತು ನಾವು ಅವರನ್ನು ನೆನೆಸಿಕೊಳ್ಳುತ್ತೇವೆ. ಇಡೀ ದೇಶದಲ್ಲಿ ಯಾರೂ ಸಹಿತ 18 ವರ್ಷಕ್ಕೆ ಮತದಾನದ ಹಕ್ಕನ್ನು ಕೊಡತಕ್ಕಂಥ ಕಾನೂನನ್ನು ಮಾಡಿರುವುದಕ್ಕೆ ಆಗಿರಲಿಲ್ಲ. ಅಂತಹ ಸಂದರ್ಭದಲ್ಲಿ ಮಾನ್ಯ ಹೆಗಡೆಯವರು ಪ್ರಥಮ ಬಾರಿಗೆ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯನ್ನು ಮಾಡಿದಂತಹ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ, ಇಡೀ ದೇಶದಲ್ಲಿ ಯಾವ ರಾಜ್ಯದಲ್ಲೂ ಸಹಿತ ಮಾಡಿರಲಿಕ್ಕೆ ಆಗಿರಲಿಲ್ಲ. 18 ವರ್ಷಕ್ಕೆ ಮತದಾನವನ್ನು ಕೊಡತಕ್ಕಂಥ ಕೆಲಸವನ್ನೂ ಸಹಿತ ಮಾನ್ಯ ಹೆಗಡೆಯವರು ಮಾಡುವುದರ ಜೊತೆಗೆ ಅವರಿಗೆ ಎರಡನೇ ಪೀಳಿಗೆಯ ನಾಯಕರನ್ನು ಬೆಳೆಸತಕ್ಕದ್ದು ಎಂದರೆ ಬಹಳ ಇಷ್ಟ. ಮಾನ್ಯ ಹೆಗಡೆಯವರ ಜೊತೆಯಲ್ಲಿ ಮಾನ್ಯ ಬೊಮ್ಮಾಯಿಯವರು, ದಿವಂಗತ ಶ್ರೀ ಬಿ. ರಾಚಯ್ಯನವರು, ಶ್ರೀ ನಜೀರ್ ಸಾಬ್‌ರವರು, ಮಾನ್ಯ ದೇವೇಗೌಡರು, ಶ್ರೀ ಜೆ.ಎಚ್. ಪಟೇಲ್ ಅವರು ಇವರೆಲ್ಲಾ ಅವರ ಸಮಾನ ವಯಸ್ಸಿನ ನಾಯಕರುಗಳು. ಅದೇ ರೀತಿ ಶ್ರೀಮಾನ್ ಚಂದ್ರೇಗೌಡರು ಸಹಿತ ಆಗಿದ್ದರು, ತಾವು ಅಧ್ಯಕ್ಷರಾಗಿದ್ದೀರಿ. ಅನೇಕ ಸಂದರ್ಭಗಳಲ್ಲಿ ಸರ್ಕಾರ ಇಕ್ಕಟ್ಟಿಗೆ ಸಿಕ್ಕಿ ಹಾಕಿಕೊಂಡಿತ್ತು. ಅನೇಕ ಸಾಧನೆಗಳನ್ನು ಮಾಡಿದ್ದರೂ ಸಹಿತ ಅಡಚಣೆಗಳ ಇದ್ದವು. ಕಾಂಗ್ರೆಸ್ಸೇತರ ಪ್ರಥಮ ಸರ್ಕಾರ ಅದು. ಅದನ್ನು ಕಿತ್ತು ಹಾಕಬೇಕೆಂಬ ಪ್ರಯತ್ನ ಬಹಳ ನಡೆಯಿತು. ಆದರೂ ಅವರು ಯಾವುದಕ್ಕೂ ಸಹಿತ ಎದೆಗುಂದಲಿಲ್ಲ. ಎರಡನೆಯ ಹಂತದ ನಾಯಕರನ್ನು ಇವತ್ತು ಬೆಳೆಸಬೇಕಾದರೆ ಅದು ನಾನು ಇರಬಹುದು; ಈ ಸದನದಲ್ಲಿ ಕೈಗಾರಿಕಾ ಸಚಿವರಾದಂತಹ ಮಾನ್ಯ ದೇಶಪಾಂಡೆಯವರು ಇರಬಹುದು. ಮಾನ್ಯ ಎಂ.ಪಿ. ಪ್ರಕಾಶ್ ಅವರು ಇರಬಹುದು. ಶ್ರೀ ರಮೇಶ್ ಜಿಗಜಿಣಗಿಯವರು ಅವರು ಇರಬಹುದು; ಶ್ರೀ ಜೀವಿಜಯಾ ಇರಬಹುದು; ನಾವೆಲ್ಲರೂ ಸಹಿತ ಯುವಕರು. ಯುವಕರಲ್ಲಿ ಅಪಾರವಾದಂತಹ ಒಂದು ನಂಬಿಕೆಯನ್ನು ಅವರು ಇಟ್ಟು ಕೊಂಡಿದ್ದರು. ಮತ್ತೆ ಅವರು ಹಾಕಿದಂತಹ ಕೆಲವು ಕಾರ್ಯಕ್ರಮಗಳು ಅಂದರೆ, ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡತಕ್ಕಂಥ ಕಾರ್ಯಕ್ರಮ. ರೈತರ ಸಾಲದ ಮೇಲೆ ಇದ್ದಂತಹ ಬಡ್ಡಿಯನ್ನು ಮನ್ನಾ ಮಾಡಿದಂತಹ ಕಾರ್ಯಕ್ರಮ, ವಿಧವಾ ವೇತನದ ಕಾರ್ಯಕ್ರಮ, ತಾಳಿ ಭಾಗ್ಯ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ಮತ್ತು ಅಂಧರಿಗೆ ಓಡಾಡಲಿಕ್ಕೆ ಬಸ್ ಪಾಸ್‌ಗಳು. ಈ ರೀತಿ ಹಲವು ಹತ್ತಾರು ಕಾರ್ಯಕ್ರಮಗಳನ್ನು ಹಾಕಿರುವುದರ ಜೊತೆಗೆ ಅಧಿಕಾರದ ವಿಕೇಂದ್ರೀಕರಣವನ್ನು ಮಾಡುವುದರ

ಜೊತೆಗೆ ಬಹುಶಃ ಪ್ರಥಮ ಬಾರಿಗೆ ಅಂತರ್‌ರಾಜ್ಯಗಳು, ಸೆಂಟರ್ ಮತ್ತು ಸ್ಟೇಟ್ ರಿಲೇಷನ್‌ಶಿಪ್ ಬಗ್ಗೆ ಮಾತನಾಡಿದಂತಹ ಮುಖ್ಯಮಂತ್ರಿಗಳ ಬಗ್ಗೆ ಅವರೂ ಪ್ರಥಮರಾಗಿದ್ದರು. ಸ್ಟೇಟ್ ಮತ್ತು ಸೆಂಟರ್ ರಿಲೇಷನ್‌ಶಿಪ್ ಬಗ್ಗೆ ಸರ್ಕಾರಿಯ ಕಮಿಷನ್ ಅನ್ನು ಜಾರಿಗೊಳಿಸಬೇಕಾದರೆ, ಇರತಕ್ಕ ವರದಿಯನ್ನು ಜಾರಿಗೊಳಿಸಬೇಕು ಎಂದು ಹೇಳಿ ಆವತ್ತಿನ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀಮತಿ ಇಂದಿರಾಗಾಂಧಿಯವರಿಗೆ ಮನವಿ ಮಾಡಿದ್ದರು. ಅದಾದ ನಂತರ ಶ್ರೀ ರಾಜೀವ್ ಗಾಂಧಿ ಯವರು ಪ್ರಧಾನ ಮಂತ್ರಿಗಳಾಗಿದ್ದರು. ಅವೆರಡೂ ಸಂದರ್ಭಗಳ ಸಹಿತ ಹೋರಾಟವನ್ನು ಮಾಡಿದಂತಹ ಕೀರ್ತಿ ಮಾನ್ಯ ಹೆಗಡೆಯವರಿಗೆ ಸಲ್ಲಬೇಕಾಗುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ, ಸಂಸ್ಕೃತಿ ಕ್ಷೇತ್ರದಲ್ಲಿ, ಚಲನಚಿತ್ರ ರಂಗ, ಕ್ರೀಡೆ, ಎಲ್ಲದರಲ್ಲೂ ಸಹಿತ ಒಂದು ರೀತಿಯ ವರ್ಣಮಯ, ವರ್ಣರಂಜಿತ ವ್ಯಕ್ತಿತ್ವನ್ನು ಮಾನ್ಯ ಹೆಗಡೆಯವರು ಪಡೆದಿದ್ದರು. ಮತ್ತು ವಿಶೇಷವಾಗಿ ಉತ್ತರ ಕರ್ನಾಟಕದಿಂದ ಬಂದಿರತಕ್ಕ ನಾಯಕರುಗಳ ಪೈಕಿ ಇಡೀ ದಕ್ಷಿಣ ಕರ್ನಾಟಕದಲ್ಲಿ ಮನೆ ಮಾತಾಗಿರತಕ್ಕಂಥ ಕೆಲವೇ ಕೆಲವು ನಾಯಕರುಗಳಲ್ಲಿ ಮಾನ್ಯ ಹೆಗಡೆಯವರು ಮೊದಲಿಗರಾಗಿದ್ದರು. ಶ್ರೀಮಾನ್ ವೀರೇಂದ್ರ ಪಾಟೀಲ್ ಅವರನ್ನು ನಾವು ನೆನೆಸಿಕೊಳ್ಳುತ್ತೇವೆ. ಶ್ರೀ ವೀರೇಂದ್ರ ಪಾಟೀಲರನ್ನು ಯಾರೂ ಸಹಿತ ಕಲ್ಬುರ್ಗಿಯವರು ಎಂದು ಹೇಳುವುದಿಲ್ಲ. ಕೊಡಗಿನಿಂದ ಹಿಡಿದು, ಬೀದರ್‌ನಿಂದ ಹಿಡಿದು, ಬೆಳಗಾಮ್‌ವರೆಗೆ ಸಹಿತ ವೀರೇಂದ್ರ ಪಾಟೀಲರನ್ನು ಉತ್ತರ ಕರ್ನಾಟಕದ ನಾಯಕರು ಎಂದು ಯಾರೂ ಕರೆಯುವುದಿಲ್ಲ. ಅದೇ ರೀತಿಯಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು, ಅವರು ಬಸವನಗುಡಿಯಿಂದ ಶಾಸಕರಾಗಿದ್ದರು, ಕನಕಪುರದಿಂದ ಶಾಸಕರಾಗಿದ್ದರು, ಕಾರವಾರದಿಂದ ಶಾಸಕರಾಗಿದ್ದರು. ಆದರೆ ಅವರು ಯಾರನ್ನೂ ಸಹಿತ ಕೇವಲ ಒಂದು ಜಿಲ್ಲೆಯ ನಾಯಕರಾಗಿ ಒಂದು ಭಾಗದ ನಾಯಕರಾಗಿ ಇರಲಿಲ್ಲ. ಆದರೆ ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಒಂದು ವಿಶಿಷ್ಟವಾದ ಪರಿಸ್ಥಿತಿ ಇದೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ಜನತೆಯ ಭಾವನೆಗಳ ಬೆಸುಗೆಯಾಗಿದ್ದರು, ಕೊಂಡಿ ಆಗಿದ್ದರು ಅನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅವರು ರಾಜಕೀಯ ವೈರಿಗಳನ್ನೂ ಸಹಿತ ಒಂದು ರೀತಿಯ ವಿಶ್ವಾಸದಿಂದ ನೋಡುತ್ತಿದ್ದರು. ಅವರ ಪ್ರತಿಭೆಯನ್ನು ಗುರ್ತು ಮಾಡಿದಂತಹ ಒಬ್ಬ ಧೀಮಂತ ನಾಯಕರಾಗಿದ್ದರು. ದೆಹಲಿಯಲ್ಲಿ, ರಾಷ್ಟ್ರ ಮಟ್ಟದಲ್ಲಿ, ಪ್ರತಿ ಒಂದು ರಾಜ್ಯವಲ್ಲೂ ಸಹಿತ ತಾವು ಕರ್ನಾಟಕದವರು ಎಂದು ಹೇಳಿದ ತಕ್ಷಣವೇ, ಕರ್ನಾಟಕದ ಶಾಸಕರು ಎಂದು ಹೇಳಿದ ತಕ್ಷಣವೇ "ಹೆಗಡೆ ಸಾಬ್ ಕೈಸೇ ಹೈ" ಎಂದು ಕೇಳತಕ್ಕದ್ದು ಪ್ರಚಲಿತವಾದಂತಹ ಒಂದು ಮಾತು. ಬಹಳಷ್ಟು ವಿನೂತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಸಂಸ್ಥೆಗಳನ್ನು ಪ್ರಾರಂಭ ಮಾಡಿ ಹೋಗಿರತಕ್ಕ ಕೀರ್ತಿ, ಜಾತ್ಯಾತೀತ ಮನೋಭಾವದಿಂದ ನೋಡತಕ್ಕ ಕೀರ್ತಿ ಅವರದ್ದು ಆಗಿದೆ. ಇವತ್ತು ನಮಗೆಲ್ಲಾ ಗೊತ್ತಿದೆ. ನಾವು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ನಮಗೆಲ್ಲಾ ಒಂದು ವಿಶೇಷವಾದಂತಹ ಸುತ್ತೋಲೆಯನ್ನು ಹೊರಡಿಸಿದ್ದರು. ಏನು ಆ ಸುತ್ತೋಲೆ ಎಂದರೆ, ಯಾವುದೇ ಮಂತ್ರಿ ತನ್ನ ಸ್ವಜಾತೀಯ ಆಪ್ತ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳಬಾರದು. ಏಕೆಂದರೆ ನಿಮಗೆ ಗೊತ್ತಿದೆ. ಇವತ್ತು ರಾಜಕಾರಣ ಏನು ಎಂದರೆ ಏನು ಎಂದು ಹೇಳಿ ತಮಗೆ ಗೊತ್ತಿದೆ. ನಮ್ಮ ಜಾತಿಯವರನ್ನು ಮಾತ್ರ ನಾವು ನಂಬಿಕೆ ಇಟ್ಟುಕೊಳ್ಳುವಂತಹ ಒಂದು ಪ್ರತೀತಿ ಇದೆ. ಆಗ ಯಾರೂ ಸಹಿತ ಅವರ ಜಾತಿಯವರನ್ನು ಆಪ್ತ ಕಾರ್ಯದರ್ಶಿಗಳಾಗಿ ನೇಮಕ ಮಾಡಬಾರದು ಎನ್ನುವಂತಹ ಸುತ್ತೋಲೆಯನ್ನು ಸರ್ಕಾರಿ ಆಜ್ಞೆಯನ್ನು ಮಾಡಿರತಕ್ಕದ್ದು ಅವರ ಜಾತ್ಯಾತೀತ ಮನೋಭಾವನೆಯನ್ನು

ತೋರಿಸುತ್ತಿತ್ತು ಎಂದು ಹೇಳುತ್ತೇನೆ. ನನಗೆ ವಿಶೇಷವಾಗಿ ರಾಜಕೀಯವಾಗಿ ಬೆಳೆಯಲಿಕ್ಕೆ ಬಹಳ ದೊಡ್ಡ ಅವಕಾಶಗಳನ್ನು ಕಲ್ಪಿಸಿ 1974 ರಿಂದ 2004ರವರೆಗೂ 30 ವರ್ಷಗಳ ಕಾಲ ಆಶೀರ್ವಾದವನ್ನು ಮಾಡಿದಂತಹ ಒಬ್ಬ ಮಹಾನ್ ಮುಖಂಡರು. ನನ್ನ ಮತ ಕ್ಷೇತ್ರವಾದ ಕನಕಪುರ ಕ್ಷೇತ್ರವು 1983ರಲ್ಲಿ ಹಿಂದುಳಿದಂತಹ ಒಂದು ತಾಲ್ಲೂಕಾಗಿತ್ತು. ಮಾನ್ಯ ಹೆಗಡೆಯವರು 1984ರಲ್ಲಿ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಆ ತಾಲ್ಲೂಕಿನ ಅನೇಕ ನೀರಾವರಿ ಯೋಜನೆಗಳಿಗೆ ಅವತ್ತು ಒಪ್ಪಿಗೆಯನ್ನು ಕೊಟ್ಟು, ಬಹುತೇಕ ನೀರಾವರಿ ಯೋಜನೆಗಳಿಗೆ ಅಡಿಗಲ್ಲನ್ನು ಹಾಕಿರತಕ್ಕಂಥದನ್ನು ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಶ್ರೀಮಾನ್ ಹೆಗಡೆಯವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯದಲ್ಲಿ ಒಂದು ಛೇರನ್ನು ನಾನು ಮಾಡುತ್ತೇನೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುವುದರ ಜೊತೆಗೆ ಸರ್ಕಾರದ ಯಾವುದಾದರೂ ಒಂದು ದೊಡ್ಡ ಸಂಸ್ಥೆಗೆ ಅವರ ಹೆಸರನ್ನು ಇಡಬೇಕೆಂದು ಸಲಹೆ ಮಾಡುತ್ತೇನೆ. ಈಗ ನಜೀರ್ ಸಾಬ್ ಅವರ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಕಟ್ಟಿದ್ದೇವೆ. ದಿವಂಗತ ದೇವರಾಜು ಅರಸ್ ಅವರ ಹೆಸರನ್ನು ಒಂದು ಸಂಸ್ಥೆಗೆ ಇಟ್ಟಿದ್ದೇವೆ. ಅದೇ ರೀತಿಯಲ್ಲಿ ವಿಶ್ವವಿದ್ಯಾನಿಲಯದಲ್ಲಿ ಪ್ರಾರಂಭ ಮಾಡತಕ್ಕ ಛೇರಿನ ಜೊತೆಗೆ ಸರ್ಕಾರದ ಯಾವುದಾದರೂ ಒಂದು ಕಾರ್ಯಕ್ರಮಕ್ಕೆ ಅಥವಾ ಸರ್ಕಾರದ ಸಂಸ್ಥೆಗೆ ಮಾನ್ಯ ಹೆಗಡೆಯವರ ಹೆಸರನ್ನು ಇಟ್ಟರೆ ಅದು ಚಿರಂತನ ಕಾಲ ಉಳಿಯುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿ ಈ ಸಂದರ್ಭದಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಂತಹ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, ನಿನ್ನೆ ಮುಂಜಾನೆ 9.00 ಗಂಟೆಗೆ ನಾನು ಅವರ ಮನೆಗೆ ಹೋಗಿದ್ದೆ. ಅವರ ಆಶೀರ್ವಾದವನ್ನು ಪಡೆದುಕೊಂಡೇ ಬಂದೆ. ಆದರೆ ಅವರು ನಿನ್ನೆಯೇ ನಮ್ಮಿಂದ ದೂರ ಆಗುತ್ತಾರೆ ಎಂಬ ಕಲ್ಪನೆ ಮಾಡಿರಲಿಲ್ಲ. ಅವರು ನಮ್ಮೆಲ್ಲರಿಗೂ ನಾಯಕರು. ಅವರು ಕೊಟ್ಟ ಉತ್ತೇಜನ, ವಿಶ್ವಾಸ ನಾನು ಯಾವಾಗಲೂ ಮರೆಯಲಿಕ್ಕೆ ಸಾಧ್ಯ ಇಲ್ಲ. ಈಗಾಗಲೇ ಮಾನ್ಯ ಸಿಂಧ್ಯಾಜೀಯವರು ಹೇಳಿದ ಹಾಗೆ ಇಲ್ಲಿ ನಾನು ಇರಬಹುದು, ಸಿಂಧ್ಯಾಜಿಯವರು ಇರಬಹುದು. ಶ್ರೀ ಇನಾಂದಾರ್ ಅವರು ಇರಬಹುದು, ಶ್ರೀ ಎಂ.ಪಿ. ಪ್ರಕಾಶ್ ಅವರು ಇರಬಹುದು ಶ್ರೀ ಸಿದ್ಧರಾಮಯ್ಯನವರು ಇರಬಹುದು, ಶ್ರೀ ರೋಷನ್ ಬೇಗ್ ಅವರು ಇರಬಹುದು, ಶ್ರೀ ಸೋಮಶೇಖರ್ ಅವರು ಇರಬಹುದು. ಅವರ ಮಾರ್ಗದರ್ಶನದಲ್ಲಿ, ಅವರ ಗರಡಿಯಲ್ಲಿ ನಾವು ಬೆಳೆದಿದ್ದೇವೆ. ಕೆಲವು ಜನ ಇದನ್ನು ಒಪ್ಪಿಕೊಳ್ಳಬಹುದು; ಬಹಳಷ್ಟು ಜನ ಇದನ್ನು ಒಪ್ಪಿಕೊಳ್ಳುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಅವರಿಗೆ ವಿಶಾಲವಾದ ಮನಸ್ಸಿತ್ತು. ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಗಳು ಹೇಳಿರುವಂತೆ ಅವರಲ್ಲಿ ಯಾವಾಗಲೂ ಸೇಡಿನ ಮನೋಭಾವ ಇರಲಿಲ್ಲ. ಜನತಾ ಪಕ್ಷ ಹಾಗೂ ಜನತಾದಳದ ಜನಕರು ಅವರಾಗಿದ್ದರು. ತಮ್ಮದೇ ಪಕ್ಷದಿಂದ ಅವರು ಉಚ್ಛಾಟನೆಗೊಂಡಾಗ ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದರು. ಆಗ ನಾನು ಮತ್ತು ಅವರು ಕನ್ನಡ ಭವನದಲ್ಲಿದ್ದೆವು. ಅವರ ಉಚ್ಛಾಟನೆ ಮುಖ್ಯಮಂತ್ರಿಗಳಿಗೆ ಗೊತ್ತಿರಲಿಲ್ಲ. ಆ ಸಂದರ್ಭದಲ್ಲಿ ಪ್ರಧಾನಮಂತ್ರಿ ಸ್ಥಾನಕ್ಕೆ ಪ್ರಯತ್ನ ಮಾಡಬೇಕೆಂದು ಹಲವಾರು ಸ್ನೇಹಿತರು ಅವರಿಗೆ ಸಲಹೆ ನೀಡಿದರು. ನಮ್ಮ ಬಳಿಯಿದ್ದ ಮುಲಯಾಂ ಸಿಂಗ್ ಯಾದವ್‌ರವರು ಸಹ ಫೋನ್ ಮಾಡಿದರು. ಆದರೆ, ಶ್ರೀ ಹೆಗಡೆಯವರದ್ದು ಒಂದು

ವಿಚಿತ್ರ ಸ್ವಭಾವ. ಯಾರಿಗೋ ಹೇಳಿ ಅಧಿಕಾರ ಪಡೆದುಕೊಳ್ಳುವ ವ್ಯಕ್ತಿಯಲ್ಲ ಹಾಗೂ ಮತ್ತೊಬ್ಬರ ಕಾಲು ಹಿಡಿದು ಅಧಿಕಾರ ಪಡೆಯುವ ವ್ಯಕ್ತಿಯಲ್ಲ. ಅಧಿಕಾರ ಶಾಶ್ವತವಲ್ಲ. ಅಧಿಕಾರ ಜನರ ಕಲ್ಯಾಣಕ್ಕೆ ಬಡವರ ಕಲ್ಯಾಣಕ್ಕೆ ಉಪಯೋಗವಾಗಬೇಕೆಂದು ಮನಗಂಡು ಅದರಲ್ಲೇ ವಿಶ್ವಾಸವಿಟ್ಟ ಒಬ್ಬ ವ್ಯಕ್ತಿಯಾಗಿದ್ದರು. ಈಗಾಗಲೇ ಹಲವಾರು ಸ್ನೇಹಿತರು ಮಾತನಾಡುತ್ತಾ, ಅವರ ಕಾಲದಲ್ಲಿ ಹಲವಾರು ಯೋಜನೆಗಳನ್ನು ಜಾರಿಗೆ ತಂದಿರುವುದನ್ನು ಪ್ರಸ್ತಾಪಿಸಿದರು. ಉದಾಹರಣೆಗೆ ಎರಡು ರೂಪಾಯಿಗಳಿಗೆ ಒಂದು ಕಿಲೋ ಅಕ್ಕಿ ನೀಡುವುದು, ಶೇಕಡ 7ರ ದರದಲ್ಲಿ ರೈತರಿಗೆ ಸಾಲ ಕೊಡುವುದಿರಬಹುದು, ಸಾಲ ಮನ್ನಾ ಮಾಡುವುದಿರಬಹುದು, ಮಹಿಳೆಯರು, ರೈತರು ಹಾಗೂ ಯುವಕರ ಪರವಾಗಿ ಯೋಜನೆ ಹಮ್ಮಿಕೊಂಡಿದ್ದರಿಂದ ಈ ವರ್ಗದ ಜನರ ಪ್ರೀತಿಗೆ ಪಾತ್ರರಾಗಿದ್ದರು. ಮುಖ್ಯವಾಗಿ ಅವರು ತೋರಿಸಿದ ಪ್ರೀತಿಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ರಾಜಕೀಯದ ಕೆಲವು ಕಾರಣಗಳಿಂದಾಗಿ ನಾನು ಅವರಿಂದ ದೂರವಾದೆ. ಇದರಿಂದಾಗಿ ನನ್ನ ಮತ್ತು ಅವರಲ್ಲಿ ಪ್ರೀತಿ–ವಿಶ್ವಾಸವೇನೂ ಕಡಿಮೆಯಾಗಲಿಲ್ಲ. ಸದಾ ಕಾಲ ಅವರು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ನಾನು ಅವರ ಕುಟುಂಬದ ಸದಸ್ಯನಾಗಿ ಸಹ ಕೆಲಸ ಮಾಡುತ್ತಿದ್ದೆ. ಯುವಕರ ಬಗ್ಗೆ ಅವರಲ್ಲಿ ಬಹಳ ಅಭಿಮಾನವಿತ್ತು. ಸನ್ಮಾನ್ಯ ಸಿಂಧ್ಯಾರವರು ತಿಳಿಸಿದಂತೆ ಸೆಕೆಂಡ್ ಜನರೇಶನ್ ಬಗ್ಗೆ ಅವರಿಗೆ ವಿಶ್ವಾಸವಿತ್ತು. 1986ರಲ್ಲಿ ನಾವೆಲ್ಲರೂ ಪಾರ್ಟಿಕೆಲಸ ಮಾಡುವುದಕ್ಕೆ ತೆರಳಬೇಕೆಂದು ತಿಳಿಸಿದರು. ಆ ಸಮಯದಲ್ಲಿ ಪಂಚಾಯಿತಿ ಚುನಾವಣೆ ಇದ್ದುದರಿಂದ ಪಾರ್ಟಿ ಕೆಲಸ ಮಾಡುವುದಕ್ಕೋಸ್ಕರ ಕ್ಯಾಬಿನೆಟ್‌ನಲ್ಲಿದ್ದ 18 ಜನ ಮಂತ್ರಿಗಳನ್ನು ವಜಾಮಾಡಿದರು. ಪಾರ್ಟಿ ಕೆಲಸ ಮಾಡಿ ಬಂದ ನಂತರ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಜನತಾ ಪಕ್ಷದ ಆಡಳಿತ ಜಾರಿಗೆ ಬಂದಿತು. ಮತ್ತೆ ಕ್ಯಾಬಿನೆಟ್ ಅನ್ನು ಪುನರ್ರಚನೆ ಮಾಡುವ ಸಂದರ್ಭದಲ್ಲಿ "ದೇಶಪಾಂಡೆ, ಸಿಂಧ್ಯಾ, ಜೀವರಾಜ್ ಆಳ್ವರನ್ನು ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಮಾಡಬೇಡಿರಿ, ಅವರಿನ್ನೂ ಚಿಕ್ಕವರಿದ್ದಾರೆ" ಎಂದು ಹಲವಾರು ಹಿರಿಯ ನಾಯಕರು ಸಲಹೆ ನೀಡಿದರೂ ಅದನ್ನು ಅವರು ಒಪ್ಪಲಿಲ್ಲ. ಬದಲಿಗೆ 'ಈ ರಾಜ್ಯದ ಆಡಳಿತ ಸೆಕೆಂಡ್ ಜನರೇಶನ್ ಮುಖಾಂತರ ಆಗಬೇಕು, ಅವರಿಗೂ ನಾವು ಅವಕಾಶ ಕೊಡಬೇಕು' ಎಂದು ಹೇಳಿ 1986ರಲ್ಲಿ ನಮ್ಮನ್ನು ಕ್ಯಾಬಿನೆಟ್ ಮಂತ್ರಿಗಳನ್ನಾಗಿ ಮಾಡಿದರು. ನಮ್ಮ ಬಗ್ಗೆ ಬಹಳ ಪ್ರೀತಿ ತೋರಿಸಿದರು. ಅಂತಹ ಪ್ರೀತಿ ಸಿಗುವುದು ಬಹಳ ಕಷ್ಟ. ನಮ್ಮ ಜೀವನದಲ್ಲಿ ಬಹಳಷ್ಟು ರಾಜಕಾರಣಿಗಳನ್ನು ಕಂಡಿದ್ದರೂ ಅವರದು ಮಾತ್ರ charm personality. ಅವರದು ಯಾವಾಗಲೂ ನಗುಮುಖ. ಅದನ್ನು ನಾವ್ಯಾರೂ ಕೂಡ ಮರೆಯಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಒಂದು ವಿಚಾರ ಹೇಳಬೇಕೋ ಬೇಡವೋ ನನಗೆ ಗೊತ್ತಿಲ್ಲ. ಆದರೂ ಹೇಳಬೇಕಾಗುತ್ತದೆ; ತಮಗೆಲ್ಲರಿಗೂ ತಿಳಿದಂತೆ ಅವರ ಆರೋಗ್ಯ ಸ್ಥಿತಿ ಬಹಳ ಗಂಭೀರವಾಗಿತ್ತು. ಲಂಡನ್‌ಗೆ ಚಿಕಿತ್ಸೆಗಾಗಿ ತೆರಳಬೇಕಿತ್ತು. ಲಂಡನ್‌ಗೆ ಹೋಗುವಷ್ಟು ಆರ್ಥಿಕ ಶಕ್ತಿ ಅವರಲ್ಲಿ ಇರಲಿಲ್ಲ. ಹಾಗಾಗಿ, ಅವರು ಹಣಕ್ಕಾಗಿ ಮುಖ್ಯಮಂತ್ರಿಗಳನ್ನಾಗಲಿ, ಸರ್ಕಾರಕ್ಕಾಗಲಿ ಮನವಿ ಮಾಡಲು ಸಿದ್ಧರಿರಲಿಲ್ಲ. ಈ ವಿಚಾರದಲ್ಲಿ ನಮ್ಮ ನಾಯಕರನ್ನು ನಿಜವಾಗಿಯೂ ಅಭಿನಂದಿಸಬೇಕು. ಈ ವಿಷಯ ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಾದ ಬಳಿಕ ಅವರೇ ಸ್ವತಃ ಶ್ರೀ ರಾಮಕೃಷ್ಣ ಹೆಗಡೆಯವರ ಮನೆಗೆ ತೆರಳಿ ತಮ್ಮ ಚಿಕಿತ್ಸೆಗಾಗುವ ಖರ್ಚನ್ನು ಸರ್ಕಾರ ಭರಿಸುವುದಾಗಿ ತಿಳಿಸಿದ ಬಳಿಕವೇ ಅವರು ಒಪ್ಪಿಕೊಂಡರು. ಅಷ್ಟೊಂದು ಸ್ವಾಭಿಮಾನ ಅವರಲ್ಲಿ ಇತ್ತು. ಅವರು ಜೀವನದುದ್ದಕ್ಕೂ ಸ್ವಾಭಿಮಾನದ ಜೀವನ ನಡೆಸಿರುವುದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗುತ್ತದೆ.

ರಾಜಕಾರಣದಲ್ಲಿ ಅವರು ನಮಗೆಲ್ಲರಿಗೂ ಒಳ್ಳೆಯ ಮಾರ್ಗಗಳನ್ನು ಸೂಚಿಸಿದ್ದಾರೆ. ನನಗೆ ನೆನಪಿರುವಂತೆ 1977ರಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪಾರ್ಲಿಮೆಂಟ್ ಚುನಾವಣೆಗೆ ನಿಂತಾಗ ಸೋಲು ಅನುಭವಿಸಿದರು. ಆ ಸಂದರ್ಭದಲ್ಲಿ ಅವರು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ವಿರೋಧ ಪಕ್ಷದ ನಾಯಕರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಲ್ಲದೆ, ವಿಧಾನ ಪರಿಷತ್ ಸದಸ್ಯತ್ವಕ್ಕೂ ರಾಜೀನಾಮೆ ಕೊಟ್ಟರು. ಎಷ್ಟು ಜನ ಇಂತಹ ರಾಜಕಾರಣಿಗಳು ನಮಗೆ ಸಿಗಲು ಸಾಧ್ಯವೆಂದು ನಾವು ವಿಚಾರ ಮಾಡಬೇಕಾಗುತ್ತದೆ. ಕಾಂಗ್ರೆಸ್‌ಗೆ ಪರ್ಯಾಯವಾಗಿ ರಾಷ್ಟ್ರಮಟ್ಟದಲ್ಲಿ ಒಂದು ಸರ್ಕಾರ ರಚಿಸಬೇಕೆಂದು ಅವರು ಪ್ರಯತ್ನಿಸಿದರು. ಇದರ ಲಾಭ ಅವರಿಗೆ ಸಿಗದಿದ್ದರೂ ಒಂದು ದೃಷ್ಟಿಯಿಂದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರಿಗೆ ಲಾಭವಾಗಿದೆ ಎಂಬುದನ್ನು ಹೇಳಲೇಬೇಕಾಗುತ್ತದೆ. ಏಕೆಂದರೆ, ಅವರಲ್ಲಿ ಆ ಒಂದು ಕಲ್ಪನೆ, vision ಇತ್ತು. ಅಧಿಕಾರ ವಿಕೇಂದ್ರೀಕರಣದ ವಿಚಾರದಲ್ಲೂ ಅವರ ಪಾತ್ರ ಬಹಳ ಇತ್ತು. ಮತ್ತೊಂದು ಮಹತ್ವದ ವಿಚಾರವೇನೆಂದರೆ, ನಾವು ಬಹಳಷ್ಟು ರಾಜಕಾರಣಿಗಳು ಮುಂಜಾನೆಯಿಂದ ಸಂಜೆ ತನಕವೂ ರಾಜಕಾರಣ ಮಾಡುತ್ತಿರುತ್ತೇವೆ. ಅದು ಬಿಟ್ಟು ಬೇರೇನೂ ನಮಗೆ ಗೊತ್ತಿರುವುದಿಲ್ಲ. ಅವರ ಜೀವನದಲ್ಲಿ ಸಾಹಿತ್ಯ, ಕಲೆ, ಕ್ರೀಡೆ, ಮನೋರಂಜನೆಗೆ ಬಹಳ ದೊಡ್ಡ ಸ್ಥಾನವಿತ್ತು. ಈ ಪ್ರಕಾರಗಳಿಗೆ ಅವರು ಉತ್ತೇಜನ ನೀಡುತ್ತಾ ಬಂದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸ್ಥಾಪನೆಯಾದದ್ದು ಅವರ ಕಾಲದಲ್ಲೇ. ಅದರ ಫೌಂಡರ್ ಅವರಾಗಿದ್ದಾರೆ. ಅವರು ಒಟ್ಟು 13 ಆಯವ್ಯಯ ಅಂದಾಜು ಮುಂಗಡ ಪತ್ರಗಳನ್ನು ಮಂಡಿಸಿದ್ದಾರೆ. ರಾಜ್ಯದ ಶಾಸನಸಭೆ ಇತಿಹಾಸದಲ್ಲಿಯೇ ಇಂತಹ ಒಂದು ಕೀರ್ತಿ ಯಾವ ಹಣಕಾಸು ಮಂತ್ರಿಗಳು ತೆಗೆದುಕೊಳ್ಳಲು ಸಾಧ್ಯ? ಅವರು ಹಣಕಾಸು ಸಚಿವರಾಗಿದ್ದಾಗ ಸಾಹಿತ್ಯ ಅಕಾಡೆಮಿ ರಚನೆಯಾಯಿತು. ಕನ್ನಡ ಸಾಹಿತ್ಯ ಪರಿಷತ್‌ಗೆ ಗ್ರಾಂಟ್-ಇನ್-ಏಡ್ ಕೊಡಲು ಪ್ರಾರಂಭಿಸಿದ್ದು ಅವರ ಕಾಲದಲ್ಲೇ, ಇವೊತ್ತು ಬೆಂಗಳೂರಿನಲ್ಲಿರುವ ಚಿನ್ನಸ್ವಾಮಿ ಸ್ಟೇಡಿಯಂನ ರೂವಾರಿ ಅವರೇ ಆಗಿದ್ದಾರೆ. ಗಾಲ್ಫ್ ಆಟದ ಬಗ್ಗೆ ಅವರಲ್ಲಿ ಬಹಳ ಅಭಿರುಚಿ ಇದ್ದುದ್ದರಿಂದ ಏರ್‌ಪೋರ್ಟ್ ರಸ್ತೆಯಲ್ಲೊಂದು ಗಾಲ್ಫ್ ಕ್ಲಬ್ ಸ್ಥಾಪನೆಯಾಯಿತು. ಇದಕ್ಕೆಲ್ಲಾ ಶ್ರೀ ರಾಮಕೃಷ್ಣ ಹೆಗಡೆಯವರು ತಮ್ಮ ಬೆಂಬಲ ಕೊಟ್ಟಿದ್ದರು. ತಮ್ಮ ಇಡೀ ಜೀವನದಲ್ಲಿ ಒಂದೆಡೆ ಸಹಾಯ ಮಾಡುವ ಮನೋಭಾವನೆ ಇದ್ದರೆ ಮತ್ತೊಂದೆಡೆ ಉತ್ತೇಜನ ಕೊಡುವ ಮನೋಭಾವನೆ ಇತ್ತು. ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿರುವಂತೆ ಶ್ರೀ ರಾಮಕೃಷ್ಣ ಹೆಗಡೆಯವರಲ್ಲಿ ಯಾವಾಗಲೂ ಸೇಡಿನ ಮನೋಭಾವನೆ ಇರಲಿಲ್ಲ. ರಾಜಕೀಯ ಕಾರಣಗಳಿಂದಾಗಿ ನಾನು ಅವರಿಂದ ದೂರವಾದರೂ 'ನೀನೇಕೆ ಅಲ್ಲಿಗೆ ಹೋಗಿದ್ದು? ಏನು ನಿನ್ನ ಕೆಲಸ?' ಎಂದು ಒಂದು ದಿನವೂ ನನ್ನನ್ನು ಕೇಳಿದವರಲ್ಲ. ಬದಲಿಗೆ ಬೆಂಬಲ, ಉತ್ತೇಜನ ಕೊಡುತ್ತಾ ಸಾಗಿದರು. 'ಕೃಷ್ಣಾರವರು ಒಳ್ಳೆಯ ಮುಖ್ಯಮಂತ್ರಿಯಾಗಿದ್ದು, ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ, ನೀವೂ ಒಳ್ಳೆಯ ಕೆಲಸ ಮಾಡಿ' ಎಂದು ಇಷ್ಟೇ ಹೇಳುತ್ತಿದ್ದರೇ ವಿನಾ ಎಂದಿಗೂ ಸೇಡಿನ ಮನೋಭಾವ ತಳೆದವರಲ್ಲ. ನಾವು ಕೆಲವು ಸಲ ಸೇಡಿನ ಮನೋಭಾವನೆ ಹೊಂದಿ ತಪ್ಪು ಕೆಲಸ ಮಾಡುತ್ತಾ ಸಣ್ಣವರಾಗುತ್ತೇವೆ. ಇಂತಹ ವಿಚಾರಗಳು, ಭಾವನೆಗಳು ಅವರಲ್ಲಿ ಎಂದಿಗೂ ಇರಲಿಲ್ಲ. ಅವರ ಮತ್ತೊಂದು ಮಹತ್ವದ ಗುಣವೆಂದರೆ, ಅವರು ಮನಸ್ಸು ಮಾಡಿದರೆ ತಮ್ಮ ಮಗನನ್ನು ಎಂಎಲ್‌ಎ:ಎಂಎಲ್‌ಸಿ ಮಾಡಬಹುದಿತ್ತು. ಮಗಳಿಗೂ ಏನಾದರೂ ಮಾಡಲು ಸಾಧ್ಯವಿತ್ತು ಅಥವಾ ಅವರ ಧರ್ಮಪತ್ನಿಯಾಗಲಿ, ಅವರ ಮಕ್ಕಳಾಗಲೀ

ಯಾರೂ ಕೂಡ ರಾಜಕೀಯದಲ್ಲಿರಲಿಲ್ಲ. ಸಾಮಾನ್ಯವಾಗಿ ರಾಜಕಾರಣಿ ಎಂದರೆ, ಅವರ ಮಗ, ಮೊಮ್ಮಗ, ಸೊಸೆಯಂದಿರೆಲ್ಲರೂ they should follow us. ಶ್ರೀ ರಾಮಕೃಷ್ಣ ಹೆಗಡೆಯವರು ಇದನ್ನೆಲ್ಲಾ ಮಾಡಲು ಸಾಧ್ಯವಿತ್ತು. ಅವರು ಎಷ್ಟೋ ಜನರನ್ನು ಎಂಎಲ್ಎ, ಎಂಎಲ್‌ಸಿ ಮತ್ತು ಮಂತ್ರಿಗಳನ್ನಾಗಿ ಮಾಡಿರುವುದು ಗೊತ್ತಿದೆ. ಅವರ ಕುಟುಂಬದಲ್ಲಿದ್ದ ಯಾರನ್ನೂ ಸಹ ರಾಜಕೀಯಕ್ಕೆ ಪ್ರವೇಶಿಸಲು ಉತ್ತೇಜನ ಕೊಟ್ಟಿಲ್ಲ. ಹಾಗಾಗಿ, ನಾನು ಆಗಲೇ ಹೇಳಿದಂತೆ ಅವರನ್ನು ರಾಜಕಾರಣಿ ಎಂದು ನೋಡುವುದಕ್ಕಾಗುವುದಿಲ್ಲ. He was a statesman and a very nice living human being. ಇವೊತ್ತು ನಾವು ಅವರನ್ನು ಕಳೆದುಕೊಂಡಿರುವುದರಿಂದ ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ದೊಡ್ಡ ಹಾನಿಯಾಗಿದೆ. ನಮ್ಮ ಜಿಲ್ಲೆಗಂತೂ ಬಹಳ ದೊಡ್ಡ ಹಾನಿಯಾಗಿದೆ. ಮಾನ್ಯ ಹಿರಿಯ ಸದಸ್ಯರಾದ ಸಿಂಧ್ಯಾರವರು ಹೇಳಿದಂತೆ ಅವರು ಕೇವಲ ಒಂದು ಜಿಲ್ಲೆಗೆ ಸೀಮಿತವಾಗಿ ಕೆಲಸ ಮಾಡಲಿಲ್ಲ. ನಮ್ಮ ಜಿಲ್ಲೆಯಲ್ಲಿರುವ ಕಾಳಿ ಹೈಡ್ರೋ ಪ್ರಾಜೆಕ್ಟ್ ಇರಬಹುದು, ಶರಾವತಿ ನದಿಗೆ ನಿರ್ಮಿಸಿರುವ ಸೇತುವೆ ಇರಬಹುದು. ಇವೆಲ್ಲಾ ನಾಡಿಗಾಗಿ ಕೊಟ್ಟಿರತಕ್ಕ ಯೋಜನೆಗಳಾಗಿವೆ. ಅವರು Deputy Chairman of Planning Commission ಆಗಿದ್ದಾಗ, ಶ್ರೀ ಮಧುದಂಡವತೆಯವರು ಅವರು ಕೊಂಕಣ ರೈಲ್ವೆಯನ್ನು ತಂದರು. ಇಂಥ ಹಲವಾರು ಒಳ್ಳೆಯ ಪ್ರಾಜೆಕ್ಟ್‌ನ್ನು ತಂದು ಜಿಲ್ಲೆಯಲ್ಲಿ ಮೂಲಭೂತ ಸೌಲಭ್ಯಗಳನ್ನು ಸಹ ಬೆಳೆಸಲು ಪ್ರಯತ್ನ ಮಾಡಿದರು. ಅವರು ಇವತ್ತು ನಮ್ಮಿಂದ ದೂರವಾದರೂ ಅವರ ಸಿದ್ಧಾಂತಗಳನ್ನು ವಿಚಾರಗಳನ್ನು ನಾವು ನಮ್ಮ ಮುಂದಿಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ವ್ಯಕ್ತಿಗತವಾಗಿ ನನಗೂ ದೊಡ್ಡ ಹಾನಿಯಾಗಿದೆ. ಆದರೆ ದೇವರ ಇಚ್ಛೆಯ ಮುಂದೆ ಯಾರಿಗೂ ಏನನ್ನೂ ಮಾಡಲು ಆಗುವುದಿಲ್ಲ. ಈ ಸಂದರ್ಭದಲ್ಲಿ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ ಮತ್ತು ಅವರ ಕುಟುಂಬಕ್ಕೆ ಈ ದುಃಖವನ್ನು ಸ್ಥೈರಿಸುವ ಶಕ್ತಿಯನ್ನು ಕೊಡಲಿ ಎಂದು ತಾವು ಮಂಡಿಸಿರುವ ನಿರ್ಣಯಕ್ಕೆ ಬೆಂಬಲವನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಇದುವರೆಗೆ ನಮ್ಮ ಸಭಾನಾಯಕರು, ವಿರೋಧ ಪಕ್ಷದ ನಾಯಕರುಗಳು ಅಭಿವ್ಯಕ್ತ ಮಾಡಿದ ಅಭಿಪ್ರಾಯಕ್ಕೆ ನನ್ನ ಸಹಮತವನ್ನು ವ್ಯಕ್ತಮಾಡುತ್ತಾ ನಾವು ಹತ್ತಾರು ವರ್ಷಗಳ ಕಾಲ ಅವರ ಜೊತೆ ಕೆಲಸ ಮಾಡಿದ ಬಗ್ಗೆ ನೆನಪಿಸಿಕೊಳ್ಳಲು ಇದೊಂದು ಅವಕಾಶ, ಆದ್ದರಿಂದ ಒಂದೆರಡು ವಿಚಾರಗಳನ್ನು ಮಾತ್ರ ನಾನು ಪ್ರಸ್ತಾಪ ಮಾಡಬೇಕೆಂದು ಬಯಸಿದ್ದೇನೆ. ಒಂದು, ಭಾರತೀಯ ರಾಜಕಾರಣದಲ್ಲಿ ಹೊಸ ಚಿಂತನೆಗಳನ್ನು ಬಿತ್ತದ ಒಬ್ಬ ಪ್ರಬುದ್ಧ ರಾಜಕಾರಣಿ ಶ್ರೀಮಾನ್ ಹೆಗಡೆಯವರು. ಇವರಲ್ಲಿ ಸ್ವಾಭಿಮಾನ ಇತ್ತು ಕನ್ನಡದ ಬಗ್ಗೆ ಅಭಿಮಾನ ಇತ್ತು. ಕನ್ನಡ ಜನರ ಹಬ್ಬ ಹರಿದಿನಗಳನ್ನು ಸಾಂಸ್ಕೃತಿಕ ಚಟುವಟಿಕೆಗಳನ್ನು ಸದಾ ಎಚ್ಚರದಿಂದ ಗಮನಿಸಿ ತಾನೂ ಅದರಲ್ಲಿ ವಿಶೇಷವಾಗಿ ಪಾಲುಗೊಂಡ ನೆನಪು ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯದ ವಿಶ್ವ ಸಮ್ಮೇಳನದಲ್ಲಿ ಶ್ರೀಮಾನ್ ರಾಜೀವ್‌ಗಾಂಧಿಯವರು ಬಂದಿದ್ದರು. ಅಲ್ಲಿಯ ಅಚ್ಚುಕಟ್ಟಾದ ವ್ಯವಸ್ಥೆಯನ್ನು ನೋಡಿ ದೇಶದ ತುಂಬೆಲ್ಲಾ ಇದನ್ನು ಹಾಡಿ ಹೊಗಳಿದ ನೆನಪು ನನಗೆ ಈಗಲೂ ಇದೆ. ಶ್ರೀಮಾನ್ ಹೆಗಡೆಯವರು ವಿನೋಬಾಬಾವೆಯವರ ಭೂದಾನ ಚಳುವಳಿಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದರು. ಹಾಗೆಯೇ, ಭೂಮಿಗೆ ಸಂಬಂಧಪಟ್ಟಂತೆ ಮತ್ತೊಂದು ಅವರ

ಆತ್ಮೀಯ ಚಳುವಳಿ ಭೂಸುಧಾರಣಾ ಶಾಸನ. ತಾವೇ ಸ್ವತಃ ಸ್ವಾತಂತ್ರ್ಯ ಹೋರಾಟಕ್ಕಾಗಿ ರಾಷ್ಟ್ರದ ರಾಜಕಾರಣಕ್ಕಾಗಿ ತಮ್ಮನ್ನು ತೊಡಗಿಸಿಕೊಂಡ ಕುಟುಂಬದಿಂದ ಬಂದವರಾದ್ದರಿಂದ ಈ ಭೂ ಸುಧಾರಣೆಯ ಬಗ್ಗೆ ವಿಶೇಷವಾಗಿ ಹೊಸ ದಾಖಲೆಗಳನ್ನು ನಿರ್ಮಿಸಿದರು. ಮತ್ತೊಂದು ಅವರ ಆತ್ಮೀಯವಾದಂಥ ಕಾರ್ಯಕ್ರಮ ಅಧಿಕಾರ ವಿಕೇಂದ್ರೀಕರಣ, ಈ ಅಧಿಕಾರ ವಿಕೇಂದ್ರೀಕರಣಕ್ಕೆ ಒಬ್ಬ ನಾಯಕನನ್ನೇ ತಯಾರು ಮಾಡಿದ್ದರು. ಅವರು ಶ್ರೀಮಾನ್ ನಜೀರ್‌ಸಾಹೇಬರು. ಅದು ಕೊನೆಗೆ ಎಷ್ಟು ದೂರಕ್ಕೆ ಹೋಯಿತು ಎಂದರೆ, ವಿಕೇಂದ್ರೀಕರಣದ ಶಾಸನವನ್ನು, ನಾನು ಸಭಾಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಮಂಜೂರು ಮಾಡಿದ್ದರೂ ಕೂಡ ಅದನ್ನು ಜಾರಿಗೆ ಕೊಡಲಿಲ್ಲ. ಅದು ಒಪ್ಪಿಗೆಯಾಗಲಿಲ್ಲ. ಆ ಸಮಯದಲ್ಲಿ ಮಾನ್ಯ ಹೆಗಡೆಯವರು ಶ್ರೀಮಾನ್ ನಜೀರ್‌ಸಾಹೇಬರಿಗೆ ಉತ್ತೇಜನವನ್ನು ಕೊಟ್ಟು ರಾಷ್ಟ್ರಪತಿಯವರ ಬಳಿ ಒಂದು ಚಳುವಳಿಯನ್ನೇ ಮಾಡಬೇಕೆಂದು ಹೇಳಿ ಅಲ್ಲಿ ಉಪವಾಸ ಸತ್ಯಾಗ್ರಹ ಹೂಡುತ್ತೇನೆಂದು ಹೇಳಿದ ಮೇಲೆ ಅದಕ್ಕೆ ಮಾನ್ಯತೆ ಸಿಕ್ಕಿತು ಎಂಬುದನ್ನು ನಾವು ನೆನಪಿಸಿಕೊಳ್ಳಬೇಕಾದಂಥ ಒಂದು ಸಂದರ್ಭ. ಮತ್ತೊಂದು ಮುಖ್ಯವಾದಂಥ ಅಂಶ ಅವರದ್ದು, ಏನೆಂದರೆ, ಕೇಂದ್ರ ಮತ್ತು ರಾಜ್ಯಕ್ಕೆ ಸಂಬಂಧಪಟ್ಟಂಥ ರಾಜ್ಯಾಂಗದ ಮೂಲ ತತ್ವಗಳಲ್ಲಿ ತುಂಬಾ ವಿಶೇಷವಾದ ಆಸಕ್ತಿಯನ್ನು ವಹಿಸಿದ್ದರು. ಅವರಲ್ಲದೆ ಬೇರೆಯವರು ವಹಿಸುವುದು ಆಗ ಕಷ್ಟದ ಕಾಲ. ಏಕೆಂದರೆ, ಭಾರತದ Federal Democratic setup ನಲ್ಲಿ ಕೇಂದ್ರ ಮಾತ್ರ ಬೆಳೆದರೆ ಸಾಲದು, ಪ್ರತಿ ರಾಜ್ಯಗಳು ಅಷ್ಟೇ ದಷ್ಟಪುಷ್ಟವಾಗಿ ಬೆಳೆಯಬೇಕು ಎಂಬ ಸದಿಚ್ಛೆಯನ್ನು ಅಭಿವ್ಯಕ್ತಮಾಡಿ ಅದಕ್ಕಾಗಿ ಬೇಕಾದಷ್ಟು ಶ್ರಮಿಸಿದವರು ಅವರು. ಇದರ ಜೊತೆಗೆ 1983ರ ಒಂದು ಘಟನೆ ನನಗೆ ನೆನಪಿಗೆ ಬರುತ್ತದೆ. ಆಗತಾನೇ ಚುನಾವಣೆ ಮುಗಿದಿತ್ತು. ನಾವೆಲ್ಲಾ ಪ್ರತಿಪಕ್ಷದಲ್ಲಿ ಬಹಳ ಸಂಘಟಿತರಾಗಿ ಕೆಲಸ ಮಾಡಿದ್ದೆವು. ಶಾಸನಸಭೆ it was very very delicately poised. ಆ ಸಮಯದಲ್ಲಿ ನೀವು ಸಭಾಧ್ಯಕ್ಷರಾಗಿ ಕೆಲಸ ಮಾಡಬೇಕು ಎಂದು ನನಗೆ ಅವರು ಕೇಳಿದಾಗ ಎರಡು ಕಾರಣಗಳಿಗಾಗಿ ನಾನು ಸ್ವಲ್ಪ ವಿಚಲಿತನಾದೆ. ಒಂದು ಮಂತ್ರಿಯಾಗಬೇಕು ಎಂಬ ಸಹಜವಾದಂಥ ಪ್ರವೃತ್ತಿ, ಮತ್ತೊಂದು ಅಷ್ಟೊಂದು ತೀಕ್ಷಣವಾಗಿದ್ದಂಥ ಸಭೆಯನ್ನು ನಡೆಸುವ ಜವಾಬ್ದಾರಿ ಬಹಳ ಕಷ್ಟದ್ದು ಎನ್ನುವ ಅರಿವು ನನಗೆ ಇದ್ದದ್ದರಿಂದ ನಾನು ಸ್ವಲ್ಪ ಆಲೋಚನೆ ಮಾಡಿದೆ. ಆಗ ಅವರು ಎಂಥ ಕ್ಲಿಷ್ಟ ಪ್ರಸಂಗಗಳು ಬಂದರೂ ನಾನು ನಿಮ್ಮ ಜೊತೆಗೆ ಇದ್ದೇನೆ, ಈ ಜವಾಬ್ದಾರಿಯನ್ನು ವಹಿಸಿಕೊಳ್ಳಿ, ನೀವು ಸಭೆಯನ್ನು ನಡೆಸಬಲ್ಲಿರಿ ಎಂಬ ವಿಶ್ವಾಸ ನನಗಿದೆ ಎಂಬ ಮಾತನ್ನು ನನಗೆ ಹೇಳಿದರು. ಅದು ಹಾಗೆಯೇ ನಡೆದುಕೊಂಡು ಬಂತು. ಒಂದೆರಡು ಪ್ರಕರಣಗಳು ನಾನು ಹೇಳಬೇಕೋ ಬೇಡವೋ ಎಂಬ ಸಂದಿಗ್ದದಲ್ಲಿ ಇದ್ದೆ. ಒಂದು ಸಲ ಶ್ರೀಮಾನ್ ಹೆಗಡೆಯವರ ಮತ್ತು ಶ್ರೀಮಾನ್ ಬಂಗಾರಪ್ಪನವರ ನಡುವೆ ನಡೆದ ಸಂವಾದ. ಒಂದು ಸಾರಿ ಶ್ರೀಮಾನ್ ಹೆಗಡೆಯವರಿಗೂ ಮತ್ತು ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಟೆಲಿಫೋನ್ ಹಗರಣದಲ್ಲಿ ನಡೆದಂಥದ್ದು. ಇದರ ಬಗ್ಗೆ ಹೆಗಡೆಯವರ ಆಲೋಚನೆಗಳು ಏನಿದ್ದವೋ, ನಾನು ಮೇಲೆ ಕುಳಿತು ಒಂದು ಶಬ್ದವನ್ನು ಬಳಕೆ ಮಾಡಿಬಿಟ್ಟೆ. ಅನಿವಾರ್ಯ ಕಾರಣಕ್ಕಾಗಿ ಶ್ರೀಮಾನ್ ಹೆಗಡೆಯುವರಿಗೂ ಮಾನ್ಯ ಬಂಗಾರಪ್ಪನವರಿಗೂ ಒಂದು ಪ್ರಸಂಗ ಬಂದ ಕಾಲಕ್ಕೆ, ತತ್‌ಕ್ಷಣ ನಾನು ತಪ್ಪು ಮಾಡಿದೆನೋ ಏನೋ ಎಂದು ಆಲೋಚನೆ ಮಾಡಿದೆ. ಒಂದು ನಿಮಿಷದಲ್ಲಿ ಸದನವನ್ನು ನಾನು ಅಡ್‌ಜರ್ನ್ ಮಾಡಿ ಛೇಂಬರ್‌ಗೆ ಹೋದಾಗ ತಾವೇ ಅಲ್ಲಿಗೆ ಓಡಿ ಬಂದರು, ಇಲ್ಲಾ, ಈ ಶಬ್ದವನ್ನು ನಾನು

ಬಳಸಬಾರದಿತ್ತು, ನಾನು ಬದುಕಿನಲ್ಲಿ ಈ ರೀತಿ ಇನ್ನೊಂದು ಸಲ ತಪ್ಪು ಮಾಡುದಿಲ್ಲ, ಅದು ಕಡತದಲ್ಲಿ ಇರಲಿ ಎನ್ನುವಂಥ ಮಾತನ್ನು ಹೇಳಿದರು. ಹೀಗೆ ಅನೇಕ ಸಂದರ್ಭಗಳನ್ನು ನಾವು ನೆನಪಿಸಿಕೊಳ್ಳಬಹುದು. ಬಹಳ ಮುಖ್ಯವಾಗಿ 1983ರಲ್ಲಿ ಉಂಟಾದ ಪರಿಸ್ಥಿತಿಯನ್ನು ಒಂದು ಸಂದಿಗ್ಧ ಶ್ರೀಮಾನ್ ಸಿಂಧ್ಯಾರವರು ಪ್ರಸ್ತಾಪ ಮಾಡಿದ್ದರು. ಮಾನ್ಯ ಹೆಗಡೆಯವರ ಅಣ್ಣ ಶ್ರೀ ಗಣೇಶ್ ಹೆಗಡೆಯವರು, ಅಕ್ಕಿ ವ್ಯವಹಾರದಲ್ಲಿ ಸುಮಾರು 9 ರಿಂದ 10 ಕೋಟಿ ರೂಪಾಯಿಗಳಷ್ಟು ಅವ್ಯವಹಾರ ನಡೆಸಿದ್ದಾರೆಂದರೆ ಸದನದಲ್ಲಿ ಪ್ರಸ್ತಾಪ ಮಾಡಿದಾಗ ಆಗಿನ ಸದನದ ನಾಯಕರಾದ ಶ್ರೀಮಾನ್ ಹೆಗಡೆಯವರು, ನಾನು ಆಗತಾನೇ Commonwealth Parliamentary Convention ಮುಗಿಸಿಕೊಂಡು ಲಂಡನ್‌ನಿಂದ ವಾಪಸ್ ಬಂದು ಇನ್ನೂ ಕೆಳಕ್ಕೆ ಇಳಿದಿಲ್ಲ ನನಗೆ ತಕ್ಷಣ ನಾನು ನಿಮ್ಮ ಜೊತೆ ಮಾತನಾಡಬೇಕು, ನಿಮ್ಮನ್ನು ನೋಡಬೇಕು ಎಂದರು. ನಾನು ಬರುತ್ತೇನೆಂದು ಹೇಳಿದೆ. ಅದಕ್ಕೆ ಅವರು ಇಲ್ಲಾ ಇಲ್ಲಾ ನಾನೇ ಬರುತ್ತೇನೆಂದು ಹೇಳಿ ಅವರೇ ಬಂದು ಇದಕ್ಕೊಂದು ಸದನದ ಸಮಿತಿಯನ್ನು ಮಾಡಬೇಕೆಂದು ನನ್ನನ್ನು ಕೇಳಿಕೊಂಡರು. ಆಗ ನಾನು ಇದು ಅಷ್ಟು ಸುಲಭವಾದ ಕೆಲಸವಲ್ಲ. When the House is not in session, ನಾವು ಸದನದ ಸಮಿತಿಯನ್ನು ಮಾಡುವುದು ಸರಿಯಾಗುವುದಿಲ್ಲ. ಆದ್ದರಿಂದ ದಯಮಾಡಿ ನನ್ನನ್ನು ಕ್ಷಮಿಸಿ. ಇದು ಆಗುವುದಿಲ್ಲ ಎಂದು ಹೇಳಿದೆ. ಆದರೆ ಅವರು ಆಮೇಲೆ ತಮ್ಮ ಅಪೇಕ್ಷೆಗೆ ಕಾರಣಗಳನ್ನು ಕೊಟ್ಟಿದ್ದಾರೆ. ತನ್ನ ಮನೆಯವರ ಮೇಲೆಯೇ ಆಪಾದನೆ ಬಂದಾಗ ಕೂಡ ಇದಕ್ಕೆ ಒಂದು ಸದನದ ಸಮಿತಿಯನ್ನು ಮಾಡಿ, ಬಹಳ ದೊಡ್ಡ ದೀರ್ಘವಾದ ಚರ್ಚೆಯಾದ ಮೇಲೆ ಸದನ ನಡೆಯದಿರುವಂಥ ಕಾಲದಲ್ಲಿ ಸದನದ ಸಮಿತಿಯನ್ನು ಮಾಡಬೇಕೇ ಬೇಡವೇ ಎನ್ನತಕ್ಕಂಥ ಕ್ಲಿಷ್ಟ ಸಮಸ್ಯೆಯನ್ನು ಬಗೆಹರಿಸಬೇಕಾದಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದೆ. ಆಗ ನಾನು ಮೊದಲು ಶ್ರೀಮಾನ್ ರಂಗನಾಥ್‌ರವರನ್ನು ಕನ್‌ಸಲ್ಟ್ ಮಾಡಿ ಹೀಗೆ ಹೇಳುತ್ತಾರೆ ಏನು ಮಾಡುವುದು ಎಂದು ಕೇಳಿದೆ, ಅವರು ಅದಕ್ಕೆ ಹೇಗೆ ಮಾಡುವುದಕ್ಕೆ ಆಗುತ್ತದೆ ಎಂದು ಸ್ವಾಭಾವಿಕವಾಗಿ ತಮ್ಮ ಕನ್‌ವಿಕ್ಷನ್‌ಅನ್ನು ಹೇಳಿದರು. ಅನಂತರ ಹಳೆಯ ಸ್ಪೀಕರ್‌ಗಳನ್ನೆಲ್ಲಾ ಕೇಳಿದೆ, ಯಾರೂ ಸಹ ಆಗುವುದಿಲ್ಲವೆಂದು ಹೇಳಿದರು. ನನ್ನ ತಲೆಮಾರಿನಲ್ಲಿ ಇದೊಂದು ಹೊಸ ಆಲೋಚನೆಯಾಗುತ್ತದೆ. ಆದರೆ ಆಗಲಿ ನೋಡೋಣವೆಂದು ಸದನದ ಸಮಿತಿಯನ್ನು ಮಾಡಬೇಕೆಂದು ನಾನು ತೀರ್ಮಾನ ಮಾಡಿದೆ. ಅದರ ಮೇಲೆಯೂ ಬೇಕಾದಷ್ಟು ಲೇಖನಗಳು ಬಂದವು. ಆಗ ಶ್ರೀಮಾನ್ ಹೆಗಡೆಯವರು ಮತ್ತೊಂದು ಮಾತನ್ನು ಹೇಳಿದರು. ಅದು ನನಗೆ ಬಹಳ ಸಂದಿಗ್ಧಕ್ಕೆ ಸಿಕ್ಕಿಸಿತು. ಈ ಸದನದ ಸಮಿತಿಯಲ್ಲಿ ಆಳುವ ಪಕ್ಷದ ಒಬ್ಬ ಸದಸ್ಯರೂ ಇರಬಾರದು; ಇದು ನನ್ನದೊಂದು ಕಂಡೀಷನ್. ಅದರ ಪ್ರಕಾರವೇ ಶ್ರೀಮಾನ್ ಗಂಗಾಧರ್‌ರವರು ಮೈಸೂರಿನಿಂದ ಆಯ್ಕೆಯಾಗಿದ್ದಂಥ ಶಾಸಕರು, ಅವರ ಅಧ್ಯಕ್ಷತೆಯಲ್ಲಿ ಸದನದ ಸಮಿತಿಯನ್ನು ಮಾಡಿದೆ, ಸಮಿತಿಯ ವರದಿ ಬಂತು, ಆಮೇಲಿನ ಪ್ರಕರಣಗಳು ಅಷ್ಟೊಂದು ಪುರಸ್ಕೃತವಲ್ಲ. ಆದರೆ ಇಂಥ ಕ್ಲಿಷ್ಟ ಸಮಯದಲ್ಲಿ ಅವರು ತೆಗೆದುಕೊಳ್ಳುತ್ತಿದ್ದಂಥ ತೀರ್ಮಾನ, ಅವರ ಅಣ್ಣನವರದ್ದು ಆಯಿತು, ಆನಂತರ ಮಗನ ವಿಚಾರ ಬಂತು. ಶ್ರೀಮಾನ್ ಎ.ಕೆ ಸುಬ್ಬಯ್ಯ ನವರು ಅಷ್ಟೇ ತೀಕ್ಷ್ಣವಾಗಿ ಹೋರಾಟ ಮಾಡತಕ್ಕವರು. ನನ್ನ ಮಗ ಎಂಡಿ. ಸೀಟ್‌ನಲ್ಲಿ ದುಡ್ಡನ್ನು ಹೊಡೆದಿದ್ದಾನೆ ಎಂಬ ದೊಡ್ಡ ಆಪಾದನೆ ಬಹಳ ವಿಶೇಷವಾಗಿ ಚರ್ಚೆಯಾಯಿತು. ಆ ಸಮಯಕ್ಕೆ ನ್ಯಾಯಾಂಗ ತನಿಖೆಯಾಗಬೇಕೆಂದು ನನ್ನ ಜೊತೆ ಚರ್ಚೆ ಮಾಡಿದರು. ನನಗೆ ಅಘಾತವಾಯಿತು. ಏನಿದು ಮಕ್ಕಳ ಮೇಲೆ ನ್ಯಾಯಾಂಗ ತನಿಖೆ ಮಾಡತಕ್ಕದ್ದು ನಮ್ಮ ರಾಜಕಾರಣಕ್ಕೆ ಅನುಕೂಲವಾಗುತ್ತದೆ

ಎಂಬ ದೃಷ್ಟಿಯಿಂದ ಸರಿಯೆಂದು ಕಾಣಬಹುದು, ಆದರೆ ಇದು ವಾಸ್ತವವಾಗಿ ನಾನೇನೋ ಈ ಕೆಲಸವನ್ನು ಮೆಚ್ಚುವುದಿಲ್ಲ, ದಯಮಾಡಿ ಕ್ಷಮಿಸಿ, ಇಂಥ ಪ್ರಯತ್ನಗಳಿಗೆ ಕೈಹಾಕಬೇಡಿ ಎಂದು ನಾನು ಬುದ್ಧಿ ಹೇಳಿದ್ದು ಉಂಟು. ಆದರೆ ಅದಕ್ಕೆ ಅವರು ಒಪ್ಪಲಿಲ್ಲ.

12.10 ಪಿಎಂ

ಅದರ ಬಗ್ಗೆ ತನಿಖೆಯನ್ನು ನಡೆಯಲು ಏರ್ಪಾಡು ಮಾಡಿದರು. ಅದು ಬಹಳ ದೀರ್ಘ ಕಾಲ ನಡೆದು ನಂತರ ತೀರ್ಮಾನ ಹೊರ ಬಿತ್ತು ಅದು ಬೇರೆ ವಿಚಾರ. ಹೀಗೆ ತನ್ನ ಮಗನ ಮೇಲೆ ಕೂಡ ತನಿಖೆ ಮಾಡುವಂತಹ ಮೌಲ್ಯ ರಾಜಕಾರಣವನ್ನು ಶಾಶ್ವತವಾಗಿ ಈ ರಾಜ್ಯದಲ್ಲಿ ಅವರು ಬಿಟ್ಟು ಹೋಗಿದ್ದಾರೆ. ಹಾಗೆಯೇ ಟೆಲಿಫೋನ್ ಹಗರಣದಲ್ಲಿ ಕೂಡ ಬಹಳ ದೀರ್ಘವಾಗಿ ಚರ್ಚೆಯಾಯಿತು. ಅದರ ಪರಿಣಾಮ ಏನಾಯಿತು ಎಂದರೆ, ನಾನು ಮತ್ತು ನನ್ನ ಆತ್ಮೀಯ ಮಿತ್ರರಾದಂತಹ ಮಾನ್ಯ ದೇಶಪಾಂಡೆಯವರು ನಮ್ಮ ನಮ್ಮ ಜಾಗವನ್ನೇ ಬದಲಾವಣೆ ಮಾಡಿಕೊಳ್ಳಬೇಕಾದಂತಹ ಪ್ರಸಂಗ ಬಂದಿತು. ಆದರೂ ನನ್ನ ಹಠವನ್ನು ನಾನು ಬಿಡಲಿಲ್ಲ, ಅವರ ಹಠವನ್ನು ಅವರು ಬಿಡಲಿಲ್ಲ. ಪರಿಶೀಲನೆ ಮಾಡಿ, ಇರತಕ್ಕಂಥ ವಾಸ್ತವಾಂಶಗಳನ್ನು ತಿಳಿದುಕೊಳ್ಳುವವರೆಗೆ ಅವರು ತಮ್ಮ ಪ್ರಯತ್ನವನ್ನು ಬಿಡಲೇ ಇಲ್ಲ. ಇಂತಹ ಅನೇಕ ಪ್ರಸಂಗಗಳನ್ನು ನಾವು ಇಲ್ಲಿ ನೆನಪು ಮಾಡಿಕೊಳ್ಳಬಹುದಾಗಿದೆ. ದಿವಂಗತ ಹೆಗಡೆಯವರಲ್ಲಿ ಬಹಳ ನೆನಪಿನಲ್ಲಿ ಉಳಿಯತಕ್ಕಂಥ ಬಹಳ ಅಮೂಲ್ಯವಾದುದು ಎಂದರೆ ಅವರಲ್ಲಿ ಇದ್ದಂತಹ ಸ್ನೇಹ. ಸ್ನೇಹಕ್ಕೆ ಮತ್ತೊಂದು ಹೆಸರೇ ಹೆಗಡೆಯವರಾಗಿದ್ದರು. ರಾಜಕಾರಣವೇ ಇರಲಿ, ರಾಷ್ಟ್ರದ್ದು ಇರಲಿ, ರಾಜ್ಯದ್ದು ಇರಲಿ, ಸಂಬಂಧ ಇರಲಿ, ಇಲ್ಲದಿರಲಿ, ಯಾವುದನ್ನೂ ರಾಜಕಾರಣದ ಜೊತೆಗೆ ಅವರು ಬೆರಸುತ್ತಿರಲಿಲ್ಲ. ತಮ್ಮದೇ ಆದಂತಹ ಒಂದು ಸಂಬಂಧವನ್ನು ಶಾಶ್ವತವಾಗಿ ಉಳಿಸಿಕೊಂಡು ಬಂದಂತಹವರು ಶ್ರೀಮಾನ್ ಹೆಗಡೆಯವರು. ನಾವು ವಿರೋಧ ಪಕ್ಷದಲ್ಲಿರಲಿ, ಅವರ ಜೊತೆಯಲ್ಲಿರಲಿ, ಆ ವ್ಯತ್ಯಾಸವನ್ನೇ ಕಾಣದೇ, ಯಾವಾಗ ಹೋದರೂ ಅಷ್ಟೇ, ನಮ್ಮ ಜೊತೆಗೆ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದರು. ಅವರು ಒಂದು ರೀತಿಯಲ್ಲಿ ರಾಜ್ಯದ ರಾಜಕಾರಣದಲ್ಲಿ ಧ್ರುವತಾರೆಯಾಗಿ ಮೆರೆದವರಾಗಿದ್ದಾರೆ. ಇವತ್ತು ಅವರು ಕಾಲ ಗರ್ಭದಲ್ಲಿ ಲೀನವಾಗಿದ್ದಾರೆ. ಆದರೆ ಅವರ ನೆನಪು ನಮ್ಮ ಕರ್ನಾಟಕದಲ್ಲಿ ಮಾತ್ರವಲ್ಲ. ಕರ್ನಾಟಕದ ಹೊರಗೂ ಶಾಶ್ವತವಾಗಿ ಅಚ್ಚ ಹಸುರಾಗಿ ನೆನಪಿನಲ್ಲಿ ಉಳಿಯುತ್ತದೆ ಎನ್ನತಕ್ಕಂಥದ್ದು ನನ್ನ ಭಾವನೆಯಾಗಿದೆ. ಆ ರೀತಿಯಾಗಿ ಉಳಿಯಲಿ ಎಂದು ಹಾರೈಕೆ ಮಾಡುತ್ತಾ, ಶ್ರೀಮಾನ್ ಹೆಗಡೆಯವರ ಆತ್ಮಕ್ಕೆ ಶಾಂತಿ, ದುಃಖತಪ್ತ ಸಮಾಜಕ್ಕೆ ದುಃಖತಪ್ತ ಕನ್ನಡ ನಾಡಿಗೆ ಅವರ ಅಗಲಿಕೆಯನ್ನು ಭರಿಸತಕ್ಕಂಥ ಶಕ್ತಿಯನ್ನು ಕೊಡುವುದರ ಜೊತೆಗೆ ಇಂತಹವರ ನೆನಪು ಶಾಶ್ವತವಾಗಿ ಉಳಿಯಲಿಕ್ಕೆ, ನಮ್ಮ ಮುಖ್ಯಮಂತ್ರಿಗಳು ಆಗಲೇ ಆಲೋಚನೆ ಮಾಡಿದ್ದಾರೆ, ಅದಕ್ಕಿಂತಲೂ ವಿಸ್ತಾರವಾಗಿ ಏನಾದರೂ ಆಲೋಚನೆ ಮಾಡುವುದಕ್ಕೆ ಸಾಧ್ಯವಾಗುವುದಿದ್ದರೆ, ಅದನ್ನೂ ಕೂಡ ಅವರು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತಾ, ನಿಮ್ಮ ಅಭಿಪ್ರಾಯಕ್ಕೆ ನನ್ನ ಸಹಮತವನ್ನು ವ್ಯಕ್ತ ಮಾಡುತ್ತಾ ನನ್ನ ನಮನಗಳನ್ನು ದಿವಂಗತ ಹೆಗಡೆಯವರಿಗೆ ಸಮರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಅನೇಕ ಮಾನ್ಯ ಸದಸ್ಯರುಗಳು ದಿವಂಗತ ಹೆಗಡೆಯವರ ಮನೆಯಿಂದ 12-30 ಗಂಟೆಗೆ ದಿವಂಗತರ ಅಂತಿಮ ಯಾತ್ರೆ ಮೆರವಣಿಗೆ ಹೊರಡಲಿದ್ದು, ಅದರಲ್ಲಿ ತಾವು

ಭಾಗವಹಿಸಬೇಕಾಗಿರುವುದರಿಂದ ಬೇಗನೆ ಸದನ ಮುಂದೂಡುವಂತೆ ಚೀಟಿಗಳನ್ನು ಕಳುಹಿಸುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಸ್ವಲ್ಪ ಸಂಕ್ಷಿಪ್ತವಾಗಿ ಮಾತನಾಡಿ.

†ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ 2–3 ಮಾತುಗಳನ್ನು ನಾನು ಹೇಳಲೇಬೇಕಾಗಿದೆ. ನಾನು ಪ್ರಥಮವಾಗಿ ಹಣಕಾಸಿನ ಮಂತ್ರಿಯಾಗಿ ಏನೂ ಅನುಭವ ಇಲ್ಲದ ಪರಿಸ್ಥಿತಿಯಲ್ಲಿ ಇಲ್ಲಿ ಕುಳಿತಾಗ, ಶ್ರೀ ರಾಮಕೃಷ್ಣ ಹೆಗಡೆಯವರು ವಿರೋಧ ಪಕ್ಷದ ನಾಯಕರಾಗಿ, ಹಣಕಾಸಿನ ಬಗ್ಗೆ ಸಾಕದಷ್ಟು ಅನುಭವ ಪಡೆದು, ಆ ಚರ್ಚೆಯಲ್ಲಿ ಬಿರುಸಾಗಿ ಭಾಗವಹಿಸುತ್ತಿದ್ದರು. ಅದು ನನಗೆ ಚೆನ್ನಾಗಿ ನೆನಪಿದೆ. ನನಗೆ ತಿಳಿದ ಮಟ್ಟಿಗೆ ಅವರು 6–10 ವರ್ಷಗಳ ಕಾಲ ಕರ್ನಾಟಕದಲ್ಲಿ ಹಣಕಾಸಿನ ಮಂತ್ರಿಯಾಗಿದ್ದರು. ವಿಷಯ ಅವರಿಗೆ ಚೆನ್ನಾಗಿ ಗೊತ್ತಿತ್ತು. ನಾನು ಹೊಸಬ. ಆದರೂ ಕೂಡ ಅವರು ಟೀಕೆ ಮಾಡುವ ಧಾಟಿ ನೋಡಿದರೆ, ಅದು ಬಹಳ ರಕ್ಷಣಾತ್ಮಕವಾಗಿ ಇರುತ್ತಿತ್ತು. ನನಗೆ ಅವರ ಟೀಕೆಯಿಂದ ಎಳ್ಳಷ್ಟೂ ಹಿಂಸೆಯಾಗುತ್ತಿರಲಿಲ್ಲ. ಅದರಿಂದ ರಾಜ್ಯಕ್ಕೆ ಮತ್ತು ವೈಯಕ್ತಿಕವಾಗಿ ನನಗೆ ಸಹಾಯವಾಯಿತು ಎಂದು ನಾನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅವರ ವ್ಯಕ್ತಿತ್ವ ಸಂತೋಷ ಮತ್ತು ನಗೆಯಿಂದ ತುಂಬಿರುತ್ತಿತ್ತು. ಆ ಕಾಲಕ್ಕೆ ನಡೆದಂತಹ ಘಟನೆಯೊಂದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದರೆ ತಪ್ಪಾಗಲಿಕ್ಕಿಲ್ಲ. ನಾನು ಬಜೆಟ್ ಮಂಡನೆ ಮಾಡಿದ ನಂತರ ಅವರು ಕಟುವಾಗಿ ಮತ್ತು ದೀರ್ಘವಾಗಿ ಆ ಬಜೆಟ್ ಅನ್ನು ಟೀಕೆ ಮಾಡಿದರು. ಆನಂತರ ನಾನು ಆ ಟೀಕೆ ಉತ್ತರ ಕೊಡುವ ಕಾಲಕ್ಕೆ ಹೆಗಡೆಯವರು ಅವರ ಜಾಗದಲ್ಲಿ ಇರಲಿಲ್ಲ. ಶ್ರೀಮಾನ್ ಹೆಗಡೆಯವರು ಟೀಕೆ ಮಾಡಿ ಹೋದರು, ಆದರೆ ಹಣಕಾಸು ಸಚಿವರ ಉತ್ತರ ಕೇಳಲಿಕ್ಕೆ ಅವರು ಸದನದಲ್ಲೇ ಇಲ್ಲ ಎಂದು ಸದನದಲ್ಲಿ ಸ್ವಲ್ಪ ಗಲಾಟೆಯಾಯಿತು. ಆಗ ನನ್ನ ಬಾಯಿಂದ ಬಂದಿದ್ದು ಏನೆಂದರೆ, ಅದಕ್ಕೆ ಅಷ್ಟು ಏಕೆ ಗಲಾಟೆ ಮಾಡಬೇಕು? ಅವರು ರೇಸ್–ಗೀಸ್ ನೋಡಲಿಕ್ಕೆ ಹೋಗಿರಬೇಕು ಎಂದು ನಾನು ಹೇಳಿದೆ. ನಾನು ಆ ಮಾತನ್ನು ಹೇಳುತ್ತಿದ್ದಂತೆಯೇ ಶ್ರೀ ರಾಮಕೃಷ್ಣ ಹೆಗಡೆಯವರು ಸದನದ ಒಳಗೆ ಬಂದರು. ಆಗ ನಾನು ಅವರಿಗೋಸ್ಕರ ಅದೇ ಮಾತನ್ನು ಪುನಃ ಉಚ್ಚರಿಸಿದೆ. ನೋಡ್ರಿ, ನೀವು ಇಲ್ಲದಾಗ, ಈ ಪ್ರಶ್ನೆ ಬಂದಾಗ, ಈ ರೀತಿಯಾಗಿ ಹೇಳಿದೆ. ಈಗ ನೀವು ಬಂದಿದ್ದು ಒಳ್ಳೆಯದೇ ಆಯಿತು ಎಂದು ನಾನು ಹೇಳಿದೆ. ಆ ಮಾತಿಗೆ ಅವರು ನಕ್ಕರು. ಅನಂತರ ನಾವು ಸಂತೋಷದಿಂದ ನಮ್ಮ ಡಿಬೇಟ್ ಅನ್ನು ಮುಂದುವರೆಸಿಕೊಂಡು ಹೋದೆವು. ನಾನು ಈ ಮಾತನ್ನು ಹೇಳುವ ಉದ್ದೇಶ ಏನೆಂದರೆ, ಅವರು ಅಪಾರ ಅನುಭವ ಇದ್ದರೂ, ಆ ಅನುಭವವನ್ನು ಹಂಚಿಕೊಳ್ಳುತ್ತಿದ್ದರು. ಅವರಲ್ಲಿ ಅಸೂಯೆ ಮತ್ತು ದ್ವೇಷದ ಪ್ರಶ್ನೆ ಇರಲಿಲ್ಲ. ಅಂತಹವರ ಟೀಕೆಯಿಂದ ಮತ್ತು ಮಾತಿನಿಂದ ನಮಗೆ ಸಾಕಷ್ಟು ಫಾಯಿದೆ ಆಯಿತು. ಈಗ ಮಾನ್ಯ ಸಿಂಧ್ಯಾರವರು ಎಮರ್ಜೆನ್ಸಿ ಕಾಲಕ್ಕೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳಿದರು. ಆಗ ಇದ್ದಂತಹ ಎಮರ್ಜೆನ್ಸಿ ಬಗ್ಗೆ ನಾನು ಹೆಚ್ಚಿಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಆಗ ದಿಲ್ಲಿಯಿಂದ ಬಂದಂತಹ ಆದೇಶದ ಪ್ರಕಾರ ಶ್ರೀ ರಾಮಕೃಷ್ಣ ಹೆಗಡೆಯವರನ್ನೂ ಕೂಡ ಜೈಲಿನಲ್ಲೇ ಇಡಬೇಕಾಯಿತು. ಅವರು ಜೈಲಿನಲ್ಲಿದ್ದಾಗ, ಶ್ರೀ ದೇವರಾಜ್ ಅರಸ್ ಮತ್ತು ನಾವೆಲ್ಲಾ ಅವರಿಗೆ ಯಾವ ರೀತಿಯಿಂದಲೂ ಹಿಂಸೆಯಾಗದಂತೆ ನೋಡಿಕೊಂಡೆವು. ಅವರನ್ನು ಎಷ್ಟರಮಟ್ಟಿಗೆ ಚೆನ್ನಾಗಿ ನೋಡಿಕೊಳ್ಳಲಿಕ್ಕೆ ಸಾಧ್ಯವೋ ಅಷ್ಟರಮಟ್ಟಿಗೆ ಚೆನ್ನಾಗಿ ನೋಡಿಕೊಂಡೆವು. ಅವರನ್ನು ಎಷ್ಟರಮಟ್ಟಿಗೆ ನಾವು ಚೆನ್ನಾಗಿ ನೋಡಿಕೊಂಡೆವು ಎಂದರೆ, ಕರ್ನಾಟಕ

ಸರ್ಕಾರ ಹೆಗಡೆಯವರನ್ನು ವಿರೋಧಿ ರೀತಿ ಟ್ರೀಟ್ ಮಾಡದೇ, ಸ್ಟೇಟ್ ಗೆಸ್ಟ್ ಆಗಿ ಬಹಳ ಚೆನ್ನಾಗಿ ನೋಡಿಕೊಂಡರು ಎಂದು ಕೆಲವರು ದಿಲ್ಲಿಗೆ ದೂರನ್ನು ಕಳುಹಿಸಿದರು. ಜೈಲಿನಲ್ಲಿದ್ದ ಮಾತ್ರಕ್ಕೆ ಅವರಿಗೆ ಹಿಂಸೆ ಕೊಡಲಿಕ್ಕಾಗುವುದಿಲ್ಲ ಎಂದು ನಾವು ಹೇಳಿದೆವು. ಇವಿಷ್ಟು ನಾನು Finance Minister ಆಗಿದ್ದಾಗ ನಡೆದಂತಹ ಕೆಲವೊಂದು ಘಟನೆಗಳಾಗಿವೆ. ಆನಂತರ ಪಂಚಾಯತ್ ರಾಜ್ ವ್ಯವಸ್ಥೆ ಬಂದಾಗ ಕೂಡ, ಶ್ರೀಮಾನ್ ಹೆಗಡೆಯವರು ಮಾಡಿರತಕ್ಕಂಥ ಕೆಲಸಗಳನ್ನು ನಾವು ಎಂದು ಮರೆಯಲಿಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ, ಮೊದಲನೇ ಸಲ 1983–85ನೇ ವರ್ಷಗಳಲ್ಲಿ ಕರ್ನಾಟಕದಲ್ಲಿ ನೇರವಾಗಿ ಜಿಲ್ಲಾ ಪಂಚಾಯಿತಿಗಳಿಗೆ ಹಣ ಮತ್ತು ಸಿಬ್ಬಂದಿ ಕೊಟ್ಟು, ಆ ಮಟ್ಟದಲ್ಲಿ ಏನು ಕೆಲಸ ನಡೆಯುತ್ತದೆಯೋ ಅದನ್ನು ಅವರೇ ಮಾಡಬೇಕು ಎಂದು ಏನೊಂದು ಕಾನೂನನ್ನು ಮಾಡಿದರೋ, ಅದು ಖಂಡಿತವಾಗಿಯೂ ಕೂಡ ಪ್ರಗತಿಪರವಾದಂತಹ ಕಾನೂನಾಗಿತ್ತು. ಶ್ರೀ ರಾಜೀವ್ ಗಾಂಧಿಯವರ 72ನೇ ತಿದ್ದುಪಡಿ ಬರುವುದಕ್ಕಿಂತ ಮುಂಚೆ ಆಗಿರತಕ್ಕಂಥ ಕೆಲಸ ಇದಾಗಿತ್ತು. ಆ ವಿಚಾರವನ್ನು ನಾವ್ಯಾರೂ ಕೂಡ ಮರೆಯಲಿಕ್ಕೆ ಸಾಧ್ಯವಿಲ್ಲ. ನಾವು ಕೂಡ ಅದೇ ವಿಚಾರವನ್ನು ಇನ್ನುಷ್ಟು, ಬಹಳಷ್ಟು ಮುಂದೆ ತೆಗೆದುಕೊಂಡು ಹೋಗುವಂತಹ ಪ್ರಯತ್ನವನ್ನು ಮಾಡುತ್ತಿದ್ದೇವೆ. ಜಿಲ್ಲಾ ಮಟ್ಟಕ್ಕಷ್ಟೇ ಅಲ್ಲ, ಗ್ರಾಮ ಮಟ್ಟಕ್ಕೆ ಸಂಪೂರ್ಣವಾದಂತಹ ಅಧಿಕಾರ ಸಿಗಬೇಕು. ಸಿಬ್ಬಂದಿ ಆ ಮಟ್ಟದಲ್ಲಿ ಯಾವ್ಯಾವ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವಿದೆಯೋ ಅದನ್ನು ಅವರಿಂದಲೇ ಮಾಡಿಸಬೇಕು ಎಂಬುದೇ ಈ ಸರ್ಕಾರದ ಗುರಿಯಾಗಿದೆ. ಅದರಲ್ಲಿ ನಾವು ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತೇವೋ, ಅಷ್ಟರಮಟ್ಟಿಗೆ ಶ್ರೀ ರಾಮಕೃಷ್ಣ ಹೆಗಡೆಯವರ ಆತ್ಮಕ್ಕೆ ಕೂಡ ಶಾಂತಿ ಸಿಗುತ್ತದೆ ಎನ್ನುವುದು ನನ್ನ ನಂಬಿಕೆಯಾಗಿದೆ. ಮೂರನೆಯ ಘಟನೆಯೊಂದನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲೇಬೇಕು. ಅದೇನೆಂದರೆ, ಎಂಬತ್ತರ ದಶಕದಲ್ಲಿ ರಾಯಚೂರಿನಲ್ಲಿ ಒಂದು ಬೈ ಎಲೆಕ್ಷನ್ ಬಂದಾಗ, ನಾನು ಆ ಕಾಲಕ್ಕೆ ರಾಜಕೀಯದಿಂದ ಬಹಳ ದೂರದಲ್ಲಿದ್ದೆ. ಆದರೂ ಕೂಡ ಶ್ರೀ ರಾಜೀವ್ ಗಾಂಧಿಯವರು ನನ್ನನ್ನು ನೇರವಾಗಿ ಕರೆದು, ನೀನು ರಾಯಚೂರು ಬೈ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಬೇಕು ಎಂದು ಹೇಳಿದರು. ನಾನು ಸಾಕಷ್ಟು ವಿಚಾರ ಮಾಡದೇ, ಅದಕ್ಕೆ ಒಪ್ಪಿಗೆ ಕೊಟ್ಟೆ. ರಾಯಚೂರು ನನ್ನ ಕ್ಷೇತ್ರವಾಗಿರಲಿಲ್ಲ. ಬಳ್ಳಾರಿ ನನ್ನ ಕ್ಷೇತ್ರವಾಗಿತ್ತು. ಆಗ ಶ್ರೀ ರಾಮಕೃಷ್ಣ ಹೆಗಡೆಯವರು ಪಕ್ಷ ಅಧಿಕಾರದಲ್ಲಿತ್ತು. ಅವರು ಸ್ವತಃ ಸಾಕಷ್ಟು ಆ ಕ್ಷೇತ್ರದಲ್ಲಿ ನನ್ನನ್ನು ವಿರೋಧ ಮಾಡಿದರು. ಅವರು ಆ ರೀತಿ ವಿರೋಧ ಮಾಡಿದರೂ ಕೂಡ, ನನ್ನ ಸುದೈವದಿಂದ ಆ ಚುನಾವಣೆಯಲ್ಲಿ ನಾನು ಸೋಲಲಿಲ್ಲ. ನಾನು ಅಲ್ಲಿಂದ ಆರಿಸಿ ಬಂದು ದಿಲ್ಲಿಗೆ ಹೋದ ತಕ್ಷಣ, ನಾನು ಶ್ರೀ ರಾಜೀವ್ ಗಾಂಧಿಯವರಲ್ಲಿ ಒಂದು ಮಾತನ್ನು ಹೇಳಿದೆ. ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮನ್ನು ವಿರೋಧ ಮಾಡುತ್ತಿರಬಹುದು, ಆದರೂ ಕೂಡ ನನ್ನ ದೃಷ್ಟಿಯಲ್ಲಿ ಅಂತಹವರು ಕಾಂಗ್ರೆಸ್ ಪಕ್ಷದಲ್ಲಿ ಇರುವುದು ಸೂಕ್ತವೆಂದು ಅವರಿಗೆ ನಾನು ಹೇಳಿದೆ. ಆ ಮಾತು ಅವರಿಗೆ ಹಿಡಿಸಿತೋ, ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, secular forces ಗೆ ಸೇರಿದವರು, ಜಾತ್ಯಾತೀತವಾಗಿ, ಆಧುನಿಕವಾಗಿ ವಿಚಾರ ಮಾಡುವಂತಹ ಇಂತಹ ನಾಯಕರು ನ್ಯಾಯವಾಗಿ ಕಾಂಗ್ರೆಸ್‌ನಲ್ಲೇ ಇರಬೇಕು. ಹಲವಾರು ಕಾರಣಗಳಿಂದ ಕಾಂಗ್ರೆಸ್ ಪಕ್ಷದಿಂದ ಬೇರೆ ಪಕ್ಷಕ್ಕೆ ಹೋದ ತಕ್ಷಣ ಅವರು ನಮ್ಮವರು ಅಲ್ಲವೆಂದು ರಾಜಕೀಯವಾಗಿ ಭಾವನೆ ಮಾಡುವುದು ಸರಿ ಅಲ್ಲ ಎಂಬ ವಿಚಾರವನ್ನು ವ್ಯಕ್ತಪಡಿಸಿದೆ. ಈ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳದೆ ಹೋದರೆ ಇನ್ನೊಂದು

ಅವಕಾಶ ನನಗೆ ಇರುವುದಿಲ್ಲ ಎಂದು ಈ ಮಾತನ್ನು ಹೇಳಿದೆ. ಶ್ರೀ ರಾಮಕೃಷ್ಣ ಹೆಗಡೆಯವರೂ ನಾನು ಹಲವಾರು ವರ್ಷಗಳಿಂದ ಬಹಳ ಸ್ನೇಹಿತರು. ರಾಜಕೀಯದಲ್ಲಿ ಏನೇ ಆದರೂ ಕೂಡ ನಮ್ಮ ಸ್ನೇಹಕ್ಕೆ ಯಾವ ಕಾಲಕ್ಕೂ ಧಕ್ಕೆ ಬರಲಿಲ್ಲ. ಈ ಮಟ್ಟದಲ್ಲಿ ನಾವು ರಾಜಕೀಯ ಮಾಡುವುದಾದರೆ ಆಗ ನಮ್ಮ ದೇಶದ ಪ್ರಜಾಪ್ರಭುತ್ವ ಮತ್ತು ನಮ್ಮ ದೇಶದ ರಾಜಕೀಯ ವಾತಾವರಣವನ್ನು ತಿಳಿಯಾಗಿ ಉಳಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ಅವರು ಅಪಾರವಾಗಿ ಕೆಲಸ ಮಾಡಿದ್ದಕ್ಕಾಗಿ ನಾನು ಇವತ್ತು ನಾಲ್ಕು ಮಾತುಗಳನ್ನು ಹೇಳಿ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ನಾನು ಹಾರೈಸುತ್ತೇನೆ.

†ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, ಭಕ್ತ ಕನಕದಾಸರು ಒಂದು ಮಾತು ಹೇಳುತ್ತಾರೆ. ಸತ್ತವರಿಗೆ ಅಳಲೇಕೆ, ಅತ್ತವರು ಪೆದ್ದರು; ಸತ್ತು ಹೋಗುವರಲ್ಲದೆ ಉಳಿವರೇ, ಮರುಗಲೇಕಿನ್ನು ಮೃತ್ಯು ಬೆನ್ನಿನಲ್ಲಿಹುದು, ನಾನು ಇನ್ನು ಅತ್ತು ಮಾಡುವುದೇನು? ಪೂರ್ವದ ತೆತ್ತಿಗೆ ನನ್ನೀಗ ರಕ್ಷಿಸೋ ನನ್ನನನವರತ." ಎಂದು. ಒಬ್ಬ ಮನುಷ್ಯ ಸತ್ತ ಮೇಲೆ ನಾವು ಅತ್ತು ಏನೂ ಪ್ರಯೋಜನ ಇಲ್ಲ. ಆದರೆ ನಾವು ಮಾಡಬೇಕಾದುದು ಅವರ ಕಾರ್ಯಕ್ರಮ, ಅವರ ಆದರ್ಶ, ಅವರ ಸಿದ್ಧಾಂತ ಮತ್ತು ಅವರಲ್ಲಿ ಇರುವಂತಹ ಮನೋಭಾವದ ಬಗ್ಗೆ ಅನೇಕ ವಿಚಾರಗಳನ್ನು ಮುಂದಿಟ್ಟುಕೊಂಡು ನಾವು ಚರ್ಚೆ ಮಾಡುತ್ತಿದ್ದೇವೆ. ಅನೇಕ ಹಿರಿಯರು ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಗುಣಗಾನ ಮಾಡುವಂತಹ ಸಂದರ್ಭದಲ್ಲಿ ಅವರ ಜೊತೆಯಲ್ಲಿದ್ದವರು ಬಹಳ ಸ್ಪಷ್ಟವಾಗಿ ಏನು ಹೇಳಿದರೆಂದರೆ, ಯಾವಾಗಲೂ ಕೂಡ ಅವರು ಸ್ವಾಭಿಮಾನಕ್ಕೆ ಹೆಚ್ಚಿಗೆ ಒತ್ತನ್ನು ಕೊಟ್ಟುಕೊಂಡು ಸ್ವಾಭಿಮಾನವನ್ನು ಕಳೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ತಮ್ಮ ಕುಟುಂಬವನ್ನು ರಾಜಕೀಯದಿಂದ ಬಹಳ ದೂರ ಇಟ್ಟವರ ಪೈಕಿ ಇತ್ತೀಚಿನ ದಿನಗಳಲ್ಲಿ ಅವರೂ ಒಬ್ಬರು. ಬಹಳ ಹತ್ತಿರದಿಂದ ನಾನು ಅವರನ್ನು ನೋಡುವುದಕ್ಕೆ ಆಗಲಿಲ್ಲ. ಕಳೆದ ಐದಾರು ವರ್ಷಗಳಿಂದ ಏಳೆಂಟು ಬಾರಿ ಸುಮಾರು ಒಂದು ಒಂದೂವರೆ ಗಂಟೆಗಳ ಕಾಲ ಅವರ ಜೊತೆ ಭೇಟಿ ಮಾಡಿ ಅನೇಕ ಅನುಭವಗಳ ಬಗ್ಗೆ ಅವರ ಹತ್ತಿರ ಚರ್ಚೆ ಮಾಡಿ ಅವರ ಆಶೀರ್ವಾದ ಪಡೆಯುವುದಕ್ಕೆ ಹೋದಂತಹ ಸಂದರ್ಭದಲ್ಲಿ, ಅವರು ನನಗೆ ಒಂದು ಮಾತು ಹೇಳಿದರು. ಏನೆಂದರೆ, 'ರಾಜಕೀಯದ ಮೇಲೆ ನಿಂತಿರುವ ಸ್ನೇಹಕ್ಕಿಂತ ಸ್ನೇಹದ ಮೇಲೆ ನಿಂತಿರುವ ರಾಜಕೀಯ ಲೇಸು ಎಂದು ಒಂದು ಮಾತು ಹೇಳಿದರು. ಫ್ರೆಂಡ್‌ಷಿಫ್‌ನಿಂದ ರಾಜಕಾರಣ ಮಾಡದೆ ಬರೀ ರಾಜಕಾರಣವನ್ನೇ ಮುಂದಿಟ್ಟುಕೊಂಡು ಹೋದರೆ ಆ ರಾಜಕಾರಣ ಬಹಳ ಬದ್ಧವಾಗಿರುತ್ತದೆ ಎಂದು ಹೇಳಿದರು. ನಾನು ಪಾರ್ಲಿಮೆಂಟ್ ಚುನಾವಣೆಯಲ್ಲಿ ಸೋತ ಮೇಲೆ ನಾನು ಹೋದೆ; ಹೋದ ಸಂದರ್ಭದಲ್ಲಿ ಅವರಿಗೆ ಏಕೋ ಸ್ವಲ್ಪ ಮುಜುಗರವಾಗುತ್ತಿತ್ತು. ಯಾವ ರಾಜಕಾರಣಕ್ಕೂ ನಾನು ಬರಲಿಲ್ಲ, ಸುಮ್ಮನೆ ನಿಮ್ಮ ಆರೋಗ್ಯ ವಿಚಾರಿಸಲಿಕ್ಕೆ ಬಂದೆ ಎಂದು ಹೇಳಿದಾಗ, ಅವರು ಇನ್ನೊಂದು ಮಾತು ಹೇಳಿದರು; ನಾವು ರಾಜಕಾರಣದಲ್ಲಿ ಇರುವವರು; ಆಡಿ ತಪ್ಪಬಾರದು, ಓಡಿ ಹೋಗಿ ಸಿಗಬಾರದು, ಬೇಡಿ ತಿನ್ನಬಾರದು ಎಂದು. ಏನೂ ಕೂಡ ನಮಗೆ ಬೇಕೆಂದು ಹೋಗಬಾರದು, ಅದಾಗಿ ಅದು ನಮಗೆ ಬರಬೇಕು ಎನ್ನುವ ಮಾತನ್ನು ಅವರು ಹೇಳಿದರು. ಇವತ್ತು ಅನೇಕ ಶಿಷ್ಯ ವರ್ಗವನ್ನು ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಅವರು ತಯಾರು ಮಾಡಿದ್ದಾರೆ. ಅನೇಕ ಶಿಷ್ಯರೂ ಕೂಡ ಅವರ ಸ್ನೇಹಿತರು ಕೊನೆಯ ಗಳಿಗೆಯವರೆಗೂ ಕೂಡ ಬಹಳ ಚೆನ್ನಾಗಿ ಅವರ ನಿಷ್ಠೆಯನ್ನು ಈ

ಗಂಟೆಯವರೆಗೂ ಕೂಡ ಮಾಡಿ ತೋರಿಸಿದಂತಹ ಅನೇಕ ಸ್ನೇಹಿತರನ್ನು ನೋಡಿದ್ದೇವೆ. ನಾನು ಈ ಸಂದರ್ಭದಲ್ಲಿ ಭಗವಂತನಲ್ಲಿ ಪ್ರಾರ್ಥನೆ ಮಾಡುವುದು, ಅವರ ಕುಟುಂಬ ಮತ್ತು ಅವರ ಜೊತೆಯಲ್ಲಿ ಪ್ರಾಮಾಣಿಕವಾಗಿ ಕೊನೆಯ ಗಳಿಗೆಯವರೆಗೆ ಇದ್ದವರಿಗೆ ಭಗವಂತ ಅವರ ಅಗಲಿಕೆಯಿಂದ ಉಂಟಾಗಿರುವ ದುಃಖವನ್ನು ಸಹಿಸುವ ಶಕ್ತಿ ಕೊಡಲಿ ಎಂದು ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಭೇಟಿ ಮಾಡುವುದಕ್ಕೆ ಹೋದಾಗ ನಾನೂ ಕೂಡ ಜೊತೆಯಲ್ಲಿ ಇದ್ದೆ. ಸುಮಾರು ಒಂದು ಗಂಟೆ ಕಾಲ ಮಾನ್ಯ ಮುಖ್ಯ ಮಂತ್ರಿಗಳು ಅವರ ಕುಶಲ ವಿಚಾರಿಸುವಾಗ ಅವರಲ್ಲಿ ಇದ್ದ ಬಾಂಧವ್ಯ, ಸ್ನೇಹ, ಒಬ್ಬರಿಗೊಬ್ಬರು ತಬ್ಬಾಡಿದ ರೀತಿ ಇವೆಲ್ಲಾ ನೋಡಿದಾಗ ಒಂದು ಪ್ರೀತಿ, ಸ್ನೇಹ ಎಷ್ಟು ಅಚಲವಾಗಿ ನಿಂತಿದೆ ಎನ್ನುವುದಕ್ಕೆ ನನ್ನ ಎರಡು ಕಣ್ಣುಗಳು ಮಾತ್ರ ಸಾಕ್ಷಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಅವರು ಕೊನೆಯಲ್ಲಿ ಹೇಳಿದರು ಏನೆಂದರೆ ನಾನು ಏನು ಮಾಡಿದ್ದೇನೆ ಅದರಿಂದ ನನಗೆ ಸಮಾಧಾನ ಇದೆ, ನನ್ನ ಜೀವನದಲ್ಲಿ ನನಗೆ ಅವಕಾಶ ಸಿಕ್ಕಂತಹ ಸಂದರ್ಭದಲ್ಲಿ ಒಳ್ಳೆಯ ದಿನಗಳನ್ನು ನೋಡಿದ್ದೇನೆ, ಕೆಟ್ಟ ದಿನಗಳನ್ನೂ ನೋಡಿದ್ದೇನೆ. ಆ ಎರಡು ದಿನಗಳೂ ಕೂಡ ನನಗೆ ಸಮಾಧಾನ ತಂದಿವೆ. ನಾನು ಎಷ್ಟು ದಿನ ಇರುತ್ತೇನೆ, ಬಿಡುತ್ತೇನೆ ಅದು ಬೇರೆ ವಿಚಾರ. ಆದರೆ ನೀವುಗಳು ಯುವಕರು ನಿಮ್ಮ ಆದರ್ಶ ಬಿಟ್ಟು ಯಾರೂ ಹೋಗಬಾರದು. ಆದರ್ಶಕ್ಕೆ ಬದ್ಧರಾಗಿ ನಿಲ್ಲಬೇಕೆಂದು ಅವರು ಮಾರ್ಗದರ್ಶಕ ನೀಡಿದರು. ಆದ್ದರಿಂದ ನಾನು ಇವತ್ತು ಹೆಚ್ಚಿನ ವಿಚಾರಗಳ ಬಗ್ಗೆ ಚರ್ಚೆಗೆ ಹೋಗುವುದಿಲ್ಲ. ಒಂದು ಸಾರಿ ಶ್ರೀಮಾನ್ ಹೆಗಡೆಯವರು ನಾನು ಇರುವಂತಹ ಶಾಲೆಗೆ ಬಂದಿದ್ದರು; ಅಲ್ಲಿಗೆ ಬಂದಾಗ ವಿಸಿಟರ್ಸ್ ಬುಕ್‌ನಲ್ಲಿ ಬರೆದಿದ್ದಾರೆ. You live only once. So live in style' ಅವರ ಜೀವನ ಕೂಡ ಅದೇ ರೀತಿ ಇತ್ತು ಎಂಬುದನ್ನು ನಾವೆಲ್ಲಾ ನೋಡಿದ್ದೇವೆ. ಆದ್ದರಿಂದ ಅವರ ಮಾರ್ಗದರ್ಶನ, ಆದರ್ಶ ಜೀವನ ನಮ್ಮಂತಹ ಯುವಕರಿಗೆ ದಾರಿದೀಪವಾಗಿರಲಿ ಎಂದು ಹೇಳಿ ಭಗವಂತ ಅವರ ಕುಟುಂಬಕ್ಕೆ, ಅವರ ಸ್ನೇಹಿತರಿಗೆ ಎಲ್ಲರಿಗೂ ಶಾಂತಿ ಕೊಡಲಿ, ಎಂದು ಪ್ರಾರ್ಥಿಸಿ ತಾವು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ)**: ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ರಾಷ್ಟ್ರ ಮತ್ತು ನಮ್ಮ ರಾಜ್ಯಕ್ಕೆ ಒಂದು ಕರಾಳ ದಿನ. ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಬರೀ ರಾಜಕೀಯ ಮಾಡಲಿಲ್ಲ. ಸಮಾಜ ಸುಧಾರಕರಾಗಿ, ಬಸವಣ್ಣನವರ ತರಹ ಸಮಾಜದ ಏರುಪೇರುಗಳನ್ನು ತಿದ್ದಿ, ಸಮಾಜದ ಸಮಾನತೆಗೆ ಅವಿರತ ಸೇವೆ ಮಾಡಿದಂತಹ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಇವತ್ತು ನಮ್ಮನ್ನು ಅಗಲಿರುವುದು ಈ ರಾಷ್ಟ್ರಕ್ಕೆ ಮತ್ತು ರಾಜ್ಯಕ್ಕೆ ಆಗಿರುವಂತಹ ನಿಜವಾದ ಒಂದು ಅನ್ಯಾಯ. ನಾವು ವಿದ್ಯಾರ್ಥಿಗಳಾಗಿದ್ದಾಗ ಅವರ ಅನೇಕ ಪತ್ರಿಕಾ ಹೇಳಿಕೆಗಳನ್ನು ನೋಡಿದಾಗ ಅವರ ರಾಷ್ಟ್ರಪ್ರೇಮ, ರಾಜಕೀಯ ನಿಲುವು, ಅವರು ಮುಖ್ಯ ಮಂತ್ರಿಗಳಾಗಿದ್ದಾಗ, ಮಂತ್ರಿಗಳಾಗಿದ್ದಾಗ ಮಾಡಿದ ಅನೇಕ ರಾಜಕೀಯ ಸಿದ್ಧಾಂತಗಳನ್ನು ನೋಡಿದಾಗ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದರು, ಬೆಳಗಿನಿಂದ ಸಾಯಂಕಾಲದವರೆಗೆ ನಾವು ಸಭೆಯಲ್ಲಿ ಅನೇಕ ವಿಚಾರಗಳನ್ನು ಮಾತನಾಡುತ್ತಿದ್ದೆವು, ಜೊತೆಗೆ ವಿರಸವನ್ನು ಸಹ ಮಾಡುತ್ತಿದ್ದೆವು. ಕೊನೆಗೆ

ಅವರ ವಿಶ್ವಾಸವನ್ನು ಬಹಳ ಹತ್ತಿರದಿಂದ ನೋಡುತ್ತಿದ್ದೆವು ಎನ್ನುವ ಮಾತನ್ನು ಹೇಳಿದರು. ಅಂದರೆ ಅವರು ಸ್ನೇಹಜೀವಿಯಾಗಿದ್ದರು, ನಾಗರೀಕನಾಗಿ ರಾಷ್ಟ್ರದ ಅಭಿವೃದ್ಧಿಗೆ ತನ್ನದೇ ಆದ ಚಿಂತನೆ ಇಟ್ಟುಕೊಂಡು, ಛಾಪನ್ನು ಇಟ್ಟುಕೊಂಡು ರಾಜಕೀಯ ಮಾಡಿದಂತಹ ಒಬ್ಬ ಅಗ್ರಗಣ್ಯ ರಾಜಕಾರಣಿಯಾಗಿದ್ದರು. ಅಂತಹವರ ಅಗಲಿಕೆ ರಾಜ್ಯ ಮತ್ತು ರಾಷ್ಟ್ರಕ್ಕೆ ಇವತ್ತು ಕಪ್ಪು ದಿನವಾಗಿದೆ. ಆದರೆ ಅವರು ಮಾಡಿದ ರಾಜಕೀಯ ಸಿದ್ಧಾಂತಗಳು ಹಸಿರು ಕಾರ್ಡ್ ಆಗಿರಬಹುದು, ಹೆಣ್ಣುಮಕ್ಕಳಿಗೆ ಕೊಡುವ ರಿಸರ್ವೇಷನ್ ಆಗಿರಬಹುದು, ಅವೆಲ್ಲವನ್ನು ನೋಡಿದರೆ ಅವರಲ್ಲಿ ಬಡವರ ಬಗ್ಗೆ ಅಭಿವೃದ್ಧಿ ಬಗ್ಗೆ ಇರುವಂತಹ ಒಂದು ಚಿಂತನೆಯನ್ನು ನಾವು ಕಾಣಬಹುದಾಗಿದೆ. ಆ ಒಂದು ಆದರ್ಶವಾಗಿ ಇಟ್ಟುಕೊಂಡು ನಾವೆಲ್ಲಾ ಮುಂದಾಗಬೇಕಾಗಿದೆ. ಅಂತಹ ಒಂದು ಚೇತನ ನಮ್ಮಿಂದ ಅಗಲಿರುವುದು ನಮ್ಮ ರಾಜ್ಯಕ್ಕೆ ಮತ್ತು ನಮ್ಮ ರಾಷ್ಟ್ರಕ್ಕೆ ಆಗಿರುವಂತಹ ಅತೀವವಾದ ದುಃಖ ತಂದಿದೆ; ಆ ದುಃಖವನ್ನು ಭರಿಸುವಂತಹ ಶಕ್ತಿಯನ್ನು ಅವರ ಕುಟುಂಬಕ್ಕೆ ಪರಮಾತ್ಮ ಕೊಡಲಿ ಎಂದು ಪ್ರಾರ್ಥನೆ ಮಾಡಿಕೊಂಡು ತಾವು ತಂದಿರುವಂತಹ ಸಂತಾಪ ಸೂಚನೆಗೆ ನಾನೂ ಸಹ ಭಾಗಿಯಾಗಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ (ಕೋಲಾರ): ಮಾನ್ಯ ಅಧ್ಯಕ್ಷರೆ, ತತ್ವ, ಆದರ್ಶ ಸಿದ್ಧಾಂತ ಮತ್ತು ಮೌಲ್ಯಗಳು ನಶಿಸುತ್ತಿರುವ ಈ ಕಾಲದಲ್ಲಿ ಶ್ರೀಮಾನ್ ಹೆಗಡೆಯವರಂತಹವರು ಅಲ್ಲಿ ಇಲ್ಲಿ ಒಬ್ಬರು ಇಬ್ಬರು ಈ ದೇಶದಲ್ಲಿ ಇದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅವೊತ್ತು ಅವರು ಮುಖ್ಯಮಂತ್ರಿಗಳಾಗಿದ್ದಾಗ ಅದರಲ್ಲೂ 1983 ರಿಂದ 1985ರ ಅವಧಿ ಅದೊಂದು ಪರ್ವಕಾಲ. ಅವರು ಒಬ್ಬ ಕಾಂಗ್ರೆಸ್ಸೇತರ ಮುಖ್ಯಮಂತ್ರಿಗಳಾಗಿ ಎರಡು ವರ್ಷಗಳ ಕಾಲ ನಡೆಸಿದ ಮುಖ್ಯಮಂತ್ರಿಗಳ ಕೆಲಸ, ಆ ಕ್ಲಿಷ್ಟ ಪರಿಸ್ಥಿತಿಯಲ್ಲೂ ಕೂಡ ನಡೆಸಿದ ಕಾರ್ಯವೈಖರಿಯ ಬಗ್ಗೆ ಇವೊತ್ತು ಕೂಡ ನಾವು ಮೆಲಕು ಹಾಕುತ್ತೇವೆ. ಅದೇ ರೀತಿ ಶ್ರೀ ವೀರೇಂದ್ರ ಪಾಟೀಲರು ಕೂಡ ಹನ್ನೊಂದೂವರೆ ತಿಂಗಳುಗಳ ಕಾಲ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ ದಿನಗಳನ್ನು ಜನರು ಇಂದಿಗೂ ಕೂಡ ಈ ರಾಜ್ಯದಲ್ಲಿ ನೆನಸಿಕೊಳ್ಳುತ್ತಾರೆ ಎನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ. ಅವರು ನನ್ನನ್ನೂ ಸೇರಿದಂತೆ ಅನೇಕ ಜನರನ್ನು ಬೆಳೆಸಿದರು. 1994ರಲ್ಲಿ ನನಗೆ ಸೀಟು ಕೊಡಬೇಕಾದಾಗ ಅವರದೇ ಜಾತಿಯವರೊಬ್ಬರು ಇದ್ದರೂ ಕೂಡ, ಅಂದರೆ ಮಾಜಿ ಶಾಸಕರೊಬ್ಬರು ಇದ್ದರೂ ಕೂಡ ಕಡೆಯಲ್ಲಿ ನನಗೆ ಸೀಟು ಕೊಡುವುದರ ಮೂಲಕ ನಮ್ಮನ್ನು ಪಕ್ಷದಲ್ಲಿ ಗುರುತಿಸುವಂಥ ಅವರ ದೃಢ ಸಂಕಲ್ಪ ಅವರಲ್ಲಿತ್ತು ಎನ್ನುವುದನ್ನು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಮುಖ್ಯಮಂತ್ರಿ ಆಗಿದ್ದಂಥ ಕಾಲದಲ್ಲಿ ಒಂದು ಬಾರಿ ಬಳ್ಳಾರಿಯಲ್ಲಿ ಆ್ಯಕ್ಸಿಡೆಂಟ್ ಆಯಿತು. ಅವರು ಹೋದಂಥ ಹೆಲಿಕಾಫ್ಟರ್‌ನಲ್ಲಿ ಅಪಘಾತಕ್ಕೊಳಗಾದ ರೈತನನ್ನು ಬೆಂಗಳೂರಿಗೆ ಚಿಕಿತ್ಸೆಗೋಸ್ಕರ ಕಳುಹಿಸಿಕೊಡುತ್ತಾರೆ. ಯಾವ ಮಂತ್ರಿಗಳಾಗಿರಬಹುದು, ಶಾಸಕರಾಗಿರಬಹುದು ದಾರಿಯಲ್ಲಿ ಆ್ಯಕ್ಸಿಡೆಂಟ್ ಆದರೆ ನಾವು ಅಲ್ಲಿಯೇ ನಿಂತುಕೊಂಡರೆ ಪೋಲಿಸಿನವರು ನಮ್ಮ ಮೇಲೆಯೇ ಕೇಸ್ ಹಾಕುತ್ತಾರೇನೋ ಎನ್ನುವಂಥ ಭಾವನೆ ಇಟ್ಟುಕೊಂಡು ನಾವುಗಳು ಹೊರಟು ಹೋಗುವಂಥ

ಪರಿಸ್ಥಿತಿ ಇರುವಾಗ, ಅಂಥದ್ದರಲ್ಲಿ ಹೆಲಿಕಾಪ್ಟರ್‌ನ್ನು ಕೊಟ್ಟು ಆ ಪೇಶಂಟ್‌ನ್ನು ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕಳುಹಿಸಿಕೊಡುವಂಥ ಕೆಲಸವನ್ನು ಮಾಡಿದಂಥ ಮಾನ್ಯ ಹೆಗಡೆಯವರನ್ನು ನೆನೆದು ಕೊಳ್ಳಬೇಕಾದರೆ ಅವರಲ್ಲಿದ್ದಂಥ ಇಂಥ ಅನೇಕ ವಿಶೇಷ ಗುಣಗಳು ಕಾರಣ. ಅಂದು ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಶ್ರೀ ನಜೀರ್‌ಸಾಬ್ ಅವರ ಮುಖಾಂತರ ಜಿಲ್ಲಾ ಪಂಚಾಯತ್ ವ್ಯವಸ್ಥೆಯನ್ನು ಶ್ರೀಮಾನ್ ಹೆಗಡೆಯವರು ಏನು ತಂದರೋ ಅದನ್ನು ಇವೊತ್ತಿಗೂ ಕೂಡ ಇಡೀ ದೇಶ ಮೆಚ್ಚುತ್ತಿದೆ. ಅಂದರೆ ಅವರ ದೂರದೃಷ್ಟಿ ಬಹಳ ಮೆಚ್ಚುವಂಥದ್ದು. ಅವರು ಒಂದೇ ಒಂದು, ಮಾನ್ಯ ಬೈರೇಗೌಡರ ಜೊತೆಯಲ್ಲಿ ಟೇಪ್ ಹಗರಣವನ್ನು ಎದುರಿಸಿ, ಅವರು ಯಾವ ರೀತಿಯಲ್ಲಿ ಅದನ್ನು ಈ ರಾಜ್ಯದಲ್ಲಿ ತೆಗೆದುಕೊಂಡು 1985ರ ಚುನಾವಣೆಯಲ್ಲಿ ಮತ್ತೆ ಗೆದ್ದು ಬರಬೇಕಾದರೆ ಅವರ ಈ ದಿನಗಳನ್ನು ನೆನೆದುಕೊಂಡಾಗ ಮಾನ್ಯ ಹೆಗಡೆಯವರ ದೂರದೃಷ್ಟಿ ಇವೊತ್ತು ಇಲ್ಲ. ಇವೊತ್ತು ಆ ಚೇತನ ನಮ್ಮನ್ನು ಬಿಟ್ಟುಹೋಗಿದೆ. ಆದರೆ ಇಲ್ಲಿ ನೀವು ಸಮಯ ಹೆಚ್ಚು ಇಟ್ಟಿಲ್ಲ. ಇಂಥದ್ದಕ್ಕೆ ತಾವು ಹೆಚ್ಚು ಸಮಯ ಮಾತನಾಡಲು ಇಡಬೇಕಾಗುತ್ತದೆ. ಇವೊತ್ತು ಮಾನ್ಯ ಹೆಗಡೆಯವರ ಬಗ್ಗೆ ನಾವು ಹೆಚ್ಚು ಮಾತನಾಡಬೇಕಿತ್ತು.

ಅಧ್ಯಕ್ಷರು: ಹಲವಾರು ಮಾನ್ಯ ಸದಸ್ಯರುಗಳು ಮಾನ್ಯ ಹೆಗಡೆಯವರ ಪಾರ್ಥಿವ ಶರೀರದ ಮೆರವಣಿಗೆಯಲ್ಲಿ 12.30 ಗಂಟೆಗೆ ಭಾಗವಹಿಸಬೇಕಾಗಿದೆ ಎಂದು ಚೀಟಿಗಳನ್ನು ಬರೆದು ಕಳುಹಿಸುತ್ತಿದ್ದಾರೆ. ಆದಕಾರಣ ನಾನು ಸಮಯ ನಿಗದಿ ಮಾಡಿದ್ದು; ಬೇರೆ ಇನ್ನಾವ ಕಾರಣವೂ ಇಲ್ಲ.

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ: ಆಯಿತು ಅಧ್ಯಕ್ಷರೆ, ಇವೊತ್ತು ಶ್ರೀಮಾನ್ ಹೆಗಡೆಯವರು ಅವರ ಆದರ್ಶಗಳನ್ನು ಏನು ಬಿಟ್ಟು ಹೋಗಿದ್ದಾರೆ ಅದೇ ಆದರ್ಶಗಳಲ್ಲಿ ನಾವು ನಡೆದರೆ ಅವರಿಗೆ ನಾವು ಸಲ್ಲಿಸುವಂಥ ಕೃತಜ್ಞತೆಯಾಗುತ್ತದೆ ಎನ್ನುವಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಹೆಗಡೆಯವರು ಯಾವುದೇ ವಿಷಯದಲ್ಲಿ ಸ್ವಹಿತ, ಸ್ವಜನ ಹಿತ ಇಟ್ಟುಕೊಂಡಿರಲಿಲ್ಲ. ಅವರು ಮುಖ್ಯಮಂತ್ರಿಗಳಾಗಿದ್ದಾಗಲೂ ಕೂಡ ಪರ್ಸನಲ್ ಸೆಕ್ರೆಟರಿಯವರನ್ನು ಅವರ ಜಾತಿಯವರನ್ನು ಇಟ್ಟುಕೊಂಡಿರಲಿಲ್ಲ; ಮತ್ತು ಅವರ ಮಕ್ಕಳನ್ನೂ ಕೂಡ ರಾಜಕಾರಣಕ್ಕೆ ತಂದಿರಲಿಲ್ಲ. ಶ್ರೀ ಹೆಗಡೆಯವರ 73 ಅಥವಾ 74ನೇ ವರ್ಷದ ಹುಟ್ಟುಹಬ್ಬದವರೆಗೂ ನಾನು ಅವರ ಮಗನ ಮುಖವನ್ನು ನೋಡಿರಲಿಲ್ಲ. ಆದರೆ ಇವೊತ್ತಿನ ರಾಜಕಾರಣದಲ್ಲಿ ನಮ್ಮ ಮಕ್ಕಳು, ನಮ್ಮ ಅಳಿಯಂದಿರು, ನಮ್ಮ ಸೊಸೆಯರು ಬರಬೇಕೆನ್ನುವುದು ಇಂದಿನ ದಿನಗಳಲ್ಲಿ ಜಾಸ್ತಿಯಾಗುತ್ತಿದೆ. ಆದರೆ ಶ್ರೀ ಹೆಗಡೆಯವರು ಇವೊತ್ತಿನವರೆಗೂ ಕೂಡ ಅಂಥದ್ದರಿಂದ ದೂರವಿದ್ದು ಮೌಲ್ಯಾಧಾರಿತ ರಾಜಕಾರಣವನ್ನು ಮಾಡಿ ಇಂದಿಗೆ ನಮ್ಮನ್ನು ಬಿಟ್ಟುಹೋಗಿದ್ದಾರೆ. ಅವರ ಕುಟುಂಬದವರಿಗೂ ಹಾಗೂ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಹೆಗಡೆಯವರ ಹಿಂದೆ ಇದ್ದ ಜನರಿಗೆ ಭಗವಂತ ದುಃಖವನ್ನು ಭರಿಸತಕ್ಕ ಧೈರ್ಯವನ್ನು ತುಂಬಲಿ ಎಂದು ಹೇಳುತ್ತಾ ನನಗೆ ಎರಡು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು): ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನೆ ಪ್ರಸ್ತಾವಕ್ಕೆ ನನ್ನ ಬೆಂಬಲವನ್ನು ಸೂಚಿಸಿ, ಈ ರಾಷ್ಟ್ರದ ಚೈತನ್ಯಜ್ಯೋತಿ, ಧೀಮಂತ ನಾಯಕರಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು ನಮ್ಮನ್ನು ಇಂದು ಆಗಲಿದ್ದಾರೆ. ಅವರಿಗೆ ಒಂದು ಪರಂಪರೆ ಎಂಬುದು ಇತ್ತು. ಅವರ ಕುಟುಂಬ ವರ್ಗದವರೂ ಕೂಡ ಸ್ವಾತಂತ್ರ್ಯ ಚಳುವಳಿಯಲ್ಲಿ ಹೋರಾಟವನ್ನು ಮಾಡಿದ್ದರು. ಅವರು ದೊಡ್ಡ ಮನೆತನದಲ್ಲಿ ಹುಟ್ಟಿ ಆ ಸಂಸ್ಕಾರದ ಪ್ರತಿಫಲವಾಗಿ ಇವೊತ್ತು ಈ ರಾಷ್ಟ್ರದ ನೇತಾರರಾಗಿದ್ದು ಇಂದು ನಮ್ಮನ್ನು ಅಗಲಿ ಕಣ್ಮರೆಯಾಗಿದ್ದಾರೆ. ಅವರು 1983ರಲ್ಲಿ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯಾಗಿ ತಮ್ಮ ರಾಜಕೀಯ ಮೌಲ್ಯಗಳ ಒಂದು ವಿಷಯವನ್ನು ಮುಂದಿಟ್ಟುಕೊಂಡು ಈ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ದುಡಿದಂಥ ಮಹಾಚೇತನ ಶಕ್ತಿಯಾಗಿದ್ದರು. ಅವರಿಗೆ ಹಿಂದುಳಿದ ವರ್ಗದವರ ಬಗ್ಗೆ ಅಪಾರವಾದ ಗೌರವ ಇತ್ತು. ಉದಾಹರಣೆಗೆ ಹೇಳುವುದಾದರೆ, ಯಾವುದೇ ಮೀಸಲಾತಿ ಇಲ್ಲದಂಥ ಸಂದರ್ಭದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಧಿಕಾರ ವಿಕೇಂದ್ರೀಕರಣವನ್ನು ಮಾಡಿ ಆ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಹಿಂದುಳಿದ ವರ್ಗದವರನ್ನು, ಪರಿಶಿಷ್ಟ ಜನಾಂಗದವರನ್ನು ಜಿಲ್ಲಾ ಪರಿಷತ್ ಅಧ್ಯಕ್ಷರನ್ನಾಗಿ ಮಾಡಿದ್ದರೆ ಅವರು ಶ್ರೀ ರಾಮಕೃಷ್ಣ ಹೆಗಡೆಯವರು ಮಾತ್ರ. ಶ್ರೀ ರಾಮಕೃಷ್ಣ ಹೆಗಡೆಯವರು ಹಾಸನ ಜಿಲ್ಲೆಯಲ್ಲಿ ಪರಿಶಿಷ್ಟ ಜನಾಂಗದವರೊಬ್ಬರನ್ನು ಅಂದು ಅಧ್ಯಕ್ಷರನ್ನಾಗಿ ಮಾಡುವುದರ ಮುಖಾಂತರ ಹಿಂದುಳಿದ ವರ್ಗದವರಿಗೆ ನಾಯಕತ್ವವನ್ನು ರೂಪಿಸಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದ್ದರು. ಇವೊತ್ತು ನಾನೇನಾದರೂ ವಿಧಾನಸಭೆಗೆ ಬಂದಿದ್ದರೆ ಅವರ ಕೃಪಾಶೀರ್ವಾದದಿಂದಲೇ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಿಳಿಸಿ ಅವರ ಕುಟುಂಬ ವರ್ಗಕ್ಕೆ ಆ ಸಂತಾಪವನ್ನು ಭರಿಸುವ ಶಕ್ತಿಯನ್ನು ದೇವರು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಈಗಿನ ಮುಖ್ಯಮಂತ್ರಿಯವರನ್ನು ನಾನು ಅಭಿನಂದಿಸುತ್ತೇನೆ. ಯಾವುದಾದರೂ ಒಂದು ವಿಶ್ವವಿದ್ಯಾನಿಲಯಕ್ಕೆ ಹೆಗಡೆಯವರ ಹೆಸರನ್ನು ಇಡಬೇಕು. ಏಕೆಂದರೆ ಕರ್ನಾಟಕದ ಜನತೆಗೆ ಮಹಾ ಕೊಡುಗೆಯನ್ನು ಕೊಟ್ಟು ಹೋಗಿದ್ದಾರೆ ಹೆಗಡೆಯವರು. ನಮ್ಮ ಮುಖ್ಯಮಂತ್ರಿಗಳು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವೆಲ್ಲವೂ ನಿಜಕ್ಕೂ ನಿಜವಾದ ಸತ್ಯವಾಗಿವೆ. ಆದುದರಿಂದ ನಾನು ಇನ್ನೊಂದು ಬಾರಿ ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡಿ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ಹೆಗಡೆಯವರ ಹೆಸರನ್ನು ಇಡಬೇಕೆಂದು ಒತ್ತಾಯ ಮಾಡಬಯಸುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಚಂದ್ರಕಾಂತ್ ಜಿ ಬೆಲ್ಲದ್ (ಧಾರವಾಡ): ಮಾನ್ಯ ಅಧ್ಯಕ್ಷರೆ, ಈ ಸಂತಾಪ ಸೂಚನೆ ಪ್ರಸ್ತಾವವನ್ನು ತಾವೇನು ತಂದಿರಿ ಅದಕ್ಕೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈಗಾಗಲೇ ನಮ್ಮ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣರವರು ಕೆಲವೊಂದು ವಿಚಾರಗಳನ್ನು ತಿಳಿಸಿದ್ದಾರೆ. ಅದೇ ರೀತಿ ವಿರೋಧ ಪಕ್ಷದ ನಾಯಕರು ಹಾಗೂ ಅನೇಕ ನನ್ನ ಸ್ನೇಹಿತರುಗಳು ಮಾತನಾಡಿ, ಈ ರಾಜ್ಯದ ರಾಜಕಾರಣದಲ್ಲಿ ಹಾಗೂ ರಾಷ್ಟ್ರದ ರಾಜಕಾರಣದಲ್ಲಿ ಶ್ರೀಮಾನ್ ಹೆಗಡೆಯವರು ನೀಡಿದಂಥ

ಕೊಡುಗೆ ಬಗ್ಗೆ ಸಾಕಷ್ಟು ಮಾತನಾಡಿದ್ದಾರೆ. ನಾನೂ ಕೂಡ ಕೆಲವು ವಿಚಾರಗಳನ್ನು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ಮೊದಲು ಅಭಿನಂದಿಸುತ್ತೇನೆ. 1983ರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಕರ್ನಾಟಕದ ರಾಜಕಾರಣಕ್ಕೆ ಬಂದ ಕಾಲದಲ್ಲಿಯೇ ನಾನೂ ಕೂಡ ಈ ದೇಶದಲ್ಲಿ ಪ್ರಜಾಪ್ರಭುತ್ವದ ದೃಷ್ಟಿಯಿಂದ ಆಡಳಿತ ಮಾಡುವಂಥ ಒಂದು ಪಕ್ಷಕ್ಕೆ ಒಂದು ಪ್ರಾಮಾಣಿಕವಾದ ವಿರೋಧ ಪಕ್ಷ ಬೇಕು ಎನ್ನುವ ದೃಷ್ಟಿಯಿಂದ ಶ್ರೀ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಬಂದಂಥ ಜನಾತಾ ಪಕ್ಷದ ಅಭ್ಯರ್ಥಿಯಾಗಿ ನಾನು ರಾಜಕೀಯಕ್ಕೆ ಬಂದೆ. ನಾನು ಭಾಷಾ ಚಳುವಳಿಯ ಮುಖಾಂತರ ಧಾರವಾಡ ಮತ ಕ್ಷೇತ್ರದಿಂದ ಬಂದದ್ದು. ಬಹುಶಃ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ನಾನು ಸಮೀಪದಿಂದ ಬಲ್ಲದ್ದು ಅಂದರೆ, ಅವರು ಈ ರಾಜ್ಯದಲ್ಲಿ ಮೌಲ್ಯಾಧಾರಿತ ರಾಜಕಾರಣವನ್ನು ತರಬೇಕೆನ್ನುವಂಥ ಇಚ್ಛೆ ಇಟ್ಟುಕೊಂಡು ಬಂದಂಥವರು. ಏಕೆಂದರೆ ಈ ರಾಷ್ಟ್ರದ ರಾಜಕಾರಣದಲ್ಲಿ ಸಾಕಷ್ಟು ಅನುಭವ ಇರುವಂಥ ಒಬ್ಬ ಕರ್ನಾಟಕದ ರಾಜಕಾರಣಿಗಳಲ್ಲಿ ಸನ್ಮಾನ್ಯ ನಿಜಲಿಂಗಪ್ಪನವರಂತೆ, ಶ್ರೀಮಾನ್ ವೀರೇಂದ್ರ ಪಾಟೀಲರಂತೆ ಶ್ರೀ ರಾಮಕೃಷ್ಣ ಹೆಗಡೆಯವರು ಇಡೀ ರಾಷ್ಟ್ರದ ರಾಜಕಾರಣವನ್ನು ಬಲ್ಲಂಥ ಒಬ್ಬ ವ್ಯಕ್ತಿಯಾಗಿದ್ದರು. ಅವರು ಅನೇಕ ವರ್ಷಗಳಿಂದ ರಾಷ್ಟ್ರೀಯ ನಾಯಕರ ಜೊತೆಗೆ ಸ್ನೇಹವನ್ನು ಇಟ್ಟುಕೊಂಡು ಬಂದಿದ್ದರು. ಶ್ರೀ ಜಯಪ್ರಕಾಶ್ ನಾರಾಯಣ್, ಶ್ರೀ ಮುರಾರ್ಜಿ ದೇಸಾಯಿಯವರಂಥವರ ಸಂಪರ್ಕ ಇಟ್ಟುಕೊಂಡಿದ್ದರು. ರಾಷ್ಟ್ರೀಯ ನಾಯಕರು ಎಂದು ಶ್ರೀ ನಿಜಲಿಂಗಪ್ಪನವರನ್ನು ನಾವು ಏನು ಹೇಳುತ್ತೇವೋ ಅಂಥವರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ ಶ್ರೀಮಾನ್ ಹೆಗಡೆಯವರು ಮಂತ್ರಿಗಳಾಗಿ ಬಂದು ನಿಜಲಿಂಗಪ್ಪನರಲ್ಲಿರುವಂಥ ಅನೇಕ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಆಡಳಿತದಲ್ಲಿ ತರುವಂಥ ಪ್ರಯತ್ನವನ್ನು ಮಾಡಿದಂಥ ವ್ಯಕ್ತಿಯಾಗಿದ್ದರು. ಇವರು ಮಾಡಿದಂಥ ಅನೇಕ ಕಾರ್ಯಗಳ ಬಗ್ಗೆ ಈಗಾಗಲೇ ಕೆಲವರು ಸದನದಲ್ಲಿ ಹೇಳಿದ್ದಾರೆ. ನಾನೂ ಕೂಡ ಅವರ ಬಗ್ಗೆ ಏನು ಹೇಳಬಯಸುತ್ತೇನೆಂದರೆ ಅವರು ರಾಜ್ಯದಲ್ಲಿ ಹಾಗೂ ರಾಷ್ಟ್ರದ ಆಡಳಿತದಲ್ಲಿ ಮೌಲ್ಯವನ್ನು ತರಬೇಕೆನ್ನುವುದರ ಬಗ್ಗೆ ಸಾಕಷ್ಟು ಪ್ರಯತ್ನವನ್ನು ಶ್ರೀಮಾನ್ ಹೆಗಡೆಯವರು ಮಾಡಿದ್ದರು. ಅನುಷ್ಠಾನದಲ್ಲಿಯೂ ಕೂಡ ಅವುಗಳನ್ನು ತರುವುದಕ್ಕೆ ಪ್ರಯತ್ನ ಮಾಡಿದಂಥ ಒಬ್ಬ ರಾಜಕಾರಣಿ ಎಂದು ನಾವು ಹೇಳಬೇಕಾಗುತ್ತದೆ. ಇವೊತ್ತಿನ ದಿವಸ ನಾವು ರಾಜ್ಯದಲ್ಲಿ ಬಸವಣ್ಣನವರ ಆದರ್ಶವನ್ನು ನಾವು ಏನು ಹೇಳುತ್ತಿದ್ದೇವೆಯೋ ಇಂದು ರಾಜಕಾರಣದಲ್ಲಿ ಇರುವಂಥ ಪ್ರತಿಯೊಬ್ಬರು ಬಸವಣ್ಣನವರ ಫಿಲಾಸಫಿಯನ್ನು ಒಪ್ಪಿಕೊಂಡು ನಾವೆಲ್ಲರೂ ರಾಜಕಾರಣದಲ್ಲಿ ಇರಬೇಕಾಗುತ್ತದೆ. ಆ ಕೆಲಸಕ್ಕಾಗಿಯೇ ನಾವು ಬಂದಿದ್ದೇವೆ ಎಂದು ಹೇಳಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಮೊಟ್ಟಮೊದಲು ಕೂಡಲ ಸಂಗಮ ಪ್ರಾಧಿಕಾರವನ್ನು ರಚನೆ ಮಾಡಿದಂಥವರು ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು. ಆದರೆ ಅವರ ಕಾಲದಲ್ಲಿ ಆ ವರದಿ ಬರಲಿಲ್ಲ; ಅಥವಾ ಅದು ಅನುಷ್ಠಾನವಾಗಲಿಲ್ಲ.

12.40 ಪಿಎಂ

ಶ್ರೀ ಜೆ.ಹೆಚ್. ಪಟೇಲ್ ಅವರ ಕಾಲದಲ್ಲಿ ಅದನ್ನು ಅನುಷ್ಠಾನ ಮಾಡುವುದಕ್ಕೆ ಸಾಧ್ಯವಾಯಿತು. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವಾಗಬೇಕೆಂದು ಹೇಳಿ ಬಹಳ ವರ್ಷದಿಂದ ಬೇಡಿಕೆ ಇತ್ತು.

ನಾನು ಹೆಗಡೆಯವರ ಕಾಲದಲ್ಲಿ ಕೃಷಿ ವಿಶ್ವವಿದ್ಯಾಲಯ ಧಾರವಾಡದಲ್ಲಿ ಆಗಬೇಕು, ಮಣ್ಣಿನ ಮಕ್ಕಳಿಗೆ ಸತ್ವಶುದ್ಧ ಕಾಯಕ ಮಾಡುವಂತಹ ವಿಶ್ವವಿದ್ಯಾಲಯದ ಅಗತ್ಯ ಇದೆ ಎನ್ನುವ ಒತ್ತಡವನ್ನು ತಂದಾಗ ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯವನ್ನು ಅವರು ಮಾಡಿದ್ದನ್ನು ನಾವು ಸ್ಮರಿಸಿಕೊಳ್ಳಬೇಕಾಗುತ್ತದೆ. ಈಗ ಶ್ರೀ ಕುವೆಂಪು ಅವರ ಜನ್ಮಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ಅವರ ಹೆಸರಿನಲ್ಲಿ ಶಿವಮೊಗ್ಗದಲ್ಲೆ ಒಂದು ವಿಶ್ವವಿದ್ಯಾಲಯವನ್ನು ತೆರೆದರು. ನಾನು ಆಗ ಹೇಳಿದೆ ಇವತ್ತು ರಾಜ್ಯದಲ್ಲಿ ವಿಶ್ವವಿದ್ಯಾಲಯಗಳು ಬರುತ್ತಿವೆ; ಅದೇ ರೀತಿ ಮಣ್ಣಿನ ಮಕ್ಕಳ ಸಲುವಾಗಿ ಕೃಷಿ ವಿಶ್ವವಿದ್ಯಾಲಯ ಬೇಕೆಂದಾಗ ಅದನ್ನು ಮಾಡಿದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯವನ್ನೂ ಸಹ ಅವರ ಕಾಲದಲ್ಲಿ ಮಾಡಿದರು. ಅದನ್ನು ಸಹ ನೆನಪಿಸಿಕೊಳ್ಳಬೇಕಾಗುತ್ತದೆ. ಆಡಳಿತದ ವಿಕೇಂದ್ರೀಕರಣವನ್ನು ಮಾಡಿದಂತಹ ಒಬ್ಬ ಧೀಮಂತ ರಾಜಕಾರಣಿ; ರೈತರ ಬಗ್ಗೆ ಸಾಕಷ್ಟು ಕಾಳಜಿ ಇರುವಂತಹ ಒಬ್ಬ ರಾಜಕಾರಣಿ; ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒಂದು ಮಹತ್ವವನ್ನು ತಂದುಕೊಟ್ಟಂತಹ ಮುಖ್ಯಮಂತ್ರಿಗಳು ಎಂದರೆ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಎಂದು ಹೇಳಬೇಕಾಗುತ್ತದೆ. ಇವತ್ತಿಗೂ ನಾನು ಹೇಳುತ್ತಿದ್ದೇನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಹೆಚ್ಚು ಕೆಲಸವಾಗಬೇಕಾದರೆ ಅದನ್ನು ಕ್ಯಾಬಿನೇಟ್ ದರ್ಜೆಗೆ ಏರಿಸಬೇಕಾದಂತಹ ಅವಶ್ಯಕತೆ ಇದೆ. ಅಂಥಾದ್ದರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಮಹತ್ವವನ್ನು ತಂದುಕೊಟ್ಟಿದ್ದಾರೆ. ಇವತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬಸವಣ್ಣನವರ ಬಗ್ಗೆ ವಚನಗಳ ಸಂಪುಟ ಏನು ಬಂದಿದೆ ಅದು ಮಾನ್ಯ ರಾಮಕೃಷ್ಣ ಹೆಗಡೆಯವರಿಂದ ಬಂದಿದೆ. ರಾಷ್ಟ್ರಧರ್ಮ ದ್ರಷ್ಟಾರ ಹಾರ್ಡೇಕರ್ ಮಂಜಪ್ಪನವರ ಶತಮಾನೋತ್ಸವವನ್ನು ಸಹ ಮಾನ್ಯ ರಾಮಕೃಷ್ಣ ಹೆಗಡೆಯವರು ಮಾಡಿದರು. ಇಂತಹ ಅನೇಕ ಕಾರ್ಯಗಳನ್ನು ಅವರು ಮಾಡುವುದರ ಮೂಲಕ ಈ ರಾಜ್ಯದಲ್ಲೆ ಒಂದು ಮೌಲ್ಯಾಧಾರಿತ ರಾಜಕಾರಣವನ್ನು ತರುವುದಕ್ಕೆ ಅವರು ಪ್ರಯತ್ನ ಮಾಡಿ ಅನುಷ್ಠಾನಕ್ಕೆ ತಂದಂತಹ ರಾಜಕಾರಣಿ. ರಾಷ್ಟ್ರಕ್ಕೆ ಮಾದರಿಯಾದಂತಹ ರಾಜಕಾರಣವನ್ನು ತರಬೇಕೆಂದು ಪ್ರಯತ್ನ ಮಾಡಿದಂತಹ ರಾಜಕಾರಣಿ. ಒಂದು ಕಾಲದಲ್ಲಿ ಈ ದೇಶದ ಪ್ರಧಾನಮಂತ್ರಿಯಾಗುವಂತಹ ಸಾಮರ್ಥ್ಯ ಇದ್ದಂತಹ ವ್ಯಕ್ತಿ ಎಂದರೆ ಸನ್ಮಾನ್ಯ ರಾಮಕೃಷ್ಣ ಹೆಗಡೆ ಎನ್ನುವಂತಹ ಎತ್ತರಕ್ಕೆ ಬೆಳೆದಂತಹ ಒಬ್ಬ ರಾಜಕಾರಣಿ ಇವತ್ತು ನಮ್ಮಿಂದ ಅಗಲಿದ್ದಾರೆ. ಅವರ ಅಗಲಿಕೆಯಿಂದ ಕರ್ನಾಟಕ ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಂತಾಗಿದೆ ಎನ್ನುವಂತಹ ವಿಚಾರವನ್ನು ಹೇಳಿ, ಅವರ ಕುಟುಂಬದವರಿಗೆ ಹಾಗೂ ಹಿತಬಂಧುಗಳಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವಂತಹ ಶಕ್ತಿಯನ್ನು ದೇವರು ಕೊಡಲಿ, ಅವರ ಕಾರ್ಯದಲ್ಲಿ ನಾವೆಲ್ಲರೂ ನಡೆದುಕೊಳ್ಳುವುದರ ಮೂಲಕ ಅವರ ಆತ್ಮಕ್ಕೆ ಶಾಂತಿಯನ್ನು ಕೋಡೋಣ. ಸನ್ಮಾನ್ಯ ಮುಖ್ಯಮಂತ್ರಿಗಳು ಅವರ ಹೆಸರಿನಲ್ಲಿ ಪ್ರತಿಷ್ಠಾನ ಮಾಡುವಂತಹ ವಿಚಾರವನ್ನು ಹೇಳಿದ್ದಾರೆ. ಅದಕ್ಕೆ ಸರಿಯಾದಂತಹ ಸೂಚನೆಗಳನ್ನು ಅನೇಕ ಸ್ನೇಹಿತರು ಕೊಟ್ಟಿದ್ದಾರೆ. ಆ ದಿಸೆಯಲ್ಲಿ ಅದನ್ನು ಮಾಡಬೇಕೆಂದು ನಾನೂ ಕೂಡ ಸೂಚನೆಯನ್ನು ಕೊಟ್ಟು, ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ)**: ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಈ ಸಂತಾಪ ಸೂಚನೆಗೆ ನನ್ನ ಸಂಪೂರ್ಣವಾದಂತಹ ಬೆಂಬಲವನ್ನು ಸೂಚಿಸುತ್ತಾ, ಇದುವರೆಗೆ ನಮ್ಮನ್ನು ಅಗಲಿದಂತಹ ಮಾಜಿ ಮುಖ್ಯಮಂತ್ರಿ ಹಾಗೂ ಹಿರಿಯ ಮುತ್ಸದ್ದಿಗಳಾದಂತಹ ಶ್ರೀಯುತ ರಾಮಕೃಷ್ಣ ಹೆಗಡೆಯವರನ್ನು ಕುರಿತಂತೆ ಸದಸ್ಯರೆಲ್ಲರೂ ಮಾತನಡಿರುವುದಕ್ಕೆ ನಾನು ಸಹ ನನ್ನ ಅನುಮೋದನೆಯನ್ನು ಸೂಚಿಸುತ್ತಾ, ನಿಶ್ಚತವಾಗಿ ಅವರ ಆತ್ಮಕ್ಕೆ ಸದ್ಗತಿ ದೊರಕುತ್ತದೆ ಎನ್ನುವ ಸಂಪೂರ್ಣವಾದಂತಹ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ. ಏಕೆಂದರೆ ಅವರ ಜೀವನವನ್ನು ನೋಡಿದಾಗ ಅವರಿಗೆ ಸದ್ಗತಿ ದೊರಕುತ್ತದೆ ಎನ್ನುವ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸುತ್ತಾ, ಅವರ ಅಗಲಿಕೆಯಿಂದ ಆಗಿರುವಂತಹ ನೋವನ್ನು ಸಹಿಸುವಂತಹ ಶಕ್ತಿಯನ್ನು ನಮ್ಮೆಲ್ಲರಿಗೂ ದೇವರು ಕೊಡಲಿ ಎಂದು ಹೇಳುತ್ತಾ, ಒಂದೆರಡು ವಿಷಯಗಳನ್ನಷ್ಟೇ ನಾನು ಪ್ರಸ್ತಾಪ ಮಾಡುತ್ತೇನೆ. ಈಗಾಗಲೇ ಮಾನ್ಯ ಸದಸ್ಯರುಗಳು ಉಳಿದ ಎಲ್ಲಾ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ನಮ್ಮ ಉತ್ತರ ಕನ್ನಡ ಜಿಲ್ಲೆಯ ಕಾರವಾರದಲ್ಲಿ ನಿನ್ನೆ ಅವರನ್ನು ಕಳೆದುಕೊಂಡಿರುವಂತಹ ಸುದ್ದಿಯನ್ನು ಕೇಳಿದ ತಕ್ಷಣದಿಂದ ಒಂದು ವಿಶೇಷವಾದಂತಹ ನೋವನ್ನು ಅನುಭವಿಸುತ್ತಿದ್ದಾರೆ. ರಾಜ್ಯ ಹಾಗೂ ರಾಷ್ಟ್ರದ ಅವರ ಅಭಿಮಾನಿಗಳು ಯಾವ ರೀತಿಯಾಗಿ ದುಃಖವನ್ನು ಅನುಭವಿಸುತ್ತಿದ್ದಾರೋ, ಅದೇ ರೀತಿಯಾಗಿ ನಮ್ಮ ಜಿಲ್ಲೆಯ ಒಬ್ಬ ವ್ಯಕ್ತಿ, ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ತನ್ನದೇ ಆದಂತಹ ಛಾಪನ್ನು ಮೂಡಿಸಿ ನಮ್ಮ ಜಿಲ್ಲೆಗೆ ಕೀರ್ತಿ ಬರುವಂತಹ ರೀತಿಯಲ್ಲೆ ಅವರು ಹೆಜ್ಜೆಯನ್ನು ಹಾಕಿದ್ದಾರೆ. ಹಾಗಾಗಿ ನಮ್ಮ ಜಿಲ್ಲೆಯ ಜನ ಏನೋ ಕಳೆದುಕೊಂಡಿರುವಂತಹ ವಿಶೇಷ ನೋವನ್ನು ಅನುಭವಿಸುತ್ತಿದ್ದಾರೆ. ಇವತ್ತು ಅದ್ವಿತೀಯ ರಾಜಕೀಯ ಮುತ್ಸದ್ದಿಯಾಗಿದ್ದರು ಎಂದು ನಾವೆಲ್ಲರೂ ಕೊಂಡಾಡಿದ್ದೇವೆ. ನಮ್ಮ ರಾಜ್ಯದಲ್ಲಿ ನಮಗೆ ಗೊತ್ತಿದ್ದ ಹಾಗೆ ಸಿದ್ದಾಪುರ ಸ್ವಾತಂತ್ರ್ಯ ಹೋರಾಟಗಾರರ ಪ್ರಮುಖವಾದಂತಹ ಕೇಂದ್ರ. ಅಂಕೋಲ ನಮ್ಮ ಬಾರ್ಡೋಲಿ ಎಂದು ಕರೆಸಿಕೊಂಡರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿದ್ದಾಪುರ ಇನ್ನೊಂದು ಸ್ವಾತಂತ್ರ್ಯ ಹೋರಾಟಗಾರರ ದೊಡ್ಡ ಕೇಂದ್ರ. ಅಂತಹ ಒಂದು ಹಿನ್ನೆಲೆಯಿಂದ ಬಂದಂತಹವರು. ಹಾಗಾಗಿ ಜನತೆಗೆ ಯಾವ ರೀತಿ ಸೇವೆಯನ್ನು ಸಲ್ಲಿಸಬೇಕೆಂದು ಎಲ್ಲಾ ಹಿರಿಯರು ಮಾತನಾಡುತ್ತಿದ್ದರು; ಅದನ್ನು ಇವರು ಜಾರಿಯಲ್ಲಿ ತರುತ್ತಿದ್ದರು, ಮಾತಿನಲ್ಲಿ ಅವರ ಹೇಳಿಕೆಗಳು ಉಳಿಯುತ್ತಿರಲಿಲ್ಲ, ಅಂತಹ ಮುತ್ಸದ್ದಿಗಳು ಅವರಾಗಿದ್ದರು ಎಂದು ಹೇಳುತ್ತಾ, ಸಾರ್ವಜನಿಕ ಜೀವನದಲ್ಲಿ ಇರುವಂತಹ ವ್ಯಕ್ತಿಗಳಿಗೆ ಒಂದು ವ್ಯವಸ್ಥೆಗೆ ಹಾಗೂ ಒಂದೆರಡು ಸಂಕ್ಷಿಪ್ತ ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಮಾನ್ಯ ವೀರೇಂದ್ರ ಪಾಟೀಲರು ಗೌರವ ತರುವ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಅವರು ಒಬ್ಬ ವ್ಯಕ್ತಿ ಜೊತೆಯಲ್ಲಿ ವ್ಯಕ್ತಿಗೆ ಯಾವ ರೀತಿಯಾದಂತಹ ಗೌರವ ಸ್ಥಾನಮಾನ ಸಿಕ್ಕಿದೆ, ಒಂದು ವ್ಯವಸ್ಥೆಗೂ ಕೂಡ ಆ ರೀತಿ ಗೌರವದ ಸ್ಥಾನಮಾನ ಬರುವುದಕ್ಕೆ ಅವರು ಕಾರಣೀಭೂತರಾಗಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಕೊನೆಯಲ್ಲಿ ಒಂದೆರಡು ಸಂಕ್ಷಿಪ್ತ ವಿಷಯಗಳನ್ನು ಪ್ರಸ್ಥಾಪಿಸುತ್ತೇನೆ. ಮಾನ್ಯ ವೀರೇಂದ್ರ ಪಾಟೀಲರು ಹಾಗೂ ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಲವಕುಶರು ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದೇ ರೀತಿ ಇನ್ನೊಂದು ಮಾದರಿಯಾಗಿರುವಂತಾದ್ದು ಎಂದರೆ ಅವರು ರಾಜಕೀಯದಲ್ಲಿ ಒಬ್ಬೊಬ್ಬ ವ್ಯಕ್ತಿಗಳ ಬಗ್ಗೆ ಅವರು ಹೇಗೆ ಸ್ನೇಹಿತರಾಗಿ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡಿದ್ದರು ಎನ್ನುವ ಭಾವನೆಯನ್ನು ಹಂಚಿಕೊಂಡಿದ್ದೇವೆ. ಅವರು ಮತ್ತು ಅವರ ಅಣ್ಣ ಶ್ರೀ ಗಣೇಶ್ ಹೆಗಡೆ ಅವರ ಮಧ್ಯೆ ಇದ್ದಂತಹ

ಸಂಬಂಧ ನಮ್ಮೆಲ್ಲರಿಗೂ ಮಾದರಿ. ಅದೇ ರೀತಿ ಅವರು ಮತ್ತು ಅವರ ಅಕ್ಕಮಹಾದೇವಿ ತಾಯಿ ಅವರ ಜೊತೆಗಿನ ಸಂಬಂಧ ಕೂಡ ಮಾದರಿ. ನಾವೂ ಕೂಡ ಅಣ್ಣ-ತಮ್ಮ ಹಾಗೂ ಅಕ್ಕತಂಗಿಯವರನ್ನು ಹೊಂದಿದ್ದೇವೆ. ಆ ಸಂಬಂಧ ಕುರಿತಂತೆ ಇರುವಂತಹ ಭಾವನೆಗಳು ನಮ್ಮೆಲ್ಲರಿಗೂ ಕೂಡ ಅನುಕರಣೀಯ ಎನ್ನುವುದು ಅವರ ಪ್ರತಿಯೊಂದು ಚಟುವಟಿಕೆಗಳಲ್ಲಿ ವ್ಯಕ್ತವಾಗಿದೆ. ಇವತ್ತು ಅವರ ಅಣ್ಣ ಅನಾರೋಗ್ಯದಿಂದ ತೊಂದರೆಯಲ್ಲಿದ್ದಾರೆ. ಆದರೆ ಅವರ ಸಂಬಂಧ ನಮ್ಮೆಲ್ಲರಿಗೂ ಒಂದು ಮಾರ್ಗದರ್ಶನ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಶ್ರೀ ವೀರೇಂದ್ರ ಪಾಟೀಲ್ ಹಾಗೂ ಹೆಗಡೆಯವರು ಲವಕುಶರು ಇದ್ದ ಹಾಗೆ ಎಂದು ಹೇಗೆ ಹೇಳುತ್ತಿದ್ದರು, ಹಾಗೆ ಇವರು, ಮತ್ತು ಇವರ ಅಣ್ಣ ರಾಮಲಕ್ಷ್ಮಣರು ಇದ್ದ ಹಾಗೆ ಇದ್ದರೆನ್ನುವುದು ನಮ್ಮ ಜಿಲ್ಲೆಯಲ್ಲಿ ಮನೆಮಾತಾಗಿದೆ. ಅಷ್ಟೊಂದು ಸ್ನೇಹಪೂರ್ಣರಾಗಿರುವುದಿದೆ. ಇನ್ನು ಆಧ್ಯಾತ್ಮಿಕ ವಿಷಯದ ಬಗ್ಗೆ ಹೇಳುವುದಾದರೆ, ದೇವರು ಹಾಗೂ ಇತ್ಯಾದಿ ವಿಷಯದಲ್ಲಿ ನಂಬುತ್ತಾರೋ ಬಿಡುತ್ತಾರೋ ಎನ್ನುವಂತಹ ಚರ್ಚೆ ಹೊರಗೆ ನಡೆಯುತ್ತಿದ್ದು, ಇತ್ತೀಚೆಗೆ ಸಂವಿಧಾನಾತ್ಮಕ ಒಂದು ಪರಿವರ್ತನೆ ತರಬೇಕೆಂದು ಒಂದು ಸಮಿತಿ ರಚನೆಯಾದಾಗ ಸಂವಿಧಾನದಲ್ಲಿ ಆಧ್ಯಾತಿಕ ವಿಷಯವನ್ನು ಜೋಡಿಸಬೇಕೆಂದು ಒಂದು ವಿಚಾರ ಸಂಕೀರ್ಣ 'ಭಾರತೀಯ ವಿದ್ಯಾ ಭವನದಲ್ಲಿ ನಡೆಯಿತು. ನಾನು ಸಂಚಾಲಕನಾಗಿ ಆ ಕಾರ್ಯಕ್ರಮವನ್ನು ಜೋಡಿಸುವುದಕ್ಕೆ ಸುಣವಲ್ಲಿಯ ಪೂಜ್ಯ ಸ್ವಾಮೀಜಿಯವರು ಆದೇಶ ಮಾಡಿದ್ದರು. ಆಧ್ಯಾತ್ಮಿಕತೆಯ ಆ ಕಾರ್ಯಕ್ರಮದಲ್ಲಿ ಅವರೂ ಭಾಗವಹಿಸಿದ್ದರು. ಆಗ ಅವರು ಆಧ್ಯಾತ್ಮಿಕತೆಯ ವಿಷಯ ಇವತ್ತು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಮತ್ತು ಶಿಕ್ಷಣ ಪದ್ಧತಿಯಲ್ಲಿಯೂ ಬರಬೇಕೆಂದು ಅದರ ಮಹತ್ವವನ್ನು ಕುರಿತು ಮಾತನಾಡಿರುವಂತಾದ್ದು ನಿಜವಾಗಿಯೂ ನಮ್ಮೆಲ್ಲರ ಕಣ್ಣು ತೆರೆಸುವಂತಾದ್ದು. ರಾಜಕೀಯದಲ್ಲಿ ಇದ್ದು ನಾವು ಆ ವಿಷಯವನ್ನು ಮುಂದಿನ ಪೀಳಿಗೆಗೆ ಮುಂದುವರೆಸುವುದಕ್ಕೆ ಕೊಡಬೇಕಾದಂತಹ ಜವಾಬ್ದಾರಿ ನಮ್ಮಲ್ಲಿ ಇದೆ. ಹಿರಿಯ ಚೇತನ ನಮ್ಮನ್ನು ಆಗಲಿದಾಗ ನಮ್ಮೆಲ್ಲರ ಜವಾಬ್ದಾರಿ ಹೆಚ್ಚಾಗುತ್ತದೆ. ಅವರು ಕಂಡಂತಹ ಕನಸುಗಳನ್ನು ನನಸು ಮಾಡುವಂತಹ ಈ ಜವಾಬ್ದಾರಿಯನ್ನು ಸ್ವೀಕರಿಸುವಂತಹ ಕ್ಷಣ ಇದಾಗಲಿ ಹಾಗೂ ಆ ರೀತಿ ಸಂಕಲ್ಪವನ್ನು ಮಾಡುವಂತಹ ಕ್ಷಣ ಇದಾಗಲಿ ಎಂದು ಹೇಳುತ್ತಾ, ತಾವು ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದವನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ದಿವಂಗತರಾದ ಶ್ರೀಯುತ ರಾಮಕೃಷ್ಣ ಹೆಗಡೆಯವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಘಂಟೆಯವರಿಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 12 ಘಂಟೆ 48 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ದಿ: 14.1.04 ರಂದು ಬುಧವಾರ ಬೆಳಿಗ್ಗೆ 10.30ಕ್ಕೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

---

†ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

* * *